CC-O. In Public Domain. Digitized by eGangotri

ಕ್ರಿಯಾಶಕ್ತಿ ವಿದ್ಯಾರಣ್ಯ

ಒಂದು ಕಟ್ಟುಕಥೆಯ ಸಮೀಕ್ಷೆ

ತ. ರಾ. ಸು.

ವಿದ್ಯಾಶಂಕರ ಪ್ರಕಾಶನ
ಮೈಸೂರು–೪

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಕ್ರಿಯಾಶಕ್ತಿ ವಿದ್ಯಾರಣ್ಯ

ಒಂದು ಕಟ್ಟುಕಥೆಯ ಸಮೀಕ್ಷೆ

ತ. ರಾ. ಸು.

ವಿದ್ಯಾಶಂಕರ ಪ್ರಕಾಶನ
ಮೈಸೂರು–೪

Sri Vidyabharathi Book Centre, Sringeri

CC-O. In Public Domain. Digitized by eGangotri

'Kriyasakti Vidyaranya' A Review in Kannada by Tarasu

Copyright Smt. Ambuju Tarasu

Published by Smt. Lakshminarasu
Vidya Shankara Prakashana
No. 30, Deviramani Agrahar
Mysore-4

First Edition - 1974
Price Rs. 2-00

Parimala Press Mysore-4

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಕಾಶಕರ ಅರಿಕೆ

ಯುಗ ಪ್ರವರ್ತಕರೂ ವಿಜಯನಗರ ಸಾಮ್ರಾಜ್ಯ ಸಂಸ್ಥಾಪಕರೂ ಆದ ಶ್ರೀ ವಿದ್ಯಾರಣ್ಯ ಮಹಾಸ್ವಾಮಿಗಳವರ ಪೂರ್ವ ಚರಿತ್ರೆಯನ್ನು ಕುರಿತು ಅನೇಕ ವಾದವಿವಾದಗಳು ಪ್ರಚುರವಾಗಿವೆ. ಹೈಕೋರ್ಟಿನ ನಿವೃತ್ತ ನ್ಯಾಯಾಧೀಶರಾದ ಶ್ರೀ ಟಿ. ಎನ್. ಮಲ್ಲಪ್ಪನವರು, ಬೆಂಗಳೂರಿನ ಮಿಥಿಕ್ ಸೊಸೈಟಿಯ ತ್ರೈಮಾಸಿಕ ಪತ್ರಿಕೆಯಲ್ಲಿ ಇಂಗ್ಲಿಷಿನಲ್ಲಿಯೂ, ಕನ್ನಡ ಸಾಹಿತ್ಯ ಪರಿಷತ್ತಿನ ತ್ರೈಮಾಸಿಕ ಪತ್ರಿಕೆಯಲ್ಲಿ ಕನ್ನಡದಲ್ಲಿಯೂ ಲೇಖನಗಳನ್ನು ಬರೆದು, ಕ್ರಿಯಾಶಕ್ತಿಯೆಂಬ ಶೈವ ಗುರುವೇ ವಿದ್ಯಾರಣ್ಯರಾದರೆಂಬ ಸಿದ್ಧಾಂತವನ್ನು ಮಂಡಿಸಿದ್ದಾರೆ.

ಸುಪ್ರಸಿದ್ಧ ಸಾಹಿತಿಗಳಾದ ಶ್ರೀಯುತ ತರಾಸುರವರು, ಶ್ರೀಯುತರ ನಿರ್ಧಾರವನ್ನು ಮೂಲಸಾಮಗ್ರಿಗಳಿಂದಲೇ ವಿಶ್ಲೇಷಿಸಿ, ಅವರವಾದಗಳನ್ನೆಲ್ಲಾ ಕೂಲಂಕಷವಾಗಿ ವಿಮರ್ಶಿಸಿ, ವಿಪುಲವಾದ ಆಧಾರಗಳನ್ನಿತ್ತು 'ಕ್ರಿಯಾಶಕ್ತಿ ವಿದ್ಯಾರಣ್ಯ' ಸಿದ್ಧಾಂತವನ್ನು ಸಂಪೂರ್ಣವಾಗಿ ಆಸ್ಫೋಟನಗೊಳಿಸಿದ್ದಾರೆ.

ಗಾತ್ರದಲ್ಲಿ ಕಿರಿದಾದರೂ ಮಹತ್ವಪೂರ್ಣವಾದ ಈ ಕೃತಿಯನ್ನು ಪ್ರಕಟಿಸಲು ಅನುಮತಿಯಿತ್ತ ಶ್ರೀ ತರಾಸುರವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಈ ಕೃತಿ ಪ್ರಕಾಶನಕ್ಕೆ ನೆರವಾದ ಹಿರಿಯರಿಗೆ ನಮ್ಮ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇವೆ.

ಮೈಸೂರು-4 — ಪ್ರಕಾಶಕರು
1-11-74

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

" ಕ್ರಿಯಾಶಕ್ತಿ - ವಿದ್ಯಾರಣ್ಯ "

ಒಂದು ಕಟ್ಟುಕಥೆಯ ವಿಮರ್ಶೆ

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

"ಕ್ರಿಯಾಶಕ್ತಿ - ವಿದ್ಯಾರಣ್ಯ"

ಇತ್ತೀಚೆಗೆ ನಾನು ಶ್ರೀ ವಿದ್ಯಾರಣ್ಯರ ಜೀವನವನ್ನು ಕುರಿತು ಒಂದು ಗ್ರಂಥವನ್ನು ಬರೆಯಬೇಕೆಂದು ವಿಷಯ ಸಂಗ್ರಹ ಮಾಡುತ್ತಿದ್ದಾಗ, ಬೆಂಗಳೂರಿನ "ಮಿಥಿಕ್ ಸೊಸೈಟಿ"ಯ ತ್ರೈಮಾಸಿಕ ಪತ್ರಿಕೆಯ 1969-70ರ ಸಂಚಿಕೆಗಳಲ್ಲಿ, ಬೆಂಗಳೂರಿನ ನಿವೃತ್ತ ಹೈಕೋರ್ಟು ನ್ಯಾಯಾಧೀಶರಾದ, ವೇದ ವೇದಾಂತ ವಿದ್ಯಾವಾಚಸ್ಪತಿ ಶ್ರೀ ಟಿ. ಎನ್. ಮಲ್ಲಪ್ಪನವರು[1] ಬರೆದ "ಕ್ರಿಯಾಶಕ್ತಿ-ವಿದ್ಯಾರಣ್ಯಶ್ರೀಪಾದ-ವಿಜಯನಗರದ ಸಾಮ್ರಾಜ್ಯ ಸಂಸ್ಥಾಪಕ" ಎನ್ನುವ ಸುದೀರ್ಘವಾದ ಲೇಖನವೊಂದು ನನ್ನ ಗಮನಕ್ಕೆ ಬಂದಿತು. ಅದರಂತೆ ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದಿಂದ ಮುದ್ರಿತವಾದ 'ಹೊಯ್ಸಳ ಡೈನಾಸ್ಟಿ'[2] ಎನ್ನುವ ಗ್ರಂಥದಲ್ಲಿ ಅಚ್ಚಾದ ಡಾ. ಎಂ. ವಿ. ಕೃಷ್ಣರಾಯರಿಂದ ರಚಿತವಾದ 'ವೀರಬಲ್ಲಾಳ III ಮತ್ತು ವಿಜಯನಗರ

1 ಮುಂದೆ "ಲೇಖಕರು" ಎಂದು ಸಂಬೋಧಿಸಲಾಗಿದೆ.

2 "The Hoysala Dynasty" Ed. by Dr. B Shelk Ali-Prasaranga, University of Mysore, Mysore (1972)- pages 326-328.

Sri Vidyabharathi Book Centre, Sringeri

CC-O. In Public Domain. Digitized by eGangotri

ಸಾಮ್ರಾಜ್ಯಸ್ಥಾಪನೆ' ಎನ್ನುವ ಲೇಖನವನ್ನು ನೋಡಿದೆ. ನನ್ನ ವಿಷಯಕ್ಕೆ ಅಗತ್ಯವಾಗಿದ್ದುದರಿಂದ ಮತ್ತು ಹೊಸ ಸಿದ್ಧಾಂತವೊಂದನ್ನು ಪ್ರತಿಪಾದಿಸುತ್ತಿದ್ದುದರಿಂದ, ಈ ಎರಡು ಲೇಖನಗಳನ್ನೂ ಅತ್ಯಂತ ಎಚ್ಚರಿಕೆಯಿಂದ ಆಮೂಲಾಗ್ರವಾಗಿ ಓದಿ ನೋಡಿದೆ. ಈ ಎರಡು ಲೇಖನಗಳಲ್ಲಿ, ಡಾ|| ಎಂ. ವಿ. ಕೃಷ್ಣರಾಯರ ಲೇಖನ, ತಮ್ಮ ಸಿದ್ಧಾಂತಕ್ಕೆ ಯಾವ ಆಧಾರವನ್ನೂ ಕೊಟ್ಟಿಲ್ಲವಾದರೂ ಶ್ರೀ ಮಲ್ಲಪ್ಪನವರ ವಾದವನ್ನೇ ಎತ್ತಿ ಹಿಡಿದಿರುವುದರಿಂದ ; ಅಲ್ಲದೆ ಅದನ್ನು ಬರೆದ ರೀತಿಯೂ ಪ್ರಾಮಾಣಿಕ ವಿಮರ್ಶೆಗೆ ಅನರ್ಹವಾಗಿರುವುದರಿಂದ, ಆ ಲೇಖನದ ವಿಮರ್ಶೆ ಅನಗತ್ಯ ಎಂದೇ ಭಾವಿಸಿ, ಪ್ರಕೃತ ಪರಿಶೀಲನೆಗೆ ಅದನ್ನು ತಳ್ಳಿಹಾಕಿದ್ದೇನೆ.

ಈ ಲೇಖಕರು, ಸುಮಾರು 64 ಪುಟಗಳಷ್ಟು ಸುದೀರ್ಘವಾದ ಲೇಖನದಲ್ಲಿ, ತಮ್ಮ ಸಿದ್ಧಾಂತವನ್ನು ಪ್ರತಿಪಾದಿಸಲು ಸಾಕಷ್ಟು ಶ್ರಮಪಟ್ಟಿದ್ದಾರೆ. ಹಲವಾರು ಆಧಾರಗಳನ್ನು ಅಧ್ಯಯನಮಾಡಿದ್ದಾರೆ; ವಿಷಯಕ್ಕೆ ಸಂಬಂಧಪಟ್ಟ ಶಾಸನಗಳ ಸಾಹಿತ್ಯದ ಪರಿಶೀಲನೆ ಮಾಡಿದ್ದಾರೆ. ಇವೆಲ್ಲದರ ಫಲವಾಗಿ ವಿಜಯನಗರದಸಂಸ್ಥಾನ ಮತ್ತು ಶೃಂಗೇರಿ ಮಠದ ಸಂಸ್ಥಾಪಕ ಶ್ರೀ ವಿದ್ಯಾರಣ್ಯರು, ಅವರ ಸಮಕಾಲೀನರಾಗಿದ್ದ ಶ್ರೀಕ್ರಿಯಾಶಕ್ತಿ ಆಚಾರ್ಯ ಎಂಬ ಅದ್ಭುತ ಸಿದ್ಧಾಂತವನ್ನು ಸೃಷ್ಟಿಸಿದ್ದಾರೆ. ಅವರ ಸಿದ್ಧಾಂತ ಸರಮಾಲೆ ಅಲ್ಲಿಗೆ ನಿಲ್ಲದೆ, ಶತಶತಮಾನಗಳಿಂದಲೂ ಶ್ರೀ ಶಂಕರ ಅದ್ವೈತ ಪರಂಪರೆಗೆ ಸೇರಿದ ಪೀಠವೆಂದು ನಂಬಲ್ಪಟ್ಟಿರುವ ಶೃಂಗೇರಿಯ ಶ್ರೀ ಪೀಠ, "ಸುಮಾರು 16 ನೇ ಶತಮಾನದವರೆಗೂ ರೇವಣಸಿದ್ಧರ ಜಂಗಮ ಸಂಪ್ರದಾಯವನ್ನು ಅನುಸರಿಸುತ್ತಿತ್ತು" ಎನ್ನುವ ದಿಗ್ಭ್ರಾಂತಿಕಾರಕವಾದ, 'ಕೋಲಾಹಲಕರ' ಸಿದ್ಧಾಂತ ಮುಕ್ತಾಫಲವನ್ನು ಜಗತ್ತಿನ ಮುಂದೆ ಮಂಡಿಸಿದ್ದಾರೆ. ಈ ಸಿದ್ಧಾಂತ ಸಾಧನೆಗಾಗಿ ಲೇಖಕರು ಹಲವಾರು ಆಗತ್ಯ-ಅನಗತ್ಯ, ಸಾಧಾರ-ಕಾಲ್ಪನಿಕ ಪೋಷಕಾಂಶಗಳನ್ನು ಓತಪ್ರೋತವಾಗಿ ಉದಹರಿಸಿದ್ದಾರೆ. ಇತಿಹಾಸಾಭ್ಯಾಸಿಯಲ್ಲದ ಓದುಗನನ್ನು ದಿಗ್ಭ್ರಮೆಗೊಳಿಸುವಂತೆ ವಾದವಿವಾದಗಳ ಗೊಂಡಾರಣ್ಯವನ್ನೇ ಸೃಷ್ಟಿಮಾಡಿದ್ದಾರೆ. 'ಪ್ರತೀಂದ್ರಂ ಕರಿಷ್ಯಾಮಿ' ಎನ್ನುವ ವಿಶ್ವಾಮಿತ್ರನ ದುಸ್ಸಾಹಸ ಸಂತಾನಕ್ಕೆ ಸೇರಿದ ಅಮಿತೋತ್ಸಾಹವನ್ನು ತಮ್ಮ ಲೇಖನದ ಉದ್ದಕ್ಕೂ ಮೆರೆದಿದ್ದಾರೆ. ಇವರ ಅಪಾರ ಅಧ್ಯಯನ, ಅಸೀಮ ಶ್ರದ್ಧೆ, ಪ್ರಚಂಡ ಉತ್ಸಾಹ, ಕರ್ನಾಟಕದ

Sri Vidyabharathi Book Centre, Sringeri

CC-O. In Public Domain. Digitized by eGangotri

ಇತಿಹಾಸದ ಒಂದು ಸಂದೇಹಗ್ರಸ್ತ ಅಧ್ಯಾಯದ ಮೇಲೆ ನಿರ್ದೋಷವಾದ, ಸತ್ಯಪೋಷಿತವಾದ, ತರ್ಕಶುದ್ಧವಾದ ಬೆಳಕನ್ನು ಚೆಲ್ಲಿದ್ದರೆ, ಇವರ ಪ್ರಯತ್ನ ವನ್ನು ಹೃತ್ಪೂರ್ವಕವಾಗಿ ಸ್ವಾಗತಿಸಬಹುದಾಗಿತ್ತು. ಆದರೆ ಕನ್ನಡಿಗರ ದುರಾದೃಷ್ಟ-ಇವರ ಸಾಹಸದ ಫಲ ಭಯಂಕರ ಗೊಂದಲ, ನಿರಾಶೆ, ಆಧಾರ ಹೀನ ಕೋಲಾಹಲ, ಐತಿಹಾಸಿಕ ಸತ್ಯಕ್ಕೆ ಘೋರ ಅಪಚಾರ. ಶ್ರೀ ಮಲ್ಲಪ್ಪ ನವರ ಲೇಖನ ಒಂದೊಂದು ವಿವರದಲ್ಲೂ ದೋಷಪೂರ್ಣವಾಗಿದೆ, ಭ್ರಮಾ ಜನಿತವಾಗಿದೆ, ಆಧಾರಗಳ ಅಪಾರ್ಥವಾಗಿದೆ ; ಎಂತಲೇ ಇವರ ಲೇಖನದಿಂದ ಕನ್ನಡ ಜನತೆಯಲ್ಲಿ ತಪ್ಪು ಕಲ್ಪನೆ ಮೂಡಬಹುದಾದುದನ್ನು ತಡೆಗಟ್ಟುವ ಏಕೈಕ ಉದ್ದೇಶದಿಂದ ಅವರ ಲೇಖನಕ್ಕೆ ಇಷ್ಟು ದೀರ್ಘವಾದ ವಿಮರ್ಶೆಯನ್ನು, ವಿಮರ್ಶಾತ್ಮಕ ಉತ್ತರವನು ಬರೆಯಬೇಕಾಗಿ ಬಂದಿದೆ.

ಈ ಲೇಖಕರು ತಮ್ಮ ಲೇಖನವನ್ನು, ಸುಮಾರು 30 ವರ್ಷಗಳ ಕೆಳಗೆ ಫಾದರ್ ಹೆರಾಸ್‌ರವರು ತಮ್ಮ "ವಿಜಯನಗರ ಸಾಮ್ರಾಜ್ಯ ಸ್ಥಾಪಕರು" (Founders of Vijayanagar Empire) ಎಂಬ ಗ್ರಂಥ ದಲ್ಲಿ ಶೃಂಗೇರಿಯ ಪೀಠದ ಬಗ್ಗೆ ಮಾಡಿದ ಅಸಹ್ಯ, ಅಸಭ್ಯ, ಕುತ್ಸಿತ ಆಪಾದನೆಗ ಳನ್ನು 'ಶಿಲುಬೆಗೇರಿಸಿ', ಶೃಂಗೇರಿಯ ಬಗ್ಗೆ ಶ್ರೀ ವಿದ್ಯಾರಣ್ಯರೇ ವಿಜಯನಗರ ಸಾಮ್ರಾಜ್ಯದಸಂಸ್ಥಾಪಕರು ಎನ್ನುವ ಬಗ್ಗೆ ಇರುವ ಸಂದೇಹವನ್ನು ನಿವಾರಣೆ ಮಾಡಿ, ಸತ್ಯವನ್ನು ಸ್ಥಾಪಿಸುವುದೇ ತಮ್ಮ ಗುರಿ ಎಂದು ಹೇಳಿದ್ದಾರೆ. ಇದು ಬಹು ಸ್ತುತ್ಯವಾದ ಆದರ್ಶ, ಮೆಚ್ಚಬೇಕಾದ ಮಾತು.

ಇತಿಹಾಸ ಸಂಶೋಧನೆ ಬಹು ಕಷ್ಟಸಾಧ್ಯವಾದ ಕೆಲಸ; ಕತ್ತಿಯ ಅಲಗಿನ ಮೇಲೆ ನಡೆಯುವಂತಹ ಕಾರ್ಯ. ಈ ಕಾರ್ಯದಲ್ಲಿ ಯಾವುದೇ ಪೂರ್ವಾಗ್ರಹವಾಗಲೀ, ಪೂರ್ವನಿಯೋಜಿತ ಸಿದ್ಧಾಂತವನ್ನು ಹೇರುವ ಉತ್ಸಾಹ ವಾಗಲೀ ಸಲ್ಲದು. ಇರುವ ಮೂಲಸಾಮಗ್ರಿಗಳ ಕೂಲಂಕಷ, ಪ್ರಾಮಾಣಿಕ, ನಿಷ್ಪಕ್ಷಪಾತವಾದ ತಲಸ್ಪರ್ಶಿ ಅಧ್ಯಯನ, ಆ ಅಧ್ಯಯನದಿಂದ ಸಿದ್ಧವಾಗುವ ಫಲಿತಾಂಶ ತಮ್ಮ ಉದ್ದೇಶಕ್ಕೆ ಸಾಧಕವಾಗಲಿ, ವಿರುದ್ಧವಾಗಲಿ, ಸತ್ಯಕ್ಕೆ ಚ್ಯುತಿ ಬರದಂತೆ ಅದನ್ನು ಹೊರಗಿಡುವ ಸಂಶೋಧನ ಪ್ರಾಮಾಣಿಕತೆ ಅತ್ಯಂತ ಅಗತ್ಯ. ತಮ್ಮ ಪೂರ್ವಕಲ್ಪಿತವಾದ ಯಾವುದೋ ಸಿದ್ಧಾಂತಕ್ಕೆ ಅನುಕೂಲವಾಗುವ ಆಧಾರಗಳನ್ನೇ ಬಳಸಿಕೊಳ್ಳುವುದಾಗಲೀ, ಇರುವ ಆಧಾರ

Sri Vidyabharathi Book Centre, Sringeri

CC-O. In Public Domain. Digitized by eGangotri

ಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ವಿರೂಪಗೊಳಿಸುವುದಾಗಲೀ, ಪ್ರಾಮಾಣಿಕ ಸಂಶೋಧನೆಗೆ ಮಾರಕನಾದದ್ದು ; ಸಂಶೋಧನೆಯ ಹೆಸರಿಗೆ ಲಾಂಛನಾಸ್ಪದವಾದದ್ದು. ಈ ಮಾತುಗಳು ಇತಿಹಾಸ ಸಂಶೋಧನೆಗೆ ತೊಡಗುವ ಎಲ್ಲರಿಗೂ ಅರಿವಿರಬೇಕಾದ ಮೂಲಭೂತ ಎಚ್ಚರಿಕೆ. ಭಾರತದಲ್ಲಿ ಇತಿಹಾಸ ಸಂಶೋಧನೆಗೆ ಇರುವ ತೊಂದರೆಗಳು ಹಲವಾರು. ಈವರೆವಿಗೂ ಭಾರತದಲ್ಲಿ ನಡೆದಿರುವ ಪ್ರಾಚೀನ ಪ್ರದೇಶಗಳ ಉತ್ಖಲನವಾಗಲೀ, ಐತಿಹಾಸಿಕ ಮೂಲಗಳ ಸಂಗ್ರಹವಾಗಲೀ ಸಮಗ್ರವಾಗಿಲ್ಲ. ಕರ್ನಾಟಕವಂತೂ ಈ ದಾರಿಯಲ್ಲಿ ಇನ್ನೂ ಬಹಳ ಹಿಂದುಳಿದಿದೆ. ಕರ್ನಾಟಕದಲ್ಲಿ ನಡೆದಿರುವ ಪ್ರಾಚ್ಯ ವಸ್ತು ಸಂಶೋಧನಾ ಕಾರ್ಯ ಅಲ್ಪಪ್ರಮಾಣದ್ದು. ಅಲ್ಲದೆ ಸಂಗ್ರಹವಾಗಿರುವ ಸಹಸ್ರ ಸಹಸ್ರ ಶಾಸನಗಳ ಮೂಲಪಾಠವೇ ಇನ್ನೂ ಪ್ರಕಟವಾಗಿಲ್ಲ. ಹಾಗಿರುವಾಗ ಕರ್ನಾಟಕದ ಇತಿಹಾಸದ ಬಗ್ಗೆ ಯಾವ ಮಾತನ್ನೂ 'ಇದಮಿತ್ಥಂ' ಎಂದು ಹೇಳುವುದು ಅಸಾಧ್ಯ. ಇಂದು ನಾವು ಸತ್ಯ ಎಂದು ನಂಬಿದ ಎಷ್ಟೋ ಮಾತುಗಳು ನಾಳಿನ ಸಂಶೋಧನೆಯಿಂದ ತಲೆಕೆಳಗಾಗಬಹುದು. ಈ ಮಾತು ಕರ್ನಾಟಕದಲ್ಲಿ ಇತಿಹಾಸ ರಚನೆಮಾಡುವ, ಸಂಶೋಧನೆ ಮಾಡುವ ಎಲ್ಲರ ದೃಷ್ಟಿಯಲ್ಲೂ ಇರಬೇಕು. ಈ ಬಗ್ಗೆ ಶ್ರೀ ಮಲ್ಲಪ್ಪನವರ ಭಾವನೆ, ಶ್ರದ್ಧೆ ಹೇಗೋ ಏನೋ, ಆದರೆ ನಾನಂತೂ ಈ ಎಚ್ಚರಿಕೆಯನ್ನು ಸದಾ ಕಣ್ಣೆದುರಿಗೆ ಇಟ್ಟುಕೊಂಡೇ, ಅವರ ಲೇಖನದ ಅಧ್ಯಯನ ಮತ್ತು ವಿಮರ್ಶೆಯನ್ನು ಮಾಡಿದ್ದೇನೆ.

ಶ್ರೀಯುತರ ಲೇಖನವನ್ನು ವಿಮರ್ಶಾತ್ಮಕ ಅಧ್ಯಯನದ ದೃಷ್ಟಿಯಿಂದ, ಸ್ಥೂಲವಾಗಿ ಮೂರು ಭಾಗಗಳಾಗಿ ವಿಂಗಡಿಸಬಹುದು. ಒಂದು-ವಿಜಯನಗರದ ಸಾಮ್ರಾಜ್ಯ ಸ್ಥಾಪನೆ ಮತ್ತು ಆ ಕಾರ್ಯದಲ್ಲಿ ಹೊಯ್ಸಳ ಮುಮ್ಮಡಿ ವೀರ ಬಲ್ಲಾಳ, ಹರಿಹರ, ಶ್ರೀ ವಿದ್ಯಾತೀರ್ಥ, ಶ್ರೀ ವಿದ್ಯಾರಣ್ಯ ಮತ್ತು ಶ್ರೀ ಕ್ರಿಯಾಶಕ್ತಿ ಇವರ ಪಾತ್ರ ; ಎರಡು-ವಿಜಯನಗರ ಸಾಮ್ರಾಜ್ಯದ ಸಂಸ್ಥಾಪಕರು ಯಾರು ಎಂದು ನಿರ್ಧರಿಸುವುದು; ಮೂರು-ಶೃಂಗೇರಿಯ ಪೀಠ ಮತ್ತು ಅದರ ಪರಂಪರೆಗೆ ಸಂಬಂಧಿಸಿದ ಸಿದ್ಧಾಂತ. ಈ ಕ್ರಮದಲ್ಲಿಯೇ ಲೇಖಕರ ಬರಹವನ್ನು ವಿಮರ್ಶೆಯ ನಿಕಷಕ್ಕೆ ಒಡ್ಡಿದ್ದೇನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಜಯನಗರ ಸಾಮ್ರಾಜ್ಯದ ಸಂಸ್ಥಾಪನೆ

೧

ಇದು ಕರ್ನಾಟಕದ ಇತಿಹಾಸದಲ್ಲಿ ಬಹು ಜಟಿಲವಾದ ಸಮಸ್ಯೆ. ಇದರ ಬಗ್ಗೆ ಹಲವಾರು ವಾದವಿವಾದಗಳು ಇವೆ. ವಿಜಯನಗರ ಸಾಮ್ರಾಜ್ಯದ ಸ್ಥಾಪಕರಾದ ಹರಿಹರ, ಬುಕ್ಕ ಇವರ ಪೂರ್ವ ವೃತ್ತಾಂತ, ಇವರು ಎಲ್ಲಿಯವರು, ಇವರಿಗೂ ಹೊಯ್ಸಳ ಚಕ್ರವರ್ತಿಗಳಿಗೂ ಇದ್ದ ಸಂಬಂಧ—ಈ ಬಗ್ಗೆ ಅಧ್ಯಯನ ಮಾಡಿದ ಹಲವಾರು ಮಂದಿ ಇತಿಹಾಸಕಾರರು ತಮ್ಮ ತಮ್ಮ ಸಂಶೋಧನೆಯಿಂದ ಸಿದ್ಧವಾದ ವಾದಗಳನ್ನು, ಲೇಖನಗಳ ಮೂಲಕ, ಗ್ರಂಥಗಳ ಮೂಲಕ ಜನತೆಯ ಮುಂದೆ ಇಟ್ಟಿದ್ದಾರೆ. ಈ ವಾದವಿವಾದಗಳಲ್ಲಿ ಸ್ಥೂಲವಾಗಿ ಎರಡು ವರ್ಗ. ಮೊದಲನೆಯದು ದಕ್ಷಿಣ ಭಾರತಕ್ಕೆ ಮುಸಲ್ಮಾನರ ಧಾಳಿಯಿಂದ ವಿನಾಶ ಒದಗಿದ ಸಮಯದಲ್ಲಿ ಹೊಯ್ಸಳ ಚಕ್ರವರ್ತಿ ಮುಮ್ಮಡಿ ವೀರಬಲ್ಲಾಳನೇ ಆ ಸ್ವಾತಂತ್ರ್ಯ ಸಮರದ ನೇತಾರನಾಗಿ ಪ್ರತಿರೋಧವನ್ನು ಸಂಘಟನೆ ಮಾಡಿದ. ಆತನ ನೆಚ್ಚಿನ ಮಾಂಡಳಿಕರಾಗಿದ್ದ

Sri Vidyabharathi Book Centre, Sringeri

CC-O. In Public Domain. Digitized by eGangotri

ಹರಿಹರ ಮತ್ತು ಆತನ ಸಹೋದರರು, ಈ ಕಾರ್ಯದಲ್ಲಿ ಬಲ್ಲಾಳನ ಬಲಗೈ ಬಂಟರಾಗಿ ದುಡಿದು, ಹೊಯ್ಸಳ ಸಾಮ್ರಾಜ್ಯ ಅಸ್ತಂಗತವಾದ ಬಳಿಕ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪನೆಮಾಡಿದರು. ಹರಿಹರ ಮತ್ತು ಆತನ ಸಹೋದರರು ಹುಟ್ಟು ಕನ್ನಡಿಗರು. ಹೊಯ್ಸಳರಲ್ಲದೆ ಬೇರೆ ಯಾರಿಗೂ ಆಶ್ರಿತರಾಗಿರಲಿಲ್ಲ ಎನ್ನುವುದು. ಎರಡನೆಯ ವಾದ—ಹರಿಹರ, ಆತನ ಸೋದರ ಬುಕ್ಕರಾಯ ಓರಂಗಲ್ಲಿನ ಕಾಕತೀಯ ಪ್ರತಾಪರುದ್ರನ ಆಶ್ರಿತರಾಗಿದ್ದರು. ಓರಂಗಲ್ಲು ಮುಸ್ಲಿಮರ ಧಾಳಿಗೆ ಶರಣಾಗತವಾದ ಬಳಿಕ, ಇವರು ದೆಹಲಿಯ ಸುಲ್ತಾನನಿಂದ ಮತಾಂತರಗೊಳಿಸಲ್ಪಟ್ಟು, ಕೆಲ ಕಾಲ ಆತನ ಊಳಿಗದ ಆಳುಗಳಾಗಿ ದುಡಿದು, ಬಳಿಕ ಆತನಿಂದ ಕಂಪಲಿ ರಾಜ್ಯದ ಮಂಡಳಾಧಿಕಾರಿಗಳಾಗಿ ನೇಮಿತರಾಗಿ ಕರ್ನಾಟಕಕ್ಕೆ ಬಂದು, ಹೊಯ್ಸಳ ಬಲ್ಲಾಳನ ವಿರುದ್ಧ ಹೋರಾಡಿ ಆತನನ್ನು ಸೋಲಿಸಿ, ಹೊಯ್ಸಳ ಸಾಮ್ರಾಜ್ಯದ ಸಮಾಧಿಯ ಮೇಲೆ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪನೆಮಾಡಿದರು ಎನ್ನುವುದು.

ಮೇಲಿನ ಈ ಎರಡು ವಾದಗಳಲ್ಲಿ ಪ್ರಸ್ತುತ ಲೇಖಕರು ಎರಡನೆಯ ವಾದವನ್ನೇ ಅಂಗೀಕರಿಸಿದ್ದಾರೆ. ಈ ಮಾತಿಗೆ ಆಧಾರವಾಗಿ ಅವರ ಲೇಖನದಿಂದ ಸಾಕಷ್ಟು ಉದಾಹರಣೆಗಳನ್ನು ನೀಡಬಹುದು.

ವಿಜಯನಗರದ ಸಂಸ್ಥಾಪಕರಾದ ಒಂದನೆಯ ಹರಿಹರ ಮತ್ತು ಬುಕ್ಕ ರಾಯ ಓರಂಗಲ್ಲಿನಿಂದ ಬಂದವರು, ಮತಭ್ರಷ್ಟರು, ಮುಸಲ್ಮಾನರ ಅಡಿ ಯಾಳುಗಳು, ಅಂತಹವರಿಂದ ವಿಜಯನಗರ ಸ್ಥಾಪನೆಯಾಯಿತು ಎನ್ನುವ ವಾದ ಈಗ ಸತ್ತ ಕುದುರೆ, ತಿರಸ್ಕೃತ ತೀರ್ಮಾನ. ಕರ್ನಾಟಕ ವಿಶ್ವವಿದ್ಯಾ ನಿಲಯದ ಇತಿಹಾಸ ಶಾಖೆಯ ಪ್ರಾಚಾರ್ಯರೂ, ಕರ್ನಾಟಕ ಇತಿಹಾಸದ ಖ್ಯಾತ ತಜ್ಞ ಸಂಶೋಧಕರೂ ಆಗಿದ್ದ ಡಾ. ಪಿ. ಬಿ. ದೇಸಾಯಿಯವರು ತಮ್ಮ "ಮುಮ್ಮಡಿ ಬಲ್ಲಾಳ ಮತ್ತು ವಿಜಯನಗರ"[1] ಎಂಬ ಸುದೀರ್ಘ ಸಂಶೋಧನ ಲೇಖನದಲ್ಲಿ ಸಾಧಾರವಾಗಿ ಮತ್ತು ಕೂಲಂಕಷವಾಗಿ ಈ ವಾದ ವನ್ನು ಖಂಡಿಸಿ ಅದಕ್ಕೆ, ಸಮಾಧಿಮಂಗಳ ಹಾಡಿ ಹೀಗೆ ಹೇಳಿದ್ದಾರೆ—

---

1 "Hoysala Dynasty" pages 329-343

Sri Vidyabharathi Book Centre, Sringeri

CC-O. In Public Domain. Digitized by eGangotri

“ ವಿಜಯನಗರದ ಸಂಸ್ಥಾಪಕರಾದ ಹರಿಹರ ಮತ್ತು ಬುಕ್ಕ ಇವರಿಗೆ ಓರಂಗಲ್ಲಿನೊಂದಿಗೆ ಎಂದೂ ಯಾವ ಬಗೆಯ ಸಂಪರ್ಕವೂ ಇರಲಿಲ್ಲ. ಅವರು ಎಂದೂ ಕಾಕತೀಯ ಪ್ರತಾಪರುದ್ರನ ಆಶ್ರಿತರಾಗಿರಲಿಲ್ಲ” ಎಂದು ಬಹು ಸ್ಪಷ್ಟವಾಗಿ ಹೇಳಿದ್ದಾರೆ. ತಮ್ಮ ಬೇರೊಂದು ಲೇಖನದಲ್ಲಿ[2] ಅವರು, ಈ ವಾದಕ್ಕೆ ಶ್ರೀ ಎನ್. ವೆಂಕಟರಮಣಯ್ಯನವರು ಆಧಾರವೆಂದು ನಂಬಿದ್ದ ಗೋಜಲವೀಡು ಶಾಸನವನ್ನು ಸ್ಥಳಕ್ಕೇ ಹೋಗಿ ಅಧ್ಯಯನ ಮಾಡಿ, ಶ್ರೀಯುತರ ಶಾಸನ ವಾಚನವೇ ಅಬದ್ಧ ಎಂದು ತೋರಿಸಿಕೊಟ್ಟಿದ್ದಾರೆ. ಹರಿಹರ ಬುಕ್ಕರ ಮತಾಂತರ ವಿಷಯದಲ್ಲಿ ಮುಸ್ಲಿಂ ಪ್ರವಾಸಿಗಳು ಬರೆದ ಮಾತುಗಳು ನಿರಾಧಾರ ಕಲ್ಪನೆ ಎನ್ನುವುದನ್ನು ಸಮಕಾಲೀನ ಮುಸ್ಲಿಂ ಆಧಾರ ಸಾಮಗ್ರಿಗಳ ಅಧ್ಯಯನ ಮಾಡಿದ ದೆಹಲಿ ವಿಶ್ವವಿದ್ಯಾನಿಲಯದ ಪ್ರೊ. ಶೇರ್ವಾನಿಯವರ ಸಂಶೋಧನೆಯ ಮೂಲಕ ತೋರಿಸಿಕೊಟ್ಟಿದ್ದಾರೆ. ಈ ಬಗ್ಗೆ ಇರುವ ಎಲ್ಲಾ ಶಾಸನ ಸಾಮಗ್ರಿ, ಸಾಹಿತ್ಯ, ಆಧಾರ ಮೂಲಗಳು ಇವೆಲ್ಲದರ ತಲಸ್ಪರ್ಶಿ ಅಧ್ಯಯನ ಮಾಡಿ ತಮ್ಮ ತೀರ್ಮಾನವನ್ನು ಹೀಗೆಂದು ಹೇಳಿದ್ದಾರೆ— “ಕಳೆದ ೬೦ ವರ್ಷಗಳ ಅವಧಿಯಲ್ಲಿ ನಮ್ಮ ಇತಿಹಾಸಕಾರರೇ ನೀಡಿದ ತಪ್ಪು ಮಾರ್ಗ ನಿರ್ದೇಶನದಿಂದಾಗಿ ವಿಜಯನಗರ ಸ್ಥಾಪನೆಯ ಸಮಸ್ಯೆ ಗೊಂದಲಮಯವಾಗಿದೆ, ಭ್ರಾಂತಿಕಾರಕವಾಗಿದೆ. ಈ ಭ್ರಾಂತಿ ಮತ್ತು ಸಂದಿಗ್ಧತೆಗಳು, ಮತ್ತೆ ಮತ್ತೆ ಅವ್ಯಾಹತವಾಗಿ ಮಾಡಲಾದ ಪುನರುಚ್ಚಾರಣೆಗಳಿಂದಾಗಿ ಬೆಳೆದಿರುವುದೇ ಅಲ್ಲದೆ, ಜಟಿಲವಾಗಿರುವುದೇ ಅಲ್ಲದೆ ವಿಮರ್ಶಕರಲ್ಲದ ಓದುಗರು ಸತ್ಯವಲ್ಲದುದನ್ನು ಸತ್ಯವೆಂದೂ, ಐತಿಹಾಸಿಕವಲ್ಲದ್ದು ಐತಿಹಾಸಿಕವೆಂದೂ ಭ್ರಮಿಸುವಂತೆ ಮಾಡಿದೆ”. ಈ ಬಗೆಯ ಇತಿಹಾಸಕಾರರೆಂದೆನಿಸಿಕೊಂಡವರಿಂದಲೇ ನಡೆದ ಇತಿಹಾಸದ ವಿರೂಪತೆಯ ಬಗ್ಗೆ ಮುಂದುವರಿದು ಹೇಳುತ್ತ, ಶ್ರೀ ದೇಸಾಯಿಯವರು ಓರಂಗಲ್ಲಿನ ವಾದದ ನಿದರ್ಶನ ನೀಡಿ “ಲಬ್ಧವಾಗಿರುವ ಶಾಸನಾಧಾರಗಳನ್ನು ತಮ್ಮ ಪೂರ್ವ ನಿಯೋಜಿತ ಸಿದ್ಧಾಂತ ಮತ್ತು ಕಲ್ಪನೆಗಳಿಗೆ ಸಾಧನ

....

2 "The Foundation of Vijayanagar" by Dr. P. B. Desei, in the "Journal of Karnataka University", Vol, IV. pages 177-194.

Sri Vidyabharathi Book Centre, Sringeri

CC-O. In Public Domain. Digitized by eGangotri

ವಾಗುವಂತೆ ವಿರೂಪಗೊಳಿಸಿ, ದುರುಪಯೋಗಪಡಿಸಿಕೊಂಡು, ಸತ್ಯಕ್ಕೆ ಹೇಗೆ ದ್ರೋಹ ಬಗೆಯಬಹುದು ಎನ್ನುವುದಕ್ಕೆ ಇದು ಒಂದು ಅತ್ಯುತ್ತಮ ನಿದರ್ಶನ. ನಿಜವಾಗಿಯೂ ಇದು ನಮ್ಮ ಆಧುನಿಕ ಇತಿಹಾಸತಜ್ಞರು, ಆಧುನಿಕ ವೈಜ್ಞಾನಿಕ ವಿಧಾನಗಳು ಎಂದು ಹೇಳಲಾದ ವಿಧಾನಗಳಿಂದ ಸೃಷ್ಟಿಸಿದ ಅತ್ಯಾಧುನಿಕ ಕಟ್ಟು ಕಥೆ. ಇವರು ನಿಜವಾದ ಇತಿಹಾಸಕ್ಕೆ ಹೇಳಲಾಗದಷ್ಟು ಅನ್ಯಾಯ ಮತ್ತು ದ್ರೋಹವನ್ನು ಬಗೆದಿದ್ದಾರೆ". ಈ ವಿಷಯದ ಬಗ್ಗೆ ಶ್ರೀ ದೇಸಾಯಿಯವರು ಬರೆದಿರುವುದಕ್ಕಿಂದ ಹೆಚ್ಚು ಬರೆಯುವುದು ಅನಗತ್ಯ. ವಿಜಯನಗರ ಸಾಮ್ರಾಜ್ಯಸ್ಥಾಪನೆಯ ಬಗ್ಗೆ ಬಹು ಆಳವಾಗಿ ಅಭ್ಯಾಸ ಮಾಡಿದ ಪ್ರಕೃತ ಲೇಖನದ ಲೇಖಕರೂ ಶ್ರೀದೇಸಾಯಿಯವರು ಉಲ್ಲೇಖಿಸಿದ ಆಧುನಿಕ ಇತಿಹಾಸ ತಜ್ಞರ ವರ್ಗಕ್ಕೆ ಸೇರಿದವರು ಎನ್ನುವುದು ನಿರ್ವಿವಾದ. ಅವರ ಇಡೀ ಲೇಖನ ಮತ್ತು ಅವರು ಮಾಡಿದ ಸಿದ್ಧಾಂತಕ್ಕೆ ಓರಂಗಲ್ಲಿನ ಸತ್ತ ವಾದವನ್ನು ನಂಬದೆ ಬೇರೆ ದಾರಿಯೇ ಇರಲಿಲ್ಲ. ಎಂತಲೇ ಅವರು ತದ್ವಿರುದ್ಧವಾದ ಐತಿಹಾಸಿಕಾಂಶಗಳ ಕಡೆಗೆ ಕಣ್ಣೆತ್ತಿನೋಡುವ ಕೃಪೆಯನ್ನೂ ಮಾಡದೆ, ತಾವು ಸ್ವೀಕರಿಸಿದ ದಾರಿಯಲ್ಲೇ ಕುರುಡಾಗಿ ಮುನ್ನುಗ್ಗಿದ್ದಾರೆ. ಈ ಸಾಹಸ ಲೇಖಕರಿಗೆ ಅನಿವಾರ್ಯವಾಗಿದ್ದಿತು. ಅವರ ಲೇಖನದ ಮೂಲಭೂತ ಉದ್ದೇಶ ಏನಿತ್ತೆಂಬುದು ಬಹುಬೇಗ ಬಯಲಾಗುತ್ತದೆ. ಓರಂಗಲ್ಲಿನ ಸಿದ್ಧಾಂತಕ್ಕೆ ಅಂಧ ಶರಣರಾದ ಲೇಖಕರು, ಆ ವಾದವನ್ನು ಮುಂದುವರೆಸಿ "ಇಮ್ಮಡಿ ಹರಿಹರನು ಮಾಡಿದ ಮೊಟ್ಟಮೊದಲ ಕೆಲಸ ತನ್ನಂತೆಯೇ, ವಿಜಯನಗರ ಸಾಮ್ರಾಜ್ಯಸ್ಥಾಪನೆಗೆ ಮೂಲಸ್ಫೂರ್ತಿಯಾದ ಪ್ರತಾಪರುದ್ರನ ರಾಜಧಾನಿಯಾಗಿದ್ದ ಓರಂಗಲ್ಲಿನಿಂದ ಬಂದ ಸನ್ಯಾಸಿಯನ್ನು ಶೃಂಗೇರಿಯ ಗುರುವಾಗಿ ಪಟ್ಟಕಟ್ಟಿದ್ದು. ವಾಸ್ತವಾಗಿಯೂ ಹಿಂದೂಗಳನ್ನು ಮತ್ತು ಅವರ ಅರಸರನ್ನು ಮುಸ್ಲಿಮರ ವಿರುದ್ಧ ಸಂಘಟಿಸುವಸ್ಫೂರ್ತಿ ಬಂದದ್ದು ಓರಂಗಲ್ಲಿನಿಂದಲೇ" "ಆ ಕಾಲದಲ್ಲಿ ಹಿಂದೂ ಧರ್ಮವೇ ಅವಸಾನಭೀತಿಗೆ ಒಳಗಾಗಿದ್ದದರಿಂದ ಹಿಂದೂಗಳನ್ನು ಒಟ್ಟುಗೂಡಿಸುವ ಅಗತ್ಯಕಾರ್ಯ ಪ್ರಬಲ ಹಿಂದೂ ಮಠಾಧಿಪತಿಗಳಿಂದಲೇ ನಡೆಯಬೇಕಾದುದು ಅತ್ಯಗತ್ಯವಾಗಿತ್ತು. ಈ ಕಾರ್ಯ ಆ ಕಾಲಕ್ಕೆ ದಕ್ಷಿಣ ಭಾರತದ ಹಲವಾರು ರಾಜಮನೆತನಗಳಿಗೆ ರಾಜಗುರುವಾಗಿದ್ದ ಮಹಾನ್ ವ್ಯಕ್ತಿಯೊಬ್ಬರಿಂದಲೇ ಮಾಡುವುದು ಸಾಧ್ಯ

Sri Vidyabharathi Book Centre, Sringeri

CC-O. In Public Domain. Digitized by eGangotri

ವಿತ್ತು. ಅಂತಹ ಮಠವೊಂದು ಆಕಾಲದಲ್ಲಿತ್ತು; ಅದೇ ದಕ್ಷಿಣ ಭಾರತದಲ್ಲೆಲ್ಲಾ ಹಲವಾರು ಶಾಖೆಗಳನ್ನು ಹೊಂದಿದ್ದ ಮಹಾ ಪ್ರಭಾವಶಾಲಿ, ಆಂಧ್ರದಲ್ಲಿದ್ದ ಗೋಲಕಿಮಠ ; ಅದರ ಪ್ರಭಾವಶಾಲಿ ಗುರು". ಮುಸ್ಲಿಮರ ವಿರುದ್ಧ ನಡೆದ ಕನ್ನಡಿಗರ ಸ್ವಾತಂತ್ರ್ಯ ಸಮರಕ್ಕೆ ಆಂಧ್ರದಿಂದ, ಆಂಧ್ರಗುರು ಒಬ್ಬರಿಂದ, ಸ್ಫೂರ್ತಿ ಬರುವವರೆಗೂ ಕನ್ನಡಿಗರು ಹತಾಶರಾಗಿ, ನಿರ್ವೀರ್ಯರಾಗಿ ಕೈಚೆಲ್ಲಿ ಕುಳಿತಿದ್ದರು ಎನ್ನುವುದು ಕೇವಲ ಇತಿಹಾಸಕ್ಕಷ್ಟೇ ಅಲ್ಲ, ಸತ್ಯಕ್ಕಷ್ಟೇ ಅಲ್ಲ ಕೋಟಿ ಕೋಟಿ ಕನ್ನಡಿಗರ ಸ್ವಾತಂತ್ರ್ಯ ಮತ್ತು ಧರ್ಮಾಭಿಮಾನಕ್ಕೆ ಎಸಗಿದ ಭಯಂಕರ ದ್ರೋಹ, ಅಸಹನೀಯ ಅತ್ಯಾಚಾರ. ಆಂಧ್ರದವರು ಸ್ವಾತಂತ್ರ್ಯ ಸಮರದ ಧರ್ಮಕಹಳೆಯನ್ನು ಊದುವವರೆಗೂ, ಮುಸ್ಲಿಮರು ನಡೆಸಿದ ಭಯಂಕರ ಆಕ್ರಮಣ, ಅತ್ಯಾಚಾರ, ಅಗ್ನಿಕಾಂಡ, ದರೋಡೆಗಳನ್ನು ನೋಡಿ ಕೊಂಡೂ ಕನ್ನಡಿಗರೂ, ಅವರ ಅರಸರೂ ಕುರಿಕಾಯುತ್ತಿದ್ದರೇ ? ಕನ್ನಡಿಗ ರಲ್ಲಿ ಎಲ್ಲರಲ್ಲೂ ಧರ್ಮಾಭಿಮಾನ, ಸ್ವಾತಂತ್ರ್ಯ ಪ್ರೇಮ ಸತ್ತು ಹೋಗಿತ್ತೆ ? ಶ್ರೀ ಮಲ್ಲಪ್ಪನವರ ಹೇಳಿಕೆ ಯಾವ ಭವ್ಯ ಉದ್ದೇಶದಿಂದಲೆ ಪ್ರೇರೇಪಿತ ವಾದ ದ್ದಾದರೂ, ಇತಿಹಾಸಕ್ಕೆ ಮಾಡಿದ ಅಸಹ್ಯ, ಅಪಮಾನಕರ, ಅತ್ಯಾಚಾರ. ಇಂತಹ ಹೇಳಿಕೆಗಳನ್ನು ಇತಿಹಾಸವೆಂದು ಬರೆಯುವ ಮೊದಲು ಈ ಲೇಖ ಕರು ತಮ್ಮ ಕನ್ನಡತನವನ್ನು ತಾವೇ ಪರೀಕ್ಷೆಮಾಡಿಕೊಳ್ಳಬೇಕಾಗಿತ್ತು. ಇದು ನಿಜಕ್ಕೂ ದುರ್ದೈವದ ಮಾತು.

ಆದರೆ ಇತಿಹಾಸ ಶ್ರೀ ಮಲ್ಲಪ್ಪನವರ ಬಯಕೆಯ ಆಳಲ್ಲ, ಕಲ್ಪನಾ ವಿಹಾರಕ್ಕೆ ಕಟ್ಟಿ ಬಾಗಿಸಿದ ಜಟಕಾ ಕುದುರೆಯೂ ಅಲ್ಲ. ವಸ್ತು ಸ್ಥಿತಿ ಲೇಖಕರು ಉಲ್ಲೇಖಿಸಿರುವದಕ್ಕೆ ವಿರುದ್ಧವಾಗಿದೆ ಎನ್ನುವುದಕ್ಕೆ ನೂರಾರು ಸಮಕಾಲೀನ ಶಾಸನಗಳ ಸಾಕ್ಷಿಯಿವೆ. ತನ್ನ ಸ್ವಂತ ಹಿತ, ತನ್ನ ಸಾಮ್ರಾ ಜ್ಯದ ಅಳಿವು ಉಳಿವು ಯಾವುದನ್ನೂ ಲೆಕ್ಕಿಸದೆ ಮುಸ್ಲಿಮರ ವಿರುದ್ಧ ಕನ್ನಡಿ ಗರನ್ನು ಸಂಘಟಿಸಿದ ಕೀರ್ತಿ ಯಾರಿಗಾದರೂ ಸಲ್ಲಬೇಕಾಗಿದ್ದರೆ ಅದು ಹೊಯ್ಸಳ ಮೂರನೆಯ ವೀರಬಲ್ಲಾಳನಿಗೆ, ಆತನ ನೆಚ್ಚಿನ ಭಂಟರಾಗಿ, ಕೈಕರ ವಾಳವಾಗಿ ದುಡಿದ ಆತನ ಮಂಡಳೀಶ್ವರರಿಗೆ—ಅವರಲ್ಲಿ ಪ್ರಧಾನರಾಗಿದ್ದ ಹರಿ ಹರ ಮತ್ತು ಆತನ ಸೋದರರಿಗೆ– ನಿರ್ವಿವಾದವಾಗಿ ಸಲ್ಲಬೇಕು, ಈ ವಿಷಯ ದಲ್ಲಿ ಯಾರೂ ಆ ಮಹನೀಯರಿಗೆ ಉಪಕಾರ ಬುದ್ಧಿ ತೋರುವುದಾಗಲೀ

Sri Vidyabharathi Book Centre, Sringeri

CC-O. In Public Domain. Digitized by eGangotri

ಪರಿಣತು ಹೇಳುವುದಾಗಲೀ ಅನಗತ್ಯ. ಹಾಗೆಯೇ ಈ ಮಹಾ ಸಮರಕ್ಕೆ ಯಾವುದಾದರೂ ಒಂದು ಮಠ, ಅದರ ಗುರುವಿನ ತಪಃಪ್ರಭಾವ ಸ್ಫೂರ್ತಿಯನ್ನು ಒದಗಿಸಿತು ಎನ್ನುವುದಾದರೆ, ಆ ಕೀರ್ತಿ ಶೃಂಗೇರಿಯ ಶ್ರೀ ವಿದ್ಯಾತೀರ್ಥರಿಗೆ ಮತ್ತು ಅವರ ಶಿಷ್ಯರಿಗೆ ನಿರ್ವಿವಾದವಾಗಿ ಸಲ್ಲಬೇಕು. ಈ ಮಾತು ಮೊದಲನೆ ಹರಿಹರನ ಹೆಬಸೂರಿನ ತಾಮ್ರಶಾಸನದಿಂದ ೪ ಶೃಂಗೇರಿಯ ಮೊದಲನೇ ಶಾಸನದಿಂದ೫, ಅವಿವಾದಾಸ್ಪದವಾಗಿ ಸ್ಪಷ್ಟವಾಗುತ್ತದೆ. ಆದರೆ ಸ್ವಯಂ ಕನ್ನಡಿಗರಾದ ಈ ಲೇಖಕರು ಈ ಶಾಸನಗಳನ್ನು, ಅವು ಸಾರುವ ಐತಿಹಾಸಿಕ ಸತ್ಯವನ್ನು ಕಣ್ಣೆತ್ತಿಯೂ ನೋಡಿದಂತಿಲ್ಲ. ಪ್ರಾಯಶಃ ನೋಡಿದ್ದರೆ ಅವರ ಸಿದ್ಧಾಂತ ಗರ್ಭದಲ್ಲೇ ಸಾಯುತ್ತಿದ್ದುದರಿಂದ, ಉದ್ದೇಶಪೂರ್ವಕವಾಗಿಯೇ ಉಪೇಕ್ಷೆಮಾಡಿ ತಮ್ಮ ವಾದವನ್ನೇ ಮುಂದುವರೆಸಿಕೊಂಡು ಹೋಗಿದ್ದಾರೆ. ವಿಜಯನಗರ ಸ್ಥಾಪನೆಗೆ ಮೂಲ ಸ್ಫೂರ್ತಿ ಗೋಲಕೀ ಮಠದಿಂದ ಬಂದಿತು ಎಂದು ಹೇಳುವಷ್ಟರಿಂದಲೇ ತೃಪ್ತರಾಗದ ಲೇಖಕರು, ಆಗಿನ ಶೃಂಗೇರಿಯ ಗುರುಗಳನ್ನು ಗೋಲಕಿ ಮಠ ಮತ್ತು ಅದರ ಶಾಖೆಗಳಲ್ಲಿ ಬೆಸುಗೆ ಹಾಕಲು ಹೊರಟಿದ್ದಾರೆ. ಈ ವಿಷಯದಲ್ಲಿ ಲೇಖಕರ ಹೇಳಿಕೆ ಹೀಗಿದೆ—

,, ಆಂಧ್ರದ ಗೋಲಕಿ ಮಠದ ಅಧಿಪತಿಗಳು ಹಲವಾರು ರಾಜರ ರಾಜಗುರುಗಳಾಗಿದ್ದರು, ಮುಖ್ಯವಾಗಿ ಆಂಧ್ರದೊರೆಯ ದೀಕ್ಷಾಗುರುವಾಗಿದ್ದರು. ಎಂತಲೇ ಮುಸಲ್ಮಾನರು ಅಲ್ಲಿ ಉಗ್ರ ಪ್ರತಿಭಟನೆಯನ್ನು ಎದುರಿಸಿದ್ದಲ್ಲಿ ಏನೂ ಆಶ್ಚರ್ಯವಿಲ್ಲ, ಆದರೆ ಕೊನೆಯಲ್ಲಿ ಮುಸ್ಲಿಮರು ಆಂಧ್ರ ದೊರೆಯನ್ನು ದೇವಗಿರಿಯ ಮತ್ತೊಬ್ಬ ಹಿಂದೂ ದೊರೆಯ ಸಹಾಯದಿಂದ ಸೋಲಿಸಿದಾಗ ಗೋಲಕಿ 'ಮಠದ ಮಹಾಗುರುವಿನ ವಿದ್ಯಾಮಂಟಪವನ್ನು ಅಲಂಕರಿಸಿದ್ದ ಹಿಂದೂ ವಿದ್ವನ್ಮಣಿಗಳು ಹೊಯ್ಸಳರ ಕರ್ನಾಟಕಕ್ಕೆ ಪಲಾಯನ ಮಾಡಿದರು. ತಮ್ಮ ದೊರೆ ಪ್ರತಾಪರುದ್ರನ ಪರಾಭವದ ನಂತರ ಹರಿಹರ ಮತ್ತು ಆತನ ಸೋದರರೂ ಸಹ ತಮ್ಮ ತಾಯ್ನಾಡಾದ ಕರ್ನಾಟಕವನ್ನು ರಕ್ಷಿಸಲು ಹೊಯ್ಸಳನ ಕರ್ನಾಟಕಕ್ಕೆ ಧಾವಿಸಿದರು. ತಮ್ಮ ಜಪತಪಗಳನ್ನು ನಿರಾತಂಕವಾಗಿ ನಡೆಸಲು ಮತ್ತು ಹಿಂದೂ ಧರ್ಮ ಸಂರಕ್ಷಣೆಗಾಗಿ ಹಿಂದೂ ಅರಸರನ್ನು ಸಂಘಟ

೪ E. C. Vol. IV, Part II YD 46.
೫ E. C. Tol. VI SG. 1.

Sri Vidyabharathi Book Centre, Sringeri

CC-O. In Public Domain. Digitized by eGangotri

ಸುವ ತಮ್ಮ ಕಾರ್ಯಕ್ರಮವನ್ನು ಮುಂದುವರೆಸಲು ಆ ಕಾಲಕ್ಕಾಗಲೇ ಇದೇ ಉದ್ದೇಶದಿಂದಲೇ ಕೃಷ್ಣನಾಯಕನು ಆ ದೇಶಕ್ಕೆ ಹೋಗಿದ್ದುದರಿಂದಲೂ, ಮಹಾಸನ್ಯಾಸಿಗಳಿಬ್ಬರು ಆಂಧ್ರದಿಂದಲೇ ಕರ್ನಾಟಕಕ್ಕೆ ಆಗಮಿಸಿದರು. ಮೊದಲು ಹಂಪೆಯ ಗೋಲಕಿ ಅದ್ವೈತ ಮಠವಾಗಿದ್ದ ವಿರೂಪಾಕ್ಷ ಮಠದ ಗುರುಗಳಾದವರೂ; ನಂತರ ವಿದ್ಯಾರಣ್ಯರ ಅಭಿದಾನದಿಂದ ಶೃಂಗೇರಿಯ ಜಗದ್ಗುರುಗಳಾಗಿ ಪೀಠಾರೋಹಣಮಾಡಿದವರೂ ಈ ಸನ್ಯಾಸಿಗಳಲ್ಲಿ ಮೊದಲನೆಯವರು, ಎರಡನೆಯವರು ಶ್ರೀ ಭಾರತೀತೀರ್ಥರು. ವಿದ್ಯಾರಣ್ಯರ ಮತ್ತು ಭಾರತೀತೀರ್ಥರ ಉಗಮದ ಬಗ್ಗೆ ಇಷ್ಟು ನಿಸ್ಸಂಧಿಗ್ಧ ಅಭೇದ್ಯ ಸಿದ್ಧಾಂತದ ಮಜಲನ್ನು ತಲುಪಿದ ಬಳಿಕ, ಲೇಖಕರು, ಇವರ ಗುರುಗಳಾದ ವಿದ್ಯಾತೀರ್ಥರ ಬಗ್ಗೆ ಹೀಗೆ ಹೇಳಿದ್ದಾರೆ— "ಮೇಲೆ ಹೇಳಿದ ವ್ಯಕ್ತಿಗಳ ಉದ್ದೇಶದಿಂದಲೇ ಪ್ರೇರೇಪಿತರಾ ವಿದ್ಯಾತೀರ್ಥಮಹೇಶ್ವರರು ಕಂಚಿಯಿಂದ ಬಂದರು .... ಕಂಚಿ ಮಾಹೇಶ್ವರ ಪೀಠವಾಗಿದ್ದುದರಿಂದ ಶಾಸನಗಳಲ್ಲಿ ಮತ್ತು ಇತರ ಉಲ್ಲೇಖಗಳಲ್ಲಿ ಅವರನ್ನು ಸದಾ ಸರ್ವ ಸಂದರ್ಭಗಳಲ್ಲೂ ವಿದ್ಯಾತೀರ್ಥ ಮಹೇಶ್ವರ ಎಂದು ಕರೆದಿರುವುದರಲ್ಲಿ ಯಾವ ಆಶ್ಚರ್ಯವೂ ಇಲ್ಲ. ಕಾಕತೀಯ ರಾಜ್ಯದಿಂದ ಸನ್ಯಾಸಿಯನ್ನು ಹಂಪೆಯ ವಿರೂಪಾಕ್ಷ ಮಠದ ಗುರುವನ್ನಾಗಿ ನೇಮಿಸಿದವರು ಮತ್ತು ತಮ್ಮ ಧರ್ಮ ಮತ್ತು ಸಾಮ್ರಾಜ್ಯ ಸಂರಕ್ಷಣೆಗಾಗಿ ಹಿಂದೂಗಳನ್ನು ಸಂಘಟಿಸುವ ಕಾರ್ಯದಲ್ಲಿ ಕಾಕತೀಯ ರಾಜ್ಯದ ಸನ್ಯಾಸಿಗೆ ಸಹಾಯ ನೀಡಿದವರೂ ವಿದ್ಯಾತೀರ್ಥರೇ." ಲೇಖಕರ ಮೇಲಿನ ಹೇಳಿಕೆ ಕೇವಲ ಉದ್ದೇಶಪೂರಿತ ಕಲ್ಪನಾಲಹರಿಯಷ್ಟೇ ಅಲ್ಲದೆ ಅದರಲ್ಲಿ ಚಾರಿತ್ರಕ ಸತ್ಯ ಎಳ್ಳಷ್ಟೂ ಇಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಸುಮಾರು ೧೮ ನೇ ಶತಮಾನದಲ್ಲಿ ಶ್ರೀ ಲಕ್ಷ್ಮಣಶಾಸ್ತ್ರಿಗಳಿಂದ ಬರೆಯಲ್ಪಟ್ಟ "ಗುರುವಂಶಕಾವ್ಯ" ದಲ್ಲಿ ವಿದ್ಯಾರಣ್ಯರು ಮತ್ತು ಭಾರತೀತೀರ್ಥರು ಓರಂಗಲ್ಲಿನಿಂದ ಬಂದರು ಎಂದು ಹೇಳಲಾಗಿದೆ. ಆದರೆ ಆ ಕಾರ್ಯದಲ್ಲಿ ವಿದ್ಯಾತೀರ್ಥರು ಕಂಚಿಯಿಂದ ಬಂದರು ಎಂಬ ವಿಷಯ ಎಲ್ಲೂ ಉಲ್ಲೇಖವಾಗಿಲ್ಲ. ಗುರುವಂಶ ಕಾವ್ಯ ಶೃಂಗೇರಿ ಪೀಠದ ಪರಂಪರೆಯನ್ನು ವರ್ಣಿಸುವ ಕಾವ್ಯ. ಇಂತಹ ಕಾವ್ಯಗಳಿಗೆ ಸಹಜವಾಗಿರುವಂತೆಯೇ ಈ ಕಾವ್ಯದಲ್ಲಿಯೂ ಚಾರಿತ್ರಿಕಾಂಶಗಳ ಜೊತೆಗೆ ಪೌರಾಣಿಕ ಅಂಶಗಳೂ, ಕನ್ನಿಯ ಕಾಲದಲ್ಲಿ ಪ್ರಚಲಿತವಾಗಿದ್ದ ದಂತಕಥೆಗಳೂ ಮತ್ತು ಕರ್ಣಾಕರ್ಣಿಕೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಯಾಗಿ ಕೇಳಿಬಂದ ವದಂತಿಗಳೂ ಸೇರಿವೆ. ಅಲ್ಲದೆ ಈ ಕಾವ್ಯದಲ್ಲಿ ಬರುವ ಹಲವು ಅಂಶಗಳು "ವಿದ್ಯಾರಣ್ಯ ಕಾಲಜ್ಞಾನ"[6] ಎಂಬ ಮತ್ತೊಂದು ಕೃತಿಯಿಂದ ಪ್ರೇರೇಪಿತವಾಗಿದೆ ಎಂದು ಹೇಳಲು ಆಧಾರಗಳುಂಟು. ಇವುಗಳಲ್ಲಿ ದೊರಕುವ ಅಂಶಗಳಿಗೆ ಅನ್ಯತ್ರ ಸಂಶಯಾತೀತವಾದ ಚಾರಿತ್ರಿಕ ಆಧಾರಗಳ ಪೋಷಣೆ ದೊರೆಯುವವರೆಗೂ, ಅವನ್ನು ನಿಸ್ಸಂಧಿಗ್ಧ ಪ್ರಮಾಣಗಳೆಂದು ನಂಬುವುದು ಸಂಶೋಧನೆಯಲ್ಲಿ ಅಪಾಯಕಾರಿಯಾದ ಮಾರ್ಗ. ಹಾಗೆ ಮಾಡುವುದರಿಂದ ಇತಿಹಾಸದ ಹೆಸರಿನಲ್ಲಿ ಮತ್ತೊಂದು ಕಟ್ಟುಕಥೆಯನ್ನು ನಿರ್ಮಿಸಿದಂತಾಗುತ್ತದೆ. ಹೊಯ್ಸಳ ವಿಷ್ಣುವರ್ಧನ ಶ್ರೀ ರಾಮಾನುಜಾಚಾರ್ಯರಿಂದ ಶ್ರೀವೈಷ್ಣವ ಮತಕ್ಕೆ ಪರಿವರ್ತಿತನಾದನೆಂದು ಹೇಳುವ ಮಾತು ಇಂತಹ ಅಪಾಯಕ್ಕೆ ಒಂದು ಬಲವಾದ ಉದಾಹರಣೆ. ಲೇಖಕರು ತಮ್ಮ ವಾದಕ್ಕೆ "ಗುರುವಂಶಕಾವ್ಯ" ಪ್ರಬಲಸಾಧನ ಎಂದು ಅಂಗೀಕರಿಸುವುದಾದರೆ, ಅದರಲ್ಲಿ ಹೇಳಿರುವ ವಿದ್ಯಾತೀರ್ಥರು ಮತ್ತು ಶೃಂಗೇರಿಯ ಪರಂಪರೆಯ ಬಗ್ಗೆ ಹೇಳಿರುವ ಮಾತುಗಳನ್ನೂ ಐತಿಹಾಸಿಕ ಸತ್ಯವೆಂದೇ ಹೇಳಬೇಕಾಗುತ್ತದೆ. ಲೇಖಕರು ಹಾಗೆ ಮಾಡಲು ಸಿದ್ಧರಿಲ್ಲ ಎಂಬುದು ಅವರ ಲೇಖನದಲ್ಲೇ ಬೇರೆಕಡೆ ಸ್ಪಷ್ಟವಾಗಿದೆ. ಹಾಗಿರುವಾಗ ಒಂದು ಮೂಲ ಸಾಮಗ್ರಿಯನ್ನು ಅನ್ಯತ್ರ ಸಾಧನಗಳ ಬೆಂಬಲವಿಲ್ಲದೆ ಒಂದು ವಿಷಯಕ್ಕೆ ಪ್ರಮಾಣವೆಂದು ಪರಿಗಣಿಸುವುದೂ, ಮತ್ತೊಂದು ವಿಷಯಕ್ಕೆ ಆಧಾರವಲ್ಲವೆಂದು ನಿರಾಕರಿಸುವುದೂ ತರ್ಕಕ್ಕೆ ವಿರುದ್ಧವಾದ ಅಪ್ರಾಮಾಣಿಕ ಸಂಶೋಧನಾ ಪ್ರಯತ್ನವಾಗುತ್ತದೆ. ವಿದ್ಯಾರಣ್ಯ ಮತ್ತು ಭಾರತಿತೀರ್ಥರು ಓರಂಗಲ್ಲಿನಿಂದ ಬಂದರು ಎನ್ನುವುದಕ್ಕೆ "ಗುರುವಂಶ ಕಾವ್ಯ" ಮತ್ತು "ವಿದ್ಯಾರಣ್ಯ ಕಾಲಜ್ಞಾನ" ಗಳಲ್ಲದೆ, ಬೇರೆ ಯಾವ ಐತಿಹಾಸಿಕ ಆಧಾರಗಳೂ ಕಂಡು ಬಂದಿಲ್ಲ. ಇನ್ನು ವಿದ್ಯಾತೀರ್ಥರು ಶೃಂಗೇರಿಯ ಪೀಠವನ್ನು ಸ್ಥಾಪಿಸಲು ಕಂಚಿಯಿಂದ ಬಂದರು ಎನ್ನುವುದಕ್ಕೆ ಇರುವ ಏಕೈಕ ಆಧಾರ ಕಂಚಿ ಕುಂಭಕೋಣ ಮಠದವರಿಂದ ಪ್ರಕಟವಾದ "ಪುಣ್ಯಶ್ಲೋಕ ಮಂಜರಿ" ಯಂತಹ ಗ್ರಂಥಗಳು.[2] ಕಂಚಿ ಕುಂಭಕೋಣ ಮಠದ ಈ ಬಗೆಯ ಹೇಳಿಕೆಗಳ ಬಗ್ಗೆ

---

6 M. A, R. 1952.

2 ಇದರ ವಿವರಗಳಿಗೆ ಈ ಕೆಳಗಿನ ಗ್ರಂಥಗಳನ್ನು ನೋಡಿ ;

Sri Vidyabharathi Book Centre, Sringeri

CC-O. In Public Domain. Digitized by eGangotri

ಲೇಖಕರು "ವಿದ್ಯಾತೀರ್ಥರು 1385 ರ ವರೆಗೂ ಕಂಚಿ ಪೀಠದ ಜಗದ್ಗುರುಗಳಾಗಿದ್ದರು ಎಂಬ ಕುಂಭಕೋಣ ಮಠದ ದಾಖಲೆಗಳ ನಿರ್ದುಷ್ಟತೆಯು ವಿಷಯದಲ್ಲಿ ಸಂಶಯಪಡಲು ಯಾವ ಕಾರಣವೂ ಇಲ್ಲ." ಎಂಬ ವೃಥ ನಿರ್ಧಾರಕ್ಕೆ ಬಂದಿದ್ದಾರೆ. ಈ ವಿಷಯದಲ್ಲಿ ಕಂಚಿ ಮಠದವರ ದಾಖಲೆಗಳನ್ನೇ ಅಲ್ಲದೆ ಬೇರೆ ಯಾವ ಆಧಾರಗಳನ್ನೂ ಲೇಖಕರು ಉದಹರಿಸಿಲ್ಲ. ಶೃಂಗೇರಿ ಮತ್ತು ಕುಂಭಕೋಣ ಮಠದ ಸಂಬಂಧ ಬಹು ವಿವಾದಾಸ್ಪದವಾದ ಸಂಗತಿ. ಆ ಮಠದವರ ಹೇಳಿಕೆಗಳೂ ಅದಕ್ಕೆ ಬೆಂಬಲವಾಗಿ ತೋರಿಸುವ ಕೃತಿಗಳೂ ಎಲ್ಲವೂ ಕಾಲ್ಪನಿಕ, ಐತಿಹಾಸಿಕ ಸತ್ಯಕ್ಕೆ ಬಹು ದೂರವಾದವು ಎಂಬುದನ್ನು ಶ್ರೀ ಆರ್. ಕೃಷ್ಣಸ್ವಾಮಿ ಅಯ್ಯರ್ ಮತ್ತು ಶ್ರೀ. ಕೆ. ಆರ್. ವೆಂಕಟರಾಮನ್ ಅವರುಗಳು ಬರೆದ "Truth about Kumbakonam Mutt" ಎಂಬ ಗ್ರಂಥದಲ್ಲೂ, ಶ್ರೀ ಜೆ. ವಿ. ರಾಜಗೋಪಾಲ ಶರ್ಮರು ಬರೆದ "ಶ್ರೀ ಜಗದ್ಗುರು ಶಾಂಕರ ಮಠ್ ವಿಮರ್ಷಾ" ಎಂಬ ಉದ್ಗ್ರಂಥದಲ್ಲೂ ಮತ್ತು ಇನ್ನೂ ಹಲವಾರು ಗ್ರಂಥಗಳಲ್ಲಿಲ ನೂರಾರು ವಿವಾದಾತೀತವಾದ ಸಾಕ್ಷ್ಯ ಸಾಹಿತ್ಯದೊಡನೆ ಖಂಡಿಸಲಾಗಿದೆ. ಆದರೆ ಕಂಚಿ ಕುಂಭಕೋಣ ಮಠದವರ ಹೇಳಿಕೆಗಳು ಸಂದೇಹಾತೀತವಾದ, ತ್ರಿಕಾಲಾಬಾಧಿತವಾದ ಸತ್ಯ ಎಂದು ನಂಬುವ ಲೇಖಕರು ಈ ಗ್ರಂಥಗಳ ಕಡೆಗೆ ಕಣ್ಣನ್ನು ಕೂಡ ಹಾಯಿಸಿದಂತಿಲ್ಲ.

---

1 Sri Sankaracharya & His Kamakoti Peetam by Sri N. K. Venkatesan Pantulu; 2. Shankaracharya the Great & His Successors in Kanchi by Sri N. Venkataraman (1923)

೨ (1) "Truth about Kumbakonam Mutt" by Sri R. Krishnaswamy Iyer & Sri K. R. Venkataraman (1963), (2) "Sri Jagadguru Sankar Mutt Vimarsha" by Sri J. V. Rajagopala Sharma (1963), (3) Kasi me Kumbakonam Mutt Visay ka Vivad --- by Ibid (1913) (4) "Sankara Matha Tatwa Prakasika" by Sri M, M Koppanda V. Pantalu (1876),

Sri Vidyabharathi Book Centre, Sringeri

CC-O. In Public Domain. Digitized by eGangotri

ಯಾವುದೇ ಒಂದು ವಿವಾದದ ಬಗ್ಗೆ ತೀರ್ಪನ್ನು ಕೊಡುವ ಮೊದಲು ಪರ ಮತ್ತು ವಿರುದ್ಧವಾದ ಸಕಲ ಸಾಕ್ಷ್ಯ ಸಾಹಿತ್ಯವನ್ನೂ ನಿಷ್ಪಕ್ಷಪಾತದೃಷ್ಟಿಯಿಂದ ವಿವೇಚಿಸಿ, ವಿಶ್ಲೇಷಿಸಿ, ತರ್ಕಬದ್ಧವಾದ ತೀರ್ಮಾನಕ್ಕೆ ಬಂದು ತೀರ್ಪನ್ನು ಕೊಡುವುದು ಸತ್ಯಕ್ಕೆ ಸಾಧುವಾದ ಮಾರ್ಗ ಎನ್ನುವುದು ; ಏಕ ಪಕ್ಷೀಯವಾದ ಸಾಕ್ಷ್ಯದ ಮೇಲೆ ತೀರ್ಪು ಕೊಡುವುದು ಅನ್ಯಾಯಕ್ಕೆ ಬೆಂಬಲ ಕೊಟ್ಟಂತಾಗುತ್ತದೆ ಎನ್ನುವುದು ; ಹೈಕೋರ್ಟಿನ ನಿವೃತ್ತನ್ಯಾಯಾಧೀಶರಾದ ಲೇಖಕರಿಗೆ ನಾನು ಹೇಳಿಕೊಡಬೇಕಾಗಿಲ್ಲ. ಆದರೂ ಈ ವಿಷಯದಲ್ಲಿ ಲೇಖಕರು ವಿವೇಚನೆಗೆ ಸಲ್ಲದ ಏಕ ಪಕ್ಷೀಯ ಸಿದ್ಧಾಂತದ ದಾರಿಯನ್ನು ಹಿಡಿದಿದ್ದಾರೆ, ಪ್ರಾಯಶಃ ಅದು ತಮ್ಮ ಸಿದ್ಧಾಂತಕ್ಕೆ ಸಿಡಿಮದ್ದಾಗುತ್ತದೆ ಎಂಬ ಭೀತಿಯಿಂದಲೋ ಏನೋ ?

ವಿದ್ಯಾತೀರ್ಥರು ಮಾಹೇಶ್ವರರಾಗಿದ್ದರು ಎಂಬ ತೀರ್ಮಾನಕ್ಕೆ ಬರುವಲ್ಲಿಯೂ ಇಂಥದೇ ದುಡುಕನ್ನು ವ್ಯಕ್ತಪಡಿಸಿದ್ದಾರೆ. ಶಾಸನಗಳಲ್ಲಿ ಮತ್ತು ಅನ್ಯತ್ರ ವಿದ್ಯಾತೀರ್ಥರನ್ನು ಸ್ತುತಿ ಮಾಡುವಾಗ ಮಹೇಶ್ವರ ಎಂದು ಹೇಳಿರುವುದು ನಿಜ. ಈ ಹೆಸರನ್ನು ಬಳಸಿದ ಶ್ಲೋಕಗಳು ಸಾಕಷ್ಟಿವೆ. ಅವೆಲ್ಲವನ್ನೂ ಲೇಖಕರು ಸರಿಯಾಗಿ ಗಮನಿಸಿದಂತಿಲ್ಲ. ಅದಕ್ಕೆ ಪ್ರತಿಯಾಗಿ ಮಹೇಶ್ವರ ಎಂದು ಹೇಳುವ ಕೆಲವು ಶ್ಲೋಕಗಳನ್ನು ಮಾತ್ರ ಉದಹರಿಸಿದ್ದಾರೆ. ಅವರು ಉದಹರಿಸಿರುವ ಶ್ಲೋಕಗಳಲ್ಲಿಯೂ ವಿದ್ಯಾತೀರ್ಥರನ್ನು ಗೌರವ ಸೂಚಕವಾಗಿ ಮಹೇಶ್ವರ' ಎಂದು ಸಂಬೋಧಿಸಲಾಗಿದೆಯೇ ವಿನಃ, "ಮಾಹೇಶ್ವರ" ಎಂದು ವರ್ಗ ಸೂಚಕವಾಗಿ ಹೇಳಿಲ್ಲ. ಇವರ ಆಪ್ತ ಶಿಷ್ಯರಾದ ವಿದ್ಯಾರಣ್ಯ, ಭಾರತೀ ತೀರ್ಥ, ಮಾಧವಾಚಾರ್ಯ, ಸಾಯಣ ಮೊದಲಾದವರ ಕೃತಿಗಳಲ್ಲಿ, ತಮ್ಮ ಗುರುಗಳು ಶೈವ ಮಾಹೇಶ್ವರ ಪಂಥಕ್ಕೆ ಸೇರಿದವರೆಂದು ಎಲ್ಲಿಯೂ ಒಂದು ಬಾರಿಯೂ ಹೇಳಿಲ್ಲ. ಆ ಅರ್ಥ ಬರುವಂತಹ ಹೇಳಿಕೆಯೂ ಎಲ್ಲೂ ಬರುವುದಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಲೇಖಕರೇ ಸತ್ಯಸ್ಯ ಸತ್ಯ ಎಂದು ಭಾವಿಸಿರುವ ಕಂಚಿ ಕುಂಭಕೋಣ ಮಠದವರ ಕೃತಿಗಳಲ್ಲೂ ವಿದ್ಯಾತೀರ್ಥರು ಶೈವ ಮಾಹೇಶ್ವರರು ಎಂದು ಹೇಳಿಲ್ಲ. ಹಾಗಿರುವಾಗ ಕೆಲವು ಶ್ಲೋಕಗಳಲ್ಲಿ ಅವರನ್ನು ಮಹೇಶ್ವರ ಎಂದು ಕರೆಯಲಾಗಿದೆ ಎಂಬ ಜೇಡರ ನೂಲಿನ ಎಳೆಯ ಆಧಾರದ ಮೇಲೆ ಚಾರಿತ್ರಿಕ ಅಂಶಗಳಿಗೆ

Sri Vidyabharathi Book Centre, Sringeri

CC-0. In Public Domain. Digitized by eGangotri

ವಿರುದ್ಧವಾದ ಮಾತನ್ನು ಸ್ಥಾಪಿಸುವ ಸಾಹಸವೇಕೆ? ನನಗೇನೋ ಲೇಖಕರು ಈ ವಿಷಯದಲ್ಲಿ ವಿವೇಚನೆಗಿಂತ ಹೆಚ್ಚು ಉತ್ಸಾಹವನ್ನೇ ಪ್ರದರ್ಶಿಸಿದ್ದಾರೆ ಎಂದೆನ್ನಿಸುತ್ತದೆ. ಲೇಖಕರು ವಿದ್ಯಾತೀರ್ಥರ ಬಗ್ಗೆ ಕಂಚಿ ಕುಂಭಕೋಣ ಮಠದವರ ಹೇಳಿಕೆಗಳನ್ನು ನಂಬುವುದು ಬಾರಿಬಾರಿಗೂ ಅಗತ್ಯವಾಗಿ ಅನಗತ್ಯವಾಗಿ ಆ ಮಠದ ಹೇಳಿಕೆಗಳನ್ನು ಉದಹರಿಸುವುದು ಆ ಪೀಠದವರ ಬಗ್ಗೆ ಇವರಿಗಿರುವ ಪ್ರಾಮಾಣಿಕ ಶ್ರದ್ಧೆಯಿಂದ ಪ್ರೇರೇರಿತವಾದದ್ದು, ಎಂಬ ವಿಷಯದಲ್ಲಿಯೇ ನನಗೆ ಸಂದೇಹವಿದೆ. ಲೇಖಕರು ಕಂಚಿ ಕುಂಭಕೋಣದ ಮಠದ ಪಕ್ಷಪಾತಿಗಳಾಗಿರುವುದಕ್ಕೆ ಉದ್ದೇಶವೇನಿರಬಹುದು ಎಂದು ನಾನು ಮುಂದೆ ತೋರಿಸಿಕೊಡುತ್ತೇನೆ.

ಈ ಸಂದರ್ಭದಲ್ಲಿಯೇ ಲೇಖಕರು ಆದಿ ಶಂಕರಾಚಾರ್ಯರ ಬಗ್ಗೆ, ಅವರು ಸ್ಥಾಪಿಸಿದ ಮಠಗಳ ಬಗ್ಗೆ ಹೇಳಿರುವ ಒಂದು ಮಾತನ್ನು ಗಮನಿಸಬೇಕಾಗಿದೆ. ಲೇಖಕರು ಶೃಂಗೇರಿಯ ಮಠದ ಬಗ್ಗೆ ಮಾತನಾಡುತ್ತಾ, ಈ ಮಠ ಶಂಕರಾಚಾರ್ಯರಿಂದ ಸ್ಥಾಪನೆಯಾದದ್ದಲ್ಲ, ಶಂಕರಾಚಾರ್ಯರು ಯಾವ ಮಠಗಳನ್ನೂ ಸ್ಥಾಪಿಸಲಿಲ್ಲ ಎಂದು ಹೇಳುತ್ತಾರೆ. ಶೃಂಗೇರೀ ಮಠದ ಮಾತು ಹಾಗಿರಲಿ, ಆದಿ ಶಂಕರಾಚಾರ್ಯರು ಹಿಂದೂ ಧರ್ಮವನ್ನು ಸಂಘಟಿಸುವ ಸಲುವಾಗಿ ನಾಲ್ಕು ಆಮ್ನಾಯ ಮಠಗಳನ್ನು ಬದರಿ, ದ್ವಾರಕಾ, ಪುರಿಜಗನ್ನಾಥ ಮತ್ತು ಶೃಂಗೇರಿಯಲ್ಲಿ ಸ್ಥಾಪಿಸಿ, ಆ ಪೀಠದ ಪ್ರಥಮಾಧಿಪತಿಗಳಾಗಿ ತಮ್ಮ ನಾಲ್ವರು ಶಿಷ್ಯರನ್ನು ನೇಮಕಮಾಡಿದರು ಎನ್ನುವ ವಿಷಯ ಪ್ರತಿಯೊಬ್ಬರೂ ಒಪ್ಪಿಕೊಂಡಿರುವ ವಿಚಾರ. ಯಾವ ವಿಮರ್ಶಕರೂ, ಇತಿಹಾಸ ತಜ್ಞರೂ ಇದುವರೆಗೂ ಈ ಮಾತನ್ನು ಅಲ್ಲಗಳೆದಿಲ್ಲ. ಲೇಖಕರೇ ಆಧಾರವೆಂದು ಭಾವಿಸುವ ಕಂಚಿ-ಕುಂಭಕೋಣದವರು ಈ ವಿಷಯವನ್ನು ಒಪ್ಪಿಕೊಂಡಿರುವುದೇ ಅಲ್ಲದೆ, ತಮ್ಮದು ಶಂಕರಾಚಾರ್ಯರಿಂದಲೇ ಸ್ಥಾಪಿತವಾದ ಪೀಠ ಎಂದು ಘೋಷಿಸಿದ್ದಾರೆ. ಹೀಗೆ ಜಗಜ್ಜನಿತವಾಗಿರುವ ಈ ವಿಷಯವನ್ನು ಅಲ್ಲಗಳೆಯುವುದಕ್ಕೆ ಲೇಖಕರಿಗೆ ಇರುವ ಚಾರಿತ್ರಿಕ ಆಧಾರಗಳು ಯಾವುವು? ಅಂತಹ ಯಾವ ಪ್ರಬಲ ಆಧಾರವನ್ನೂ ತಮ್ಮ ಲೇಖನದಲ್ಲಿ ಲೇಖಕರು ಕೊಟ್ಟಿಲ್ಲ. ಅವರು ಹೇಳಿರುವ ಏಕೈಕ ಸಾಕ್ಷ್ಯ, ಹೊಳೇನರಸೀಪುರದ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳವರು ಬರೆದಿರುವ "ಶ್ರೀ ಶಂಕರಭಗವತ್ಪಾದ ವೃತ್ತಾಂತ

3

Sri Vidyabharathi Book Centre, Sringeri

CC-O. In Public Domain. Digitized by eGangotri

ಸಾರಸರ್ವಸ್ವ" ಎಂಬ ಗ್ರಂಥ.೯ ಈ ಗ್ರಂಥವನ್ನು ಆಮೂಲಾಗ್ರವಾಗಿ ನಾನು ಓದಿನೋಡಿದ್ದೇನೆ. ಶ್ರೀ ಸಚ್ಚಿದಾನಂದಸರಸ್ವತೀ ಸ್ವಾಮೀಗಳವರು ಉದ್ದಾಮ ಪಂಡಿತರು ಎನ್ನುವ ವಿಷಯದಲ್ಲಿ ನನಗೆ ಅನುಮಾನವೇನೂ ಇಲ್ಲ. ಆದರೆ ಅವರ ಈ ಗ್ರಂಥ ಕೇವಲ ಈ ಸಂದೇಹಗತ ಸರಮಾಲೆ, ಸಂಶಯಗಳ ಸುಳಿ. ಈ ಗ್ರಂಥವನ್ನು "ಶ್ರೀ ಶಂಕರಭಗವತ್ಪಾದರ ಜೀವನ ನಿರಾಕರಣ ಸಾರಸರ್ವಸ್ವ" ಎಂದು ಕರೆದರೆ ಹೆಚ್ಚು ಸಮಂಜಸವಾಗುತ್ತದೆ ಎಂದು ನನ್ನ ಅಭಿಪ್ರಾಯ. ಶ್ರೀ ಶಂಕರಾಚಾರ್ಯರ ಜೀವನ, ಸಾಧನೆಗಳ ಬಗ್ಗೆ 'ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀಸ್ವಾಮೀಗಳ ಕೃತಿಯೊಂದೇ ಉಪಲಬ್ಧ ಕೃತಿಯಲ್ಲ. ನೂರಾರು ತಜ್ಞರಿಂದ ವಿಮರ್ಶಾತ್ಮಕವಾಗಿ ಬರೆಯಲ್ಪಟ್ಟ ನೂರಾರು ಕೃತಿಗಳಿವೆ. ಅವುಗಳನ್ನು ಲೇಖಕರು ಏಕೆ ಉದಹರಿಸಿಲ್ಲ. ಎಲ್ಲವೂ ಬೇಡ, ಶ್ರೀ ಶಂಕರಾಚಾರ್ಯರ ಬಗ್ಗೆ ಅತ್ಯಂತ ಪ್ರಸಿದ್ಧವಾದ ಶ್ರೀ ಬಲದೇವ ಉಪಾಧ್ಯಾಯರಿಂದ ಬರೆಯಲ್ಪಟ್ಟ೧೦ ಶ್ರೀಶಂಕರ ಭಗವತ್ಪಾದರ ಜೀವನದ ಕನ್ನಡ ಅನುವಾದವನ್ನಾದರೂ ಲೇಖಕರು ಓದಿದ್ದಲ್ಲಿ ಅವರಿಂದ ಇಂತಹ ಹೇಳಿಕೆ ಖಂಡಿತವಾಗಿಯೂ ಬರುತ್ತಿರಲಿಲ್ಲ. ಪ್ರಾಯಶಃ ತಮ್ಮ ಸಿದ್ಧಾಂತಕ್ಕೆ ವಿರೋಧವಾಗಬಹುದಾದ ಯಾವುದನ್ನೂ ನೋಡಬಾರದು, ಉದಾಹರಿಸಬಾರದು ಎನ್ನುವ ಸಂಕಲ್ಪವನ್ನು ಮಾಡಿಯೇ ಲೇಖನವನ್ನು ಬರೆಯಲು ಹೊರಟಂತಿದೆ ಶ್ರೀ ಮಲ್ಲಪ್ಪನವರು. ಈ ವಿಷಯದಲ್ಲಿ ಕಂಚಿ-ಕುಂಭಕೋಣ ಮಠದವರ ಹೇಳಿಕೆಗಳೂ ಅಪ್ರಮಾಣಿಕ ಎಂಬುದು ಲೇಖಕರ ಅಭಿಪ್ರಾಯವೇ ?

ಹೀಗೆ ಒಂದು ಕಡೆಯಲ್ಲಿ ಶಂಕರಾಚಾರ್ಯರು ಶೃಂಗೇರಿಯ ಪೀಠವನ್ನು ಸ್ಥಾಪಿಸಿದರು ಎನ್ನುವ ವಿಷಯದಲ್ಲಿಯೇ ಸಂದೇಹ ವ್ಯಕ್ತಪಡಿಸಿದ ಲೇಖಕರು ಮರುಗಳಿಗೆಯಲ್ಲಿಯೇ "ಒಂದು ವೇಳೆ, ಕೇವಲ ಆತ್ಮಾನುಸಂಧಾನದಲ್ಲೇ ನಿರತರಾಗಿದ್ದ ಶಂಕರರು ಶೃಂಗೇರಿ ಮಠವನ್ನು ಸ್ಥಾಪಿಸಿರಬಹುದಾದರೂ, ಅವರ ಬಳಿಕ ಹಲವು ಶತಮಾನಗಳ ಕಾಲ ಅದು ಉಳಿದಿರಲಿಕ್ಕಿಲ್ಲ" ಎನ್ನುತ್ತಾರೆ.

---

೯ "ಶ್ರೀ ಶಂಕರಭಗವತ್ಪಾದ ವೃತ್ತಾಂತ ಸಾರಸರ್ವಸ್ವ"— ಲೇ ; ಶ್ರೀ ಸಚ್ಚಿದಾನಂದೇಂದ್ರ ಸ್ವಾಮೀಗಳವರು (1963).

೧೦ "ಶ್ರೀ ಶಂಕರಾಚಾರ್ಯರು"—ಲೇ; ಬಲದೇವ ಉಪಾಧ್ಯಾಯರು ; ಅನು: ಎಸ್. ರಾಮಚಂದ್ರಶಾಸ್ತ್ರಿ (1964).

Sri Vidyabharathi Book Centre, Sringeri

CC-0. In Public Domain. Digitized by eGangotri

ಎಂತಹ ಶಬ್ದಗಳ ಡೊಂಬರಾಟ ? ಇದು ಎಂತಹ ಸಂಶೋಧನೆಯ ಲಕ್ಷಣ. ತಮಗೇ ಸಂದೇಹವಿರುವ ವಿಷಯಗಳಲ್ಲಿ ಇವರು ಅಭಿಪ್ರಾಯ ವ್ಯಕ್ತಮಾಡುವುದಾದರೂ ಏಕೆ ? ಈ ಸಂದೇಹದ ಸೊಂಕನ್ನು ಯಾರ ಕುತ್ತಿಗೆಗಾದರೂ ಉರುಳಾಗಿ ಬಿಗಿಯಬಹುದು ಎಂಬ ಚಪಲವೆ ? ಐತಿಹಾಸಿಕ ವಿಮರ್ಶೆಯಲ್ಲಿ ಇಂತಹ ಚಪಲ ಖಂಡನೀಯ ಪ್ರಯತ್ನ. ವಸ್ತುಸ್ಥಿತಿ ಶ್ರೀ ಮಲ್ಲಪ್ಪನವರ ಊಹೆಗೆ ವಿರುದ್ಧವಾಗಿದೆ. ಶೃಂಗೇರಿಯ ಪೀಠ ಶಂಕರಾಚಾರ್ಯರಿಂದ ಸ್ಥಾಪಿತವಾದದ್ದಷ್ಟೇ ಅಲ್ಲ, ಅಂದಿನಿಂದ ಇಂದಿನವರೆಗೆ ಅಖಂಡವಾಗಿ, ಅವಿಚ್ಛಿನ್ನವಾಗಿ ನಡೆದುಬಂದಿದೆ. ಶ್ರೀ ಶಂಕರರ ಆದ್ಯಶಿಷ್ಯರಾದ ಸುರೇಶ್ವರಾಚಾರ್ಯರಿಂದ ಹಿಡಿದು ಶ್ರೀ ವಿದ್ಯಾತೀರ್ಥರ ವರೆಗೆ, ಅಷ್ಟೇ ಅಲ್ಲ, ಅಲ್ಲಿಂದ ಇಂದಿನವರೆಗೂ ಶೃಂಗೇರಿಯ ಗುರುಪರಂಪರೆ ಅವಿರತ ಸ್ರೋತವಾಗಿ ನಡೆದುಬಂದಿದೆ ಎನ್ನುವುದಕ್ಕೆ ಲೇಖಕರು ಪ್ರಾಮಾಣಿಕ ಆಧಾರವೆಂದು ನಂಬುವ ‹‹ ಗುರುವಂಶ ಕಾವ್ಯ '' ವೊಂದೇ ಅಲ್ಲದೆ, ಹಲವಾರು ಅನ್ಯತ್ರ ಐತಿಹಾಸಿಕ ಆಧಾರಗಳೂ ಇವೆ. ವಿದ್ಯಾತೀರ್ಥರಿಗಿಂತ ಮುಂಚೆ ಬ್ರಹ್ಮೀಭೂತರಾದ ಹಲವಾರು ಶೃಂಗೇರಿಯ ಪೀಠಾಧಿಪರು ಬರೆದ ಗ್ರಂಥಗಳು, ಅವರ ಶಿಷ್ಯರು ಬರೆದ ಗ್ರಂಥಗಳು ಉಪಲಬ್ಧವಿವೆ. ಬಂಗಾಳ ಸರ್ಕಾರದಿಂದ ಪ್ರಕಟವಾದ ಶ್ರೀ ರಾಜೇಂದ್ರಲಾಲ್‌ಮಿತ್ರರಿಂದ ಬಹಿರಂಗಕ್ಕೆ ಬಂದ ‹‹ಗದ್ಯವಲ್ಲರಿ" ೧೧ ಎನ್ನುವ ‹‹ಶ್ರೀವಿದ್ಯಾ" ಪರವಾದ ಗ್ರಂಥ, ಶಂಕರಾಚಾರ್ಯರಿಂದ ಹಿಡಿದು ವಿದ್ಯಾರಣ್ಯರವರೆಗೆ ಶೃಂಗೇರಿಯ ಗುರುಪರಂಪರೆಯನ್ನು ಈಗ ಶೃಂಗೇರಿಯಲ್ಲಿ ಪ್ರಚಲಿತವಿರುವ ಗುರುಪರಂಪರೆಗೆ ಬಾಚೂ ವ್ಯತ್ಯಾಸವಿಲ್ಲದಂತೆ ಹೇಳಿದೆ. ಇದಕ್ಕೆ ಇನ್ನೂ ಹಲವಾರು ಉದಾಹರಣೆಗಳನ್ನು ಕೊಡಬಹುದು. ಆದರೆ ಲೇಖನ ವಿಸ್ತಾರ ಭಯದಿಂದ ಅವೆಲ್ಲವನ್ನೂ ಸವಿವರವಾಗಿ ಕೊಡದೆ, ಈ ಬಗ್ಗೆ ಶ್ರೀ ಕೆ. ಆರ್. ವೆಂಕಟರಾಮನ್‌ರವರು ಬರೆದ "Throne of Transcendental Wisdom" ಗ್ರಂಥವನ್ನಾದರೂ ಲೇಖಕರು ನೋಡಿ ತಮ್ಮ ಅನುಮಾನವನ್ನು ಪರಿಹರಿಸಿಕೊಳ್ಳಬಹುದು ಎಂದು ಸೂಚಿಸಬಯಸುತ್ತೇನೆ. ಶೃಂಗೇರಿಯ ವಿದ್ಯಾತೀರ್ಥ ಪೂರ್ವ ಗುರುಗಳ ಬಗ್ಗೆ ಶಾಸನಗಳಿಲ್ಲ ಎನ್ನುವ ಏಕೈಕ ಕಾರಣಕ್ಕಾಗಿ ಉಳಿದೆಲ್ಲಾ ಆಧಾರಗಳನ್ನೂ

---

೧೧ Notices ol Samskrit manuscripts—Vol. VII No. 2261 (published by Bengal Covernment).

Sri Vidyabharathi Book Centre, Sringeri

CC-O. In Public Domain. Digitized by eGangotri

ಗಾಳಿಗೆ ತೂರಿಬಿಟ್ಟು, ಆ ಮೊದಲು ಈ ಮಠವೇ ಇಲ್ಲಿಲ್ಲ ಎನ್ನುವುದಾದರೆ, ಮಠದ ಅಸ್ತಿತ್ವಕ್ಕೆ ಶಾಸನಗಳೊಂದೇ ಸಾಕ್ಷಿ ಎಂದು ನಂಬುವುದಾದರೆ, ಶೃಂಗೇರಿಯು ಮಠವಷ್ಟೇ ಅಲ್ಲ. ಈ ದೇಶದಲ್ಲಿರುವ ಎಲ್ಲಾ ಮಠಗಳೂ ಗಾಳಿ ಮಠಗಳು ಎಂದೇ ಕರೆಯಬೇಕಾಗುತ್ತದೆ. ಅಷ್ಟೇಕೆ ,ಶಾಸನಾಧಾರವಿಲ್ಲ ಎಂಬ ಕಾರಣವನ್ನೇ ಆಧಾರವಾಗಿಟ್ಟುಕೊಂಡರೆ, ಅಂತಹ ಆಧಾರವಿಲ್ಲದ ಶಂಕರಾ ಚಾರ್ಯರನ್ನಾಗಲೀ ಹೀಗೆಯೇ ಸಹಸ್ರ ಸಹಸ್ರ ಹಿರಿಯರ ಬಗ್ಗೆಯೇ ಆಗಲಿ ಏನುಮಾಡಬೇಕು ? ಇತಿಹಾಸದ ಪುಟಗಳಿಂದ ಅವುಗಳನ್ನೆಲ್ಲಾ ಒರೆಸಿಹಾಕಿ ಬಿಡಬೇಕೆ ?ಹಾಗಿದ್ದರೆ ಲೇಖಕರು ಕೇವಲ ಭಾರತದಷ್ಟೇ ಅಲ್ಲ, ನೂತನ ವಿಶ್ವ ಇತಿಹಾಸವನ್ನೇ ಬರೆಯಬೇಕಾಗುತ್ತದೆ ಶ್ರೀ ಮಲ್ಲಪ್ಪನವರ ಲೇಖನವನ್ನೋದಿ ದರೆ ಅವರಿಗೆ ಆ ಶಕ್ತಿ ಇದೆ ಎಂದೆನಿಸುತ್ತದೆ ನನಗೆ !

ಐತಿಹಾಸಿಕವಾಗಿ ವಿದ್ಯಾತೀರ್ಥ ಮತ್ತು ವಿದ್ಯಾರಣ್ಯರನ್ನು ಹೆಸರಿಸುವ ವಿಜಯನಗರದ ದೊರೆಗಳ ಪ್ರಾಚೀನ ಶಾಸನಗಳಲ್ಲೂ ಇವರು ಶೃಂಗೇರಿಗೆ ಹೊಸಬರು, ಹೊರಗಿನಿಂದ ಬಂದವರು ಎನ್ನುವ ಸೂಚನೆ ದೊರೆಯುವುದಿಲ್ಲ. ಒಂದನೇ ಹರಿಹರನ ವಿಜಯೋತ್ಸವವನ್ನು ಹೇಳುವ ಶೃಂಗೇರಿಯ ೧ ನೇ ಶಾಸ ನವೇ[1] ಹರಿಹರನು, ತನ್ನ ಸೋದರರೂ ಮತ್ತು ರಾಜ್ಯದ ಇತರ ಹಿರಿಯ ರೊಂದಿಗೆ, ವಿದ್ಯಾತೀರ್ಥ ಭಾರತೀ ತೀರ್ಥರು ವಾಸವಾಗಿದ್ದ ಶೃಂಗೇರಿಗೆ ಬಂದನು ಎಂದು ಸ್ಪಷ್ಟವಾಗಿ ಹೇಳುತ್ತದೆ. ಶಂಗೇರಿ ಪ್ರಾಚೀನ ಧರ್ಮಪೀಠ ವಾಗಿರಲಿಲ್ಲ, ವಿದ್ಯಾತೀರ್ಥರು ಅಲ್ಲಿಗೆ ಬಂದು ಪೀಠವನ್ನು ಸ್ಥಾಪಿಸಿದರು ಎಂದು ಹೇಳುವುದಾದರೆ, ವಿದ್ಯಾತೀರ್ಥರು ಶೃಂಗೇರಿಗೆ ಬರಲು ಕಾರಣವೇನು ? ಅವರಿಗೆ ಮಠ ಸ್ಥಾಪಿಸಲು ಶೃಂಗೇರಿಯಲ್ಲದೆ ಬೇರೆ ಯಾವ ಪವಿತ್ರ ಸ್ಥಳವೂ ಇರಲಿಲ್ಲವೆ ? ಹಾಗೆ ಹೊಸದೊಂದು ಮಠವನ್ನು ಸ್ಥಾಪಿಸುವ ಅವಶ್ಯಕತೆ ಇದ್ದಿದ್ದಲ್ಲಿ ಅಂತಹ ಮಠವನ್ನು ರಾಜಧಾನಿಯೂ, ರಾಮಾಯಣ ಕಾಲದಿಂದಲೂ ಅತ್ಯಂತ ಪವಿತ್ರವೂ ಪ್ರಾಚೀನವೂ ಆದ ಹಂಪೆಯಲ್ಲೇ ಆ ಜಗದ್ಗುರು ಪೀಠವನ್ನು ಸ್ಥಾಪಿಸಲು ವಿಜಯನಗರದ ದೊರೆಗಳಿಗಾಗಲೀ, ವಿದ್ಯಾತೀರ್ಥರಿಗಾಗಲೀ ಏನು ಅಡ್ಡಿ ಇತ್ತು ? ವಿಜಯನಗರ ಬೇಡವಾದರೆ, ವಿದ್ಯಾತೀರ್ಥರ ಮೂಲಸ್ಥಳ

1 E. C. VI SG. I,

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂದು ಹೇಳಲಾದ ಕಂಚಿಯಲ್ಲೇ ಆ ಮಠ ಏಕೆ ಸ್ಥಾಪಿತವಾಗಲಿಲ್ಲ? ಲೇಖಕರ ವಾದವನ್ನು ನಂಬುವುದಾದರೆ ಇಂತಹ ಹಲವಾರು ತರ್ಕಬದ್ಧವಾದ ಪ್ರಶ್ನೆಗಳಿಗೆ ಉತ್ತರ ಹೇಳಬೇಕಾಗುತ್ತದೆ. ಆದರೆ ಅಂತಹ ವಿವೇಚನೆ ಲೇಖಕರ ಉದ್ದೇಶವಿದ್ದಂತೆ ಕಾಣುವುದಿಲ್ಲ. ಅದಕ್ಕೆ ಪ್ರತಿಯಾಗಿ ಈ ವಿಷಯವನ್ನು ಸಾರುವ ಶೃಂಗೇರಿಯ ಶಾಸನಗಳು ಅಪ್ರಾಮಾಣಿಕ ಎಂದು ಹೇಳಿ "ವಿದ್ಯಾತೀರ್ಥರು 1385ರ ವರೆಗೂ ಕಂಚಿ ಕುಂಭಕೋಣ ಪೀಠದ ಜಗದ್ಗುರುಗಳಾದ ಮೇಲೂ ಬದುಕಿದ್ದರು ; ವಿದ್ಯಾತೀರ್ಥರನ್ನು ವಿದ್ಯಾರಣ್ಯರಿಗಿಂತ ಹಿಂದಿನವರು ಎಂದು ಹೇಳಲು ಸಾಧ್ಯವಿಲ್ಲ ಎಂಬ ಕಂಚಿ ಕುಂಭಕೋಣ ಮಠದವರ ದಾಖಲೆಗಳ ಪ್ರಾಮಾಣಿಕತೆಯನ್ನು ಶಂಕಿಸಲು ಯಾವ ಕಾರಣವೂ ಇಲ್ಲ" ಎಂದು ಲೇಖಕರು ಹೇಳುತ್ತಾರೆ. ಶೃಂಗೇರಿಯಲ್ಲಿ ಇರುವ ಶಾಸನ ಸಾಹಿತ್ಯಗಳ[1] ಆಧಾರದಿಂದ ವಿದ್ಯಾತೀರ್ಥರು 1333 ರಲ್ಲಿ ಸಮಾಧಿಸ್ಥರಾದರೆಂದೂ, 1333 ರಿಂದ 1380 ರವರೆಗೆ ಭಾರತೀತೀರ್ಥರೂ, 1380 ರಿಂದ 1386ರವರೆಗೆ ವಿದ್ಯಾರಣ್ಯರೂ ಶೃಂಗೇರಿಯ ಗುರುಗಳಾಗಿದ್ದರೆಂದೂ ಖಚಿತವಾಗಿ ತಿಳಿದುಬರುತ್ತದೆ. ಹೀಗಿರುವಾಗ ಈ ಶಾಸನ ಸಾಕ್ಷ್ಯಕ್ಕೆ ವಿರುದ್ಧವಾಗಿ ಕಂಚಿ ಕುಂಭಕೋಣ ಪೀಠದ ದಾಖಲೆಗಳನ್ನು ನಂಬಲು ಇರುವ ಪ್ರಬಲ ಆಧಾರಗಳಾದರೂ ಏನು ? ಶೃಂಗೇರಿಯಲ್ಲಿರುವ ಶ್ರೀ ವಿದ್ಯಾಶಂಕರ ಮಂದಿರ ವಿದ್ಯಾತೀರ್ಥರ ಸಮಾಧಿ ಮಂದಿರವೆಂದೂ, ಅದು ಭಾರತೀ ತೀರ್ಥ ಮತ್ತು ವಿದ್ಯಾರಣ್ಯರಿಂದ ನಿರ್ಮಿಸಲ್ಪಟ್ಟಿತೆಂದೂ, ಆ ಮಂದಿರದ ಪೂಜೋಪಚಾರಗಳಿಗೆ ವಿಜಯನಗರದ ಅರಸುಗಳು ದತ್ತಿಗಳನ್ನು ಕೊಟ್ಟಿರುವರೆಂದೂ ಖಚಿತವಾಗಿ ತಿಳಿದಿದೆ. ಈ ವಿಷಯವನ್ನು ಹೇಳುವ ಶಾಸನಗಳು ಅಪ್ರಾಮಾಣಿಕ, ಕೃತಕವೆಂದು ಆದುವರೆಗೂ ಯಾವ ಇತಿಹಾಸ ಸಂಶೋಧಕರೂ ಹೇಳಿಲ್ಲ. ಹಾಗಿರುವಾಗ ತಮ್ಮ ಗುರುಗಳನ್ನೂ ಜೀವಂತವಾಗಿರುವಾಗಲೇ ವಿದ್ಯಾರಣ್ಯರು ಅವರಿಗೊಂದು ಸಮಾಧಿ ಮಂದಿರವನ್ನು ಕಟ್ಟಿಸಿದರು, ಇನ್ನೂ ಬದುಕಿದ್ದ ತಮ್ಮ ಗುರುಗಳ ಸಮಾಧಿಗೆ ಅವರ ಅವಿಚ್ಛಿನ್ನ ಶಿಷ್ಯರಾದ ವಿಜಯನಗರದ ಅರಸರು ದತ್ತಿಗಳನ್ನು

---

1 "Throne of Transcendental Wisdom" by Sri K. R. Venkataraman (1967).

Sri Vidyabharathi Book Centre, Sringeri

CC-O. In Public Domain. Digitized by eGangotri

ಕೊಟ್ಟರು ಎನ್ನುವ ಈ ಹಾಸ್ಯಾಸ್ಪದ ಹೇಳಿಕೆಗೆ ಕಂಚಿ ಕುಂಭಕೋಣ ಪೀಠದವರ ದಾಖಲೆಯೊಂದಲ್ಲದೆ ಬೇರೇನು ಸಾಕ್ಷಿಯಿದೆ? ಶೃಂಗೇರಿಯ ಮಠದ ಗುರು ಪರಂಪರೆಗೆ ಶಾಸನಾಧಾರವನ್ನು ಕೋರುವ ಲೇಖಕರಿಗೆ ಕಂಚಿಯಲ್ಲಿ ಅವರಿಗೆ ಶಾಸನಗಳೇನಾದರೂ ದೊರಕಿವೆಯೆ? ಆ ಶಾಸನಗಳು ಪ್ರಕಟವಾಗಿವೆಯೆ? ಹೇಳಬೇಕು. ಹಾಗಿಲ್ಲದೆ, ಇರುವ ಶಾಸನವನ್ನು ಶಂಕಿಸಿ ಯಾರದೋ ಪರಂಪರೆಯ ಪರಾಕನ್ನು ಸತ್ಯವೆಂಬಂತೆ ಮೆರೆಸುವುದು ಪ್ರಬುದ್ಧ ಸಂಶೋಧಕರ ಮಾತಿನಂತೆ ಕಾಣದೆ, ಹುಡುಗುತನದ ಬಡಬಡಿಕೆಯಂತೆ ಕಾಣುತ್ತದೆ.

ಇಂತಹ ಇತಿಹಾಸವನ್ನು ತಲೆಕೆಳಗು ಮಾಡುವ ಪ್ರಯತ್ನವನ್ನೇ ಲೇಖಕರು ಶೃಂಗೇರಿಯ ಮಠದ ಅಸ್ತಿತ್ವದ ಬಗ್ಗೆಯೂ ಮಾಡಿದ್ದಾರೆ. ವಿದ್ಯಾರಣ್ಯರಿಗೆ ಮೊದಲು ಶೃಂಗೇರಿಯಲ್ಲಿ ಮಠವೇ ಇರಲಿಲ್ಲ ಎನ್ನುವುದು ಇವರ ಸಿದ್ಧಾಂತ. ಅದಕ್ಕೆ ಪೋಷಕವಾಗಿ ಅವರು, "ಈ ವಿಷಯದಲ್ಲಿ ಶೃಂಗೇರಿಯ 11ನೇ ಶಾಸನದೊಂದಿಗೆ ಓದಿ ನೋಡಬೇಕು" ಎಂದು ಬರೆದಿದ್ದಾರೆ. ಶೃಂಗೇರಿಯ 1ನೇ ಶಾಸನದ[1] ಕಾಲ 1346–47. ಶೃಂಗೇರಿಯ 11 ನೇ ಶಾಸನದ[2] ಕಾಲ 1662. ಈ ಎರಡು ಶಾಸನಗಳ ನಡುವೆ ಸುಮಾರು ಮೂರು ಶತಮಾನಗಳ ಕಾಲದ ಅಂತರವಿದೆ. ಹಾಗಿದ್ದರೂ, ಈ ಎರಡೂ ಶಾಸನಗಳೂ ಒಂದೇ ಕಾಲಕ್ಕೆ ಸೇರಿದವೇನೋ ಎಂಬ ಭ್ರಮೆ ಮೂಡಿಸುವ ರೀತಿಯಲ್ಲಿ ಹೇಳಿ, ಲೇಖಕರು ವಿದ್ಯಾತೀರ್ಥ ಮತ್ತು ಭಾರತೀ ತೀರ್ಥರ ಕಾಲದಲ್ಲಿ ಶೃಂಗೇರಿಯಲ್ಲಿ ಒಂದು ಮಠವೇ ಇರಲಿಲ್ಲ ಎನ್ನುತ್ತಾರೆ. 1355 ರ ಶೃಂಗೇರಿ 2 ನೇ ಶಿಲಾಶಾಸನ,[3] 1381ರ ತಾಮ್ರಶಾಸನ[4] (ಶೃಂ. 3), 1397 ರ ಶಾಸನ (ಶೃಂ. 4)[5], ಪ್ರತ್ಯಕ್ಷವಾಗಿ ಮತ್ತು ಅಪ್ರತ್ಯಕ್ಷವಾಗಿ ಶೃಂಗೇರಿಯಲ್ಲಿ ಮಠವಿತ್ತು ಎಂದು ಹೇಳುವ ಶೃಂಗೇರಿ ಮಠದ ಹೇಳಿಕೆಗೆ ಸಾಕ್ಷಿಗಳಾಗಿವೆ. 1356 ರ[6] ವೀರ ಬುಕ್ಕಣ್ಣೊಡೆಯರ ಶಾಸನ ಬಹು ಸ್ಪಷ್ಟವಾಗಿ, ಮಠದ ಯತಿಗಳ ಭಿಕ್ಷೆ ಮತ್ತು ಪರಿಚಾರಕರ ಜೀವನಕ್ಕಾಗಿ ಮುನ್ನೂರು ಗದ್ಯಾಣಗಳನ್ನು ದಾನಮಾಡಿದಂತೆ ತಿಳಿಸುತ್ತದೆ. 1387 ರ ಇಮ್ಮಡಿ ಹರಿಹರನ ವಿದ್ಯಾರಣ್ಯಪುರ ಅಗ್ರಹಾರದ

(1 to 6) Selections from the Records Sringeri Mutt Vol. I Ed by Sri B. Ramakrishna Rao (1927).

Sri Vidyabharathi Book Centre, Sringeri

CC-O. In Public Domain. Digitized by eGangotri

ದಾನ ಶಾಸನ[1] ಶೃಂಗೇರಿಯಲ್ಲಿ ಮಠವಿದ್ದುದಕ್ಕೆ ಸಾಕ್ಷಿಯಾಗಿದೆ. ಅಷ್ಟೇ ಅಲ್ಲ, ಶೃಂಗೇರಿಯ 1 ನೇ ಶಾಸನ ಬಹಳ ಸ್ಪಷ್ಟವಾಗಿ "ಭಾರತೀ ತೀರ್ಥ ಶ್ರೀಪಾದಂಗಳೂ, ಅವರ ಶಿಷ್ಯಾದಿಗಳೂ, ಆ ಶೃಂಗೇರಿಯ ತೀರ್ಥವಾಸದಲು ಅನುಷ್ಠಾನ ಮಾಡಿಕೊಂಡಿಹುದಕ್ಕೆ, ಆ ಪರಿಚಾರಕರಾಗಿ ಮಾಡುವ ಬ್ರಾಹ್ಮಣರು ನಾಲ್ವತ್ತಕ್ಕೆ ಕೊಟ್ಟ ಶಿಲಾಶಾಸನ" ಎಂದು ಹೇಳುತ್ತದೆ. ಲೇಖಕರು ಊಹಿಸಿರುವಂತೆ ಈ ಶಾಸನ ಯಾರೋ ಒಬ್ಬ ತುಂಡು ಪಾಳೆಯಗಾರ, ಯಾರೋ ಬಿಡಿ ಸಂನ್ಯಾಸಿಗೆ ಕಾಡಿನಲ್ಲಿ ಜೀವನ ಮಾಡಲು ಕೊಟ್ಟ ಅಗಣ್ಯವಾದ ದಾನವಲ್ಲ. ಐತಿಹಾಸಿಕವಾಗಿ ಈ ಶಾಸನ ಅತ್ಯಂತ ಮಹತ್ವದ್ದು. ಈ ಶಾಸನವಲ್ಲಿ ಭಾರತೀ ತೀರ್ಥರು, ಅವರ ಶಿಷ್ಯರು ಇದ್ದರೆಂದು ಹೇಳುವುದೇ ಅಲ್ಲದೆ, ಅವರ ಪರಿಚಾರಿಕೆಗಾಗಿ ನಲ್ವತ್ತು ಬ್ರಾಹ್ಮಣ ಕುಟುಂಬಗಳಿತ್ತು ಎಂದು ಹೇಳುತ್ತದೆ. ಇಷ್ಟು ಜನ ಒಂದು ಮಠದಲ್ಲಲ್ಲದೆ, ಕಾಡಿನ ಮೂಲೆಯಲ್ಲಿ ತರಗಲು ಜೋಪಡಿಗಳಲ್ಲಿ ವಾಸಮಾಡುತ್ತಿದ್ದರೆ? ಅಂತಹವರಿಗೆ ಮುನ್ನೂರು ಗದ್ಯಾಣಗಳ ದತ್ತಿಕೊಡುವ ಅಗತ್ಯವಾದರೂ ಏನಿತ್ತು? ಅಷ್ಟೇ ಅಲ್ಲ, ಈ ದಾನವನ್ನು ಹರಿಹರ ಕೊಟ್ಟದ್ದು ತನ್ನ ವಿಜಯೋತ್ಸವದ ಸಂದರ್ಭದಲ್ಲಿ, ಆತ ದಾನ ಕೊಟ್ಟ ಕಾಲದಲ್ಲಿ ಆತನ ಸೋದರರಾದ ಕಂಪಣ್ಣ, ಬುಕ್ಕಣ್ಣ, ಮಾರಪ್ಪ, ಮುದ್ದಪ್ಪ, ಇವರೇ ಅಲ್ಲದೆ ಅಳಿಯ ಬಲ್ಲಪ್ಪದಂಡನಾಯಕ, ಕುಮಾರ ಸೋವಣ್ಣ ಒಡೆಯರು ಅಲ್ಲಿದ್ದರು. ಅದೇ ಸಂದರ್ಭದಲ್ಲಿ "ಶ್ರೀಮತ್ ಪಾಂಡ್ಯ ಚಕ್ರವರ್ತಿ ಅರಿರಾಯ ಬಸವಶಂಕರರಾಯ ಗಜಾಂಕುಶ ಮತ್ತು ಶ್ರೀ ವೀರ ಕಿಕ್ಕಾಯಿ ತಾಯಿಯವರು" ಅವರೊಂದಿಗೆ ಇದ್ದು, ಭಾರತೀ ತೀರ್ಥರ ಪರಿಚಾರಕರಿಗಾಗಿ ಕೆಳನಾಡನ್ನೂ, ಕೈಮಲೆಯ ಹೊಸ ಊರನ್ನೂ ದಾನವಾಗಿ ಕೊಟ್ಟರೆಂದು ಹೇಳುತ್ತದೆ. ಈ ದಾನ ಸಮಯದಲ್ಲಿ ಪ್ರತ್ಯಕ್ಷವಾಗಿದ್ದ ಶ್ರೀ ವೀರ ಕಿಕ್ಕಾಯಿ ತಾಯಿ ಮುಮ್ಮಡಿ ಹೊಯ್ಸಳ ಬಲ್ಲಾಳನ ಪಟ್ಟದ ಮಹಾರಾಣಿಯೆಂದೂ, ಪಾಂಡ್ಯಚಕ್ರವರ್ತಿ ಬಸವಶಂಕರರಾಯ ಆ ಕಾಲದಲ್ಲಿ ಬಾರಕೂರಿನ ಸೀಮೆಯನ್ನು ಆಳುತ್ತಿದ್ದ ಕಿಕ್ಕಾಯಿ ತಾಯಿಯ ಮಗನೆಂದೂ ಶ್ರೀಕಪಟರಾಳ ಕೃಷ್ಣರಾಯರು ಶಾಸನಾಧಾರಪೂರಕವಾಗಿ

---

1 ಅದೇ

Sri Vidyabharathi Book Centre, Sringeri

CC-O. In Public Domain. Digitized by eGangotri

ತೋರಿಸಿಕೊಟ್ಟದ್ದಾರೆ.[1] ಈ ಶಾಸನದಲ್ಲಿ ಬರುವ ಅಳಿಯ ಬಲ್ಲಪ್ಪ ದಂಡ ನಾಯಕ ಹೊಯ್ಸಳ ವೀರಬಲ್ಲಾಳನ ಬಲಗೈಯಂತಿದ್ದ ಚಮೂಪತಿ. ರಾಜ್ಯದ ಹಿರಿಯರೆಲ್ಲರೂ ಸೇರಿ ಶೃಂಗೇರಿಯಲ್ಲಿ ಆಚರಿಸಿದ ಈ ಜಯೋತ್ಸವ ಬಲ್ಲಾಳನ ವಿರುದ್ಧ ಹರಿಹರ ಪಡೆದ ಯಾವುದೋ ಒಂದು ಕ್ಷುಲ್ಲಕ ವಿಜಯ ಎಂದು ಲೇಖಕರು ಇದೇ ಲೇಖನದಲ್ಲೇ ಹೇಳಿದ್ದಾರೆ ಹೊಯ್ಸಳ ಬಲ್ಲಾಳನಿಗೂ ಹರಿಹರನಿಗೂ ಯಾವ ದ್ವೇಷವೂ ಇರಲಿಲ್ಲ. ಅವರ ನಡುವೆ ರಾಜ್ಯಕ್ಕಾಗಿ ಹೋರಾಟ ನಡೆಯಲಿಲ್ಲ ಎನ್ನುವುದಕ್ಕೆ ಈ ಶಾಸನಕ್ಕಿಂತ ಬೇರೆ ಸಾಕ್ಷಿ ಬೇಕೆ ? ತನ್ನ ಗಂಡನನ್ನು ಸೋಲಿಸಿ ಸಾಮ್ರಾಜ್ಯವನ್ನು ಲಪಟಾಯಿಸಿದ ಆಶ್ರಿತನ ವಿಜಯೋತ್ಸವಕ್ಕೆ ಬಲ್ಲಾಳನ ಹಿರಿಯ ಪಟ್ಟದರಸಿ ತನ್ನ ಮಗನೊಡನೆ ಬರುತ್ತಿದ್ದಳೆ ? ಇದಾವ ತರ್ಕಬದ್ಧ ಯೋಚನೆಯನ್ನೂ ಲೇಖಕರು ಮಾಡಿಲ್ಲ. ಕಿಕ್ಕಾಯಿತಾಯಿ ಬಲ್ಲಾಳನ ಮಹಿಷಿಯಾಗಿದ್ದಳು ಎನ್ನುವ ಅಂಶ ಲೇಖಕರಿಗೆ ತಿಳಿದಿರಲಿಲ್ಲ ಎಂದು ಊಹಿಸಲು ಯಾವ ಕಾರಣಗಳೂ ಇಲ್ಲ. ಏಕೆಂದರೆ ಅವರು ಈ ಲೇಖನವಿರುವ ಕಪಟರಾಳ ಕೃಷ್ಣರಾಯರ ಗ್ರಂಥದಿಂದಲೇ, ಅವರ ಲೇಖನದ ಬೇರೆಡೆ ಸಾಕಷ್ಟು ಉದಹರಿಸಿದ್ದಾರೆ. ಆದ್ದರಿಂದ ತಮ್ಮ ಲೇಖನಕ್ಕೇ ಸಂಬಂಧಿಸಿದ ಈ ಲೇಖನವನ್ನೂ ಓದಿರಲೇ ಬೇಕು. ಹಾಗಿದ್ದರೂ ಓದುಗರಿಂದ ಈ ಅಂಶವನ್ನು ಮುಚ್ಚಿಟ್ಟಿರುವುದೇಕೆ ? ಇದು ಪ್ರಾಮಾಣಿಕತೆಯ ಲಕ್ಷಣವೆ ? ಅಥವಾ ಓದುಗರನ್ನು ತಿಳಿದೂ ತಿಳಿದೂ ಅಡ್ಡಹಾದಿ ಹಿಡಿಸುವ ಸಂಧಾನವೆ ? ಯೋಚಿಸಬೇಕು. ಅಷ್ಟೇ ಅಲ್ಲ, "ಈ ಶಾಸನದಲ್ಲಿ ಶೃಂಗೇರಿ ಊರಿಗಾಗಲೀ, ಶೃಂಗೇರಿ ಮಠಕ್ಕಾಗಲೀ ಸಂಬಂಧವೇ ಇಲ್ಲ" ಎಂದು ಹೇಳುತ್ತಾರೆ. ಶಾಸನ ಬಹು ಸ್ಪಷ್ಟವಾಗಿ "ಶೃಂಗೇರಿಯ ತೀರ್ಥವಾಸ" ಎಂದು ಯಾವ ಸಂದೇಹಕ್ಕೂ, ಅನುಮಾನಕ್ಕೂ ನುಸುಳು ದಾರಿಗೂ ಅವಕಾಶವಿಲದಂತೆ ಹೇಳುತ್ತದೆ. ಈ ಮಾತು ಲೇಖಕರ ಕಣ್ಣಿಗೆ ಬಿದ್ದಿರಲಿಲ್ಲವೆ ? ಇಷ್ಟೆಲ್ಲಾ ಶಾಸನ ಸಾಕ್ಷ್ಯವಿದ್ದೂ ಶೃಂಗೇರಿಯಲ್ಲಿ ವಿದ್ಯಾರಣ್ಯರಿಗೆ ಮೊದಲು "ಮಠ"ವೇ ಇರಲಿಲ್ಲ ಎನ್ನುತ್ತಾರೆ ಲೇಖಕರು. ಇದ್ದರೂ "ಧರ್ಮ ಪೀಠ" ಇದ್ದಿರಬಹುದು, "ಮಠ"ವಿರಲಿಲ್ಲ

1 "ಕರ್ನಾಟಕ ಸಂಸ್ಕೃತಿಯ ಸಂಶೋಧನೆ" ಲೇ ; ಶ್ರೀ ಕಪಟರಾಳ ಕೃಷ್ಣ ರಾಯರು—ಪು. 248-250.

Sri Vidyabharathi Book Centre, Sringeri

CC-O. In Public Domain. Digitized by eGangotri

ಎನ್ನುತ್ತಾರೆ. ಇವರ ಮಾತಿನ ಅರ್ಥವೇನು ? "ಧರ್ಮಪೀಠ", "ತೀರ್ಥವಾಸ" ಎಂದರೆ ಪರ್ಣಕುಟಿ ಎಂದು ಅರ್ಥವೆ ? ಮಠ ಎನ್ನುವ ಶಬ್ದಕ್ಕೆ ಅರ್ಥವೇನು ? "ಮಠ' ಎನ್ನುವುದಕ್ಕೆ "ಮಠಃಛಾತ್ರಾದಿನಿಲಯಃ । ಬ್ರಹ್ಮಘೋಷೋಭವೇದ್ಯ ಯತ್ರ ಯತ್ರ ಬ್ರಹ್ಮಾಶ್ರಮಿಸ್ಥಿತಿಃ । ಸಂಸ್ಕೃತ ಗ್ರಂಥಗಳು ಎಂದು ಹೇಳುತ್ತವೆ. ಶೃಂಗೇರಿಯ ಪೀಠಕ್ಕೆ ಈ ಲಕ್ಷಣಗಳಿದ್ದುದು ಶಾಸನಗಳಿಂದ ಸ್ಪಷ್ಟವಾಗಿದೆ. ಮಠವಿತ್ತು ಎನ್ನುವುದಕ್ಕೆ ಶಾಸನ ಯಾವ ಪಾರಿಭಾಷಿಕ ಶಬ್ದವನ್ನು ಬಳಸಬೇಕಾಗಿತ್ತು ? ನನಗೆ ಅಷ್ಟು ಸಂಸ್ಕೃತ ತಿಳಿಯದು. ವೇದವೇದಾಂತ ವಿದ್ಯಾವಾಚಸ್ಪತಿಗಳಾದ ಲೇಖಕರೇ ಈ ವಿಷಯದಲ್ಲಿ ಬೆಳಕನ್ನು ಚೆಲ್ಲಿ ನನ್ನ ಅಜ್ಞಾನವನ್ನು ಪರಿಹರಿಸಬೇಕು. ಶೃಂಗೇರಿಯ ಶಾಸನಗಳಲ್ಲಿ ಮಠದ ಬಗ್ಗೆ, ಅಲ್ಲಿಯ ಗುರುಗಳ ಬಗ್ಗೆ ಅತಿಶಯ ಚಮತ್ಕಾರಿಕ ವರ್ಣನೆಯ ಮಾತುಗಳಾವುವೂ ಇಲ್ಲ. ಶೃಂಗೇರಿಯ ಗುರುಗಳು ಯಾರೂ ತಮ್ಮನ್ನು "ಪ್ರತಿದಿನವೂ ಬ್ರಹ್ಮವಿಷ್ಣು ಮಹೇಶ್ವರರು ಬಂದು ಪಾದಪೂಜೆ ಮಾಡುತ್ತಾರೆ" ಎಂದು ಹೇಳಿಕೊಂಡಿಲ್ಲ. ಜಗತ್ತಿನಲ್ಲಿರುವ ಮಠಗಳೆಲ್ಲವೂ ಕಿರಿಯ ಮಠಗಳು, ತಮ್ಮದೊಂದೇ ಏಕಮೇವಾದ್ವಿತೀಯವಾದ ಜಗದ್ಗುರು ಪೀಠವೆಂದು ಕಂಚಿಕುಂಭಕೋಣದ ಮಠದವರ ಹಾಗೆ ಡಂಗುರ ಹೊಡೆದುಕೊಂಡಿಲ್ಲ. ಆದ್ದರಿಂದ ಅಲ್ಲಿ ಮಠವೇ ಇರಲಿಲ್ಲ ಎಂದು ಹೇಳಬೇಕೆ ? ಮಠ ಎಂದರೆ ಸ್ವಚರಣಾರಾಧನೆಯೋ ಎಂದು ಲೇಖಕರ ನಂಬಿಕೆಯೋ ? ನನಗೆ ಅರ್ಥವಾಗುತ್ತಿಲ್ಲ.

ವಿದ್ಯಾತೀರ್ಥರು, ಭಾರತೀತೀರ್ಥರು, ವಿದ್ಯಾರಣ್ಯರು ಇವರ ಬಗ್ಗೆ ಬರೆಯುತ್ತಾ "ವಿಜಯನಗರ ಮತ್ತು ಶೃಂಗೇರಿ ಜಗದ್ಗುರು ಪೀಠದ ಸ್ಥಾಪನೆಯಲ್ಲಿ ಇವರ ಕೊಡುಗೆ ಬಹುಹಿರಿದಾದದ್ದು ......ಆದರೆ ಅವರು ಈ ಪೀಠದ ಜಗದ್ಗುರುಗಳಾಗಿರಲಿಲ್ಲ". ಶೃಂಗೇರಿ ಮಠದವರು "ತಮ್ಮ ಪರಂಪರೆಯನ್ನು ಶ್ರೀ ಶಂಕರಾಚಾರ್ಯರವರೆಗೂ ಕೊಂಡೊಯ್ಯಲು ಕಂಚಿಕುಂಭಕೋಣ ಮಠದ ವಿದ್ಯಾತೀರ್ಥರು, ಅವರ ಶಿಷ್ಯರೂ, ವಿದ್ಯಾರಣ್ಯರ ಕಿರಿಯ ಸೋದರರೂ ಆದ ಭಾರತೀತೀರ್ಥರ ಹೆಸರನ್ನು ತಮ್ಮ ಗುರು ಪರಂಪರೆಯಲ್ಲಿ ಸೇರಿಸಿಕೊಂಡಿದ್ದಾರೆ ಎಂದು ತೋರುತ್ತದೆ" ಎಂದು ಹೇಳಿದ್ದಾರೆ. ಈ ಅರ್ಥವಾಗದ ವ್ಯರ್ಥಾ

Sri Vidyabharathi Book Centre, Sringeri

CC-O. In Public Domain. Digitized by eGangotri

ಲಾಪಕ್ಕೆ ಏನು ಆಧಾರ ? ಶೃಂಗೇರಿಯಲ್ಲಂತೂ ಯಾವ ಆಧಾರವೂ ಇಲ್ಲ. ಕಂಚಿಯಲ್ಲೂ ಆ ಮಠದವರು ಹೇಳುವುದನ್ನು ಬಿಟ್ಟರೆ, ಬೇರೆ ಯಾವ ಆಧಾರವೂ ಇಲ್ಲ. ಶೃಂಗೇರಿಯಲ್ಲಿ ವಿದ್ಯಾತೀರ್ಥರಿಗೆ, ಭಾರತೀತೀರ್ಥರಿಗೆ, ವಿದ್ಯಾರಣ್ಯರಿಗೆ ಶಾಸನಧಾರಗಳಿವೆ. ಕಂಚಿಯಲ್ಲಿ ? ಮೇಲೆ ಹೇಳಿದವರ ಬಗ್ಗೆ ಇರಲಿ. ವಿಜಯನಗರದ ಅರಸರ ಕಾಲಕ್ಕೆ ಕಂಚಿಯಲ್ಲೊಂದು ಶಂಕರಮಠವಿತ್ತು ಎನ್ನುವುದಕ್ಕೆ ಏನಾದರೂ ಶಾಸನಾಧಾರವಿದೆಯೆ ? ಕಂಚಿಯ ಹಲವಾರು ದೇವಾಲಯಗಳಿಗೆ ವಿಜಯನಗರದ ಅರಸರು ಧಾರಾಳವಾಗಿ ದಾನ ಕೊಟ್ಟ ಹಲವಾರು ಶಾಸನಗಳಿವೆ. ಕಂಚಿಯವರೇ ಆದ, ವಿಜಯನಗರದ ಸಂಸ್ಥಾಪಕರೇ ಆದ ಈ ಮೂವರ ಆಚಾರ್ಯರ ಹೆಸರಿನಲ್ಲಿ, ಮೂವರಲ್ಲಿ ಯಾರೊಬ್ಬರ ಹೆಸರಿನಲ್ಲಾದರೂ ಒಂದೇ ಒಂದು ದಾನಕೊಟ್ಟ ಶಾಸನವಿದೆಯೆ ? ಪ್ರಾಯಶಃ ಶೃಂಗೇರಿಗೆ ಬಂದಮೇಲೆ ಈ ಆಚಾರ್ಯರೂ, ಅವರ ಶಿಷ್ಯರೂ ಕಂಚಿಯನ್ನು ಮರತೇ ಬಿಟ್ಟರು ಎಂದು ಕಾಣುತ್ತದೆ ! ಶೃಂಗೇರಿಯಲ್ಲಿ ವಿದ್ಯಾರಣ್ಯರು ಜಗದ್ಗುರುಗಳಾಗಿದ್ದಾಗ ಅವರ ಗುರುಗಳಾಗಿದ್ದ ವಿದ್ಯಾತೀರ್ಥರು ಇನ್ನೂ ಕಂಚಿ ಕುಂಭಕೋಣಮಠದ ಜಗದ್ಗುರುಗಳಾಗಿದ್ದರು ಎಂದು ಹೇಳುತ್ತಾರೆ. ಹಾಗಾದರೆ ತಮ್ಮ ಗುರುಗಳನ್ನು ಮರೆತುಬಿಡುವಂತಹ ದ್ರೋಹಿಗಳೇ ವಿದ್ಯಾರಣ್ಯರು ? ತಮ್ಮ ಸಾಮ್ರಾಜ್ಯಸ್ಥಾಪಕರಾದ ಹಿರಿಯರನ್ನು ಮರೆಯುವಷ್ಟು ಕೃತಘ್ನರೇ ವಿಜಯನಗರದ ಅರಸರು ? ಶೃಂಗೇರಿಯಲ್ಲಿರುವ ವಿದ್ಯಾಶಂಕರ ಮಂದಿರ ಯಾರ ಸಮಾಧಿ ? ಕಂಚಿಯಲ್ಲೇಕೆ ವಿದ್ಯಾತೀರ್ಥರ ಸಮಾಧಿ ಮಂದಿರ ಇಲ್ಲ ? ಅದು ಬೇರೆಲ್ಲಿದೆ ? ಈ ಯಾವ ಯೋಚನೆಗಳಿಗೂ ಸತ್ಯಾನ್ವೇಷಣೆಯ ನಿಷ್ಠರಾದ ಲೇಖಕರು ತಲೆಯನ್ನು ಕೆಡಿಸಿಕೊಂಡಂತಿಲ್ಲ. ಅದನ್ನು ಬಿಟ್ಟು, ಸುರೇಶ್ವರಾಚಾರ್ಯರು 800 ವರ್ಷಗಳು ಬದುಕಿದ್ದರು ಎಂದು ಶೃಂಗೇರಿಯ ಪರಂಪರೆಯ ಬಗ್ಗೆ ತಪ್ಪು ಅಭಿಪ್ರಾಯ ಬರುವಂತೆ ಹೇಳಿದ್ದಾರೆ. ಶೃಂಗೇರಿಯ ಪರಂಪರೆ ಈ ಮಾತನ್ನು ಎಂದೂ, ಎಲ್ಲೂ ಹೇಳಿಲ್ಲ. ಸುರೇಶ್ವರಾಚಾರ್ಯರು ತಮ್ಮ ಪೀಠದ ಜಗದ್ಗುರುಗಳು ಎಂದು ಹೇಳಿದ್ದಾರೆ. ಇದು ಶೃಂಗೇರಿಯ ಮಠದವರು ಮಾತ್ರವೇ ಹೇಳುವ ಮಾತಲ್ಲ. ಶಂಕರಾಚಾರ್ಯರ ಬಗ್ಗೆ ಬರೆದ ಪ್ರತಿಯೊಬ್ಬರೂ ಒಪ್ಪಿರುವ ವಿಚಾರ—ಶೃಂಗೇರಿಯ ಪರಂಪರೆಯಲ್ಲಿ ಸುರೇಶ್ವರಾಚಾರ್ಯರು 834ರ ವರೆಗೆ ಪೀಠಾಧಿಪತಿಗಳಾಗಿದ್ದರೆಂದು ಹೇಳು

Sri Vidyabharathi Book Centre, Sringeri

CC-O. In Public Domain. Digitized by eGangotri

ತ್ತಾರೆ. ಹಾಗೆಯೇ ಶೃಂಗೇರಿಯ ಮಠ ಪರಂಪರೆ ಶಂಕರಾಚಾರ್ಯರಿಂದ ಪ್ರಾರಂಭವಾಯಿತು ಎಂಬ ಹೇಳಿಕೆ ಶೃಂಗೇರಿ ಮಠದ ಏಕಪಕ್ಷೀಯವಾದ ಹೇಳಿಕೆಯಲ್ಲ, ಎಲ್ಲರೂ ಒಪ್ಪಿರುವ ವಿಚಾರ. ಅವರಿವರೇಕೆ ? ಲೇಖಕರು ತಮ್ಮ ಲೇಖನದಲ್ಲಿ ಬೇರೊಂಡೆಡೆ, ಬೇರೊಂದು ವಿಷಯಕ್ಕೆ ಪ್ರಮಾಣವೆಂದು ಭಾವಿಸುವ, ಶೃಂಗೇರಿಯ ಪರಂಪರೆಗೆ ಸೇರಿದ ವಿದ್ಯಾರಣ್ಯರ ಕಿರಿಯ ಸಮಕಾಲೀನರಾಗಿದ್ದ ಬ್ರಹ್ಮಾನಂದ ಭಾರತಿಯೇ ತನ್ನ "ಪುರುಷಾರ್ಥ ಪ್ರಬೋಧ"[1] ದಲ್ಲಿ ಶೃಂಗೇರಿಯ ಗುರುಪರಂಪರೆಗೆ ಶಂಕರಾಚಾರ್ಯರೇ ಆದ್ಯರು ಎಂದು ಹೇಳಿದ್ದಾರೆ. ಶೃಂಗೇರಿಯ ಗುರುಪರಂಪರೆ ವಿದ್ಯಾರಣ್ಯರಿಂದ ಆರಂಭವಾಯಿತು ಎಂದು ಹೇಳಿಲ್ಲ[1]. ಹಾಗಿದ್ದರೂ ಈ ಎಲ್ಲಾ ಪ್ರಬಲ ಆಧಾರಗಳನ್ನೂ ಒತ್ತಟ್ಟಿಗೆ ತಳ್ಳಿ, ಕೆಲವು ಶಾಸನಗಳಲ್ಲಿ ಶೃಂಗೇರಿಯ ಗುರು ಪರಂಪರೆಯ ಬಗ್ಗೆ, ವಿದ್ಯಾರಣ್ಯ ಪರಂಪರೆ ಎಂದು ಹೇಳಿರುವ ಮಾತನ್ನೇಪಟ್ಟಾಗಿ ಹಿಡಿದು, ಅವರಿಗಿಂತ ಮುಂಚೆ ಶೃಂಗೇರಿಯಲ್ಲಿ ಮಠವೇ ಇರಲಿಲ್ಲವೆಂದು ಹೇಳಿ, ಶಂಕರಪರಂಪರೆಯನ್ನು ಸ್ಮರಿಸುವ ಶಾಸನಗಳನ್ನು ಲೇಖಕರ ವಾದದಲ್ಲಿ ಎಷ್ಟು ಪ್ರಾಮಾಣಿಕತೆಯಿದೆಯೋ ನೋಡಬೇಕು. ಕೆಲವು ಶಾಸನಗಳು ಶಂಕರರನ್ನು ಬಿಟ್ಟು ವಿದ್ಯಾರಣ್ಯರನ್ನು ಸ್ಮರಿಸುತ್ತವೆ, ನಿಜ. ಅದಕ್ಕೆ ಕಾರಣ, ಶೃಂಗೇರಿಯ ಗುರುಮಾಲಿಕೆಯಲ್ಲಿ ವಿದ್ಯಾರಣ್ಯರಿಗಿರುವ ಪ್ರಧಾನ ಸ್ಥಾನ, ಶೃಂಗೇರಿ ಒಂದು ಸಂಸ್ಥಾನವಾದದ್ದು, ಅದಕ್ಕೆ ಅಗಾಧವಾಗಿ ಭೂಕನಕ ಸಂಪತ್ತು ಬಂದದ್ದು, ಇಂದು ಆ ಮಠದಲ್ಲಿ ನಡೆಯುತ್ತಿರುವ ವೈಭವೋಪೇತ ಉತ್ಸವಗಳು ಇವೆಲ್ಲವೂ ವಿದ್ಯಾರಣ್ಯರ ಕಾಲದಲ್ಲಿ ಆರಂಭವಾದುದು ಎಂಬುದನ್ನು ಶೃಂಗೇರಿಯ ಗುರುಗಳು ಇಂದಿಗೂ ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಹಾಗೆಂದ ಮಾತ್ರಕ್ಕೆ ಶಂಕರಾಚಾರ್ಯರ ಸಂಬಂಧವಿರಲೇ ಇಲ್ಲ. ಎನ್ನುವುದು ತರ್ಕಬದ್ಧವಾದೀತೆ ? ಇಂಥದೇ ತರ್ಕಶೂನ್ಯ ವಿವೇಚನೆಯನ್ನು ಶೃಂಗೇರಿ ಮಠದ ಅಧಿಕಾರ ಮುದ್ರೆಯಾದ "ವಿದ್ಯಾಶಂಕರ" ಎನ್ನುವ ಮುದ್ರಿಕೆಯ ಬಗ್ಗೆಯೂ ಮಾಡಿದ್ದಾರೆ. ಇಂತಹ ಹತ್ತಾರು ನಿದರ್ಶನಗಳಿವೆ. ಅವೆಲ್ಲವನ್ನೂ ವಿವರಿಸಲು ಹೊರಟರೆ

---

1 "ಕರ್ನಾಟಕ ಸಂಸ್ಕೃತಿಯ ಸಂಶೋಧನೆ—ಲೇ : ಕಪಟರಾಳ ಕೃಷ್ಣರಾಯರು , ಪು. 264.

Sri Vidyabharathi Book Centre, Sringeri

CC-O. In Public Domain. Digitized by eGangotri

ಒಂದು ಗ್ರಂಥವನ್ನೇ ಬರೆಯಬೇಕಾಗುತ್ತದೆ. ಅಷ್ಟು ಕಾಲಾವಕಾಶವಿಲ್ಲ, ಅಂತೆಯೇ, ವಿಜಯನಗರ ಸಾಮ್ರಾಜ್ಯದ ಸ್ಥಾಪಕರೂ, ಶೃಂಗೇರಿಯ ಪೀಠದ ಸ್ಥಾಪಕರೂ, ಆ ಮಠದ ಪರಂಪರೆಯ ಪ್ರಾಚೀನತೆಯ ಬಗೆಗೆ ಲೇಖಕರ ಹೇಳಿಕೆಗಳು ಇತಿಹಾಸ, ಶಾಸನ, ಸಂಪ್ರದಾಯ, ಇತರ ಸಾಕ್ಷಿಗಳು ಎಲ್ಲಕ್ಕೂ ವಿರೋಧವಾದ ಗಾಳಿಗೋಪುರ ಎಂದು ಹೇಳಿ ಈ ಪ್ರಕರಣವನ್ನು ಮುಗಿಸಿ ಶ್ರೀಮಲ್ಲಪ್ಪನವರ ಲೇಖನದ ಕೇಂದ್ರ ವಸ್ತುವಿನತ್ತ ಮುಂದುವರೆಯುತ್ತೇನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ವಿದ್ಯಾರಣ್ಯರು ಯಾರು ?

ತಮ್ಮ ಲೇಖನದಲ್ಲಿ ವಿದ್ಯಾರಣ್ಯರು ಅಲಂಕರಿಸಿದ ಶೃಂಗೇರಿಯ ಪೀಠ, ಅದರ ಪರಂಪರೆಯ ಬಗ್ಗೆ ಸಾಕಷ್ಟು ಅಸಂಬದ್ಧ ಹೇಳಿಕೆಗಳನ್ನು ಮಾಡಿಯೂ, ವಿದ್ಯಾರಣ್ಯರೇ ವಿಜಯನಗರದ ಸಂಸ್ಥಾಪಕರು ಎಂದು ಶ್ರೀ ಮಲ್ಲಪ್ಪನವರು ಒಪ್ಪಿಕೊಳ್ಳುತ್ತಾರೆ ; ಆ ಹೆಸರಿನ ಪುಣ್ಯ ! ಈಗ ಈ ವಿದ್ಯಾರಣ್ಯರು ಯಾರು ಎಂಬ ಸಮಸ್ಯೆಯ ಪರಿಷ್ಕರಣಕ್ಕೆ ಲೇಖಕರು ತೊಡಗುತ್ತಾರೆ. ವಿಜಯನಗರ ಸಂಸ್ಥಾಪಕರಾದ ವಿದ್ಯಾರಣ್ಯರು ಯಾರು ? ಎನ್ನುವ ಸಮಸ್ಯೆ ಇಂದಿನದಲ್ಲ. ಬಹುದಿನಗಳಿಂದಲೂ ವಿಮರ್ಶಕರನ್ನು ಕಾಡಿದೆ. ವೇದಭಾಷ್ಯವನ್ನು ಬರೆದ ಸಾಯಣರ ಸಹೋದರರು, ಬುಕ್ಕರಾಯನ ಅಮಾತ್ಯರೂ ಆಗಿದ್ದ ಮಾಧವಾಚಾರ್ಯರೇ ಸಂನ್ಯಾಸಾಶ್ರಮ ಸ್ವೀಕರಿಸಿದ ಬಳಿಕ ವಿದ್ಯಾರಣ್ಯರೆಂಬ ಯತಿನಾಮಧಾರಣೆ ಮಾಡಿದರೆ ? ಎನ್ನುವ ದಾರಿಯಲ್ಲಿ ಕೆಲವರು ಚಿಂತನೆ ಮಾಡಿ, ಆ ಮಾಧವಾಚಾರ್ಯರೇ ವಿದ್ಯಾರಣ್ಯರಿರಬೇಕು ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ಆದರೆ ಇದಮಿತ್ಥಂ ಎಂದು ಆ ತೀರ್ಮಾನವು ಅಂಗೀಕರಿಸಲ್ಪಟ್ಟಿಲ್ಲ. ಅದನ್ನು ಬಿಟ್ಟು ಆ ಕಾಲದಲ್ಲಿ ಬನವಾಸಿಯ ಮಂಡಲಾಧಿಕಾರಿಯಾಗಿದ್ದು. ವಿಜಯನಗರ ಸಾಮ್ರಾಜ್ಯ ವಿಸ್ತರಣೆಗೆ ಬಹ

Sri Vidyabharathi Book Centre, Sringeri

 CC-O. In Public Domain. Digitized by eGangotri

ವಾಗಿ ಶ್ರಮಿಸಿದ ಮಾಧವಮಂತ್ರಿಯೇ ವಿದ್ಯಾರಣ್ಯರಾಗಿದ್ದಿರಬಹುದೇ ? ಎಂದು ಕೆಲವರು ತರ್ಕಿಸಿದ್ದಾರೆ. ಆ ತರ್ಕವು ಎಲ್ಲರಿಂದಲೂ ಒಪ್ಪಲ್ಪಟ್ಟಿಲ್ಲ. ಶೃಂಗೇರಿಯ ಮಠ ಪರಂಪರೆ ಈ ಇಬ್ಬರು ಮಾಧವರೂ ವಿದ್ಯಾರಣ್ಯರೆಂದು ಹೇಳುವುದಿಲ್ಲ. ಅವರೇ ಪ್ರತ್ಯೇಕ ವ್ಯಕ್ತಿಯೆಂದು ಮೊದಲಿನಿಂದಲೂ ನಂಬಿದ್ದಾರೆ. ಇಂದಿಗೂ ಆ ನಂಬಿಕೆಯನ್ನು ಬದಲಾಯಿಸಿಲ್ಲ. ಲೇಖಕರು ಈ ಮೂರು ವಾದವನ್ನೂ ಅಂಗೀಕಾರಾರ್ಹವಲ್ಲ ಎಂದು ತಳ್ಳಿ ಹಾಕಿ ಆರಂಭದಲ್ಲಿ ವಿಜಯ ನಗರ ಸಾಮ್ರಾಜ್ಯಸ್ಥಾಪನೆಗೆ ಸ್ಫೂರ್ತಿಶಕ್ತಿಯಾಗಿದ್ದು, ಆ ಕಾರ್ಯಕ್ಕೆ ಗೂಡಿದ ಬಳಿಕ ವಿದ್ಯಾರಣ್ಯವೆಂಬ ಯತಿನಾಮವನ್ನು ಧರಿಸಿದ ಶೃಂಗೇರಿ ಪೀಠದ ಜಗದ್ಗುರುವಾದ ವ್ಯಕ್ತಿ ಬೇರೆಯವನೇ ಇರಬೇಕೆಂದು ತರ್ಕಿಸಿ, ಆತ ಯಾರಿರ ಬಹುದು ಎಂದು ತಡಕಾಡಿ, ಕೊನೆಗೆ ಬನವಾಸಿಯ ಮಂಡಲಾಧಿಕಾರಿ ಮಾಧವ ಮಂತ್ರಿಯ ಗುರುವಾಗಿದ್ದ ಕ್ರಿಯಾಶಕ್ತಿ ಆಚಾರ್ಯರೇ ವಿದ್ಯಾರಣ್ಯ ರಿರಬೇಕು ಎಂಬ ತೀರ್ಮಾನಕ್ಕೆ ಬಂದಿದ್ದಾರೆ- ಈ ತೀರ್ಮಾನವೇನೂ ಹೊಸದಲ್ಲ. 1917ರಷ್ಟು ಹಿಂದೆಯೇ ಡಾ|| ಎ. ವೆಂಕಟಸುಬ್ಬಯ್ಯನವರು ಮಿಥಿಕ್ ಸೊಸೈಟಿಯ ಪತ್ರಿಕೆಯಲ್ಲಿ "ರಾಜಗುರುಕ್ರಿಯಾಶಕ್ತಿ" ಎನ್ನುವ ಲೇಖನದಲ್ಲಿ ಈ ತೀರ್ಮಾನಕ್ಕೆ ಬಂದಿದ್ದರು.* ಈ ಬಗ್ಗೆ ಡಾ|| ಎ. ವೆಂಕಟ ಸುಬ್ಬಯ್ಯನವರ ಲೇಖನವನ್ನೂ, ಶ್ರೀ ಮಲ್ಲಪನವರು ಹೂಡಿರುವ ವಾದ ವ್ಯೂಹವನ್ನೂ ಕೂಲಂಕಶವಾಗಿ ಪರಿಶೀಲನೆ ಮಾಡಿದ್ದೇನೆ. ವಿಜಯನಗರದ ಸಂಗಮವಂಶದ ಅರಸರ ಕಾಲದ ಕ್ರಿಯಾಶಕ್ತಿ ಆಚಾರ್ಯರಿಗೆ ಸಂಬಂಧಿಸಿದ ಎಲ್ಲಾ ಶಾಸನಗಳನ್ನೂ ಅಧ್ಯಯನ ಮಾಡಿದ್ದೇನೆ. ತಮ್ಮ ವಾದಕ್ಕೆ ಈ ಶಾಸನಗಳನ್ನೇ ಆಧಾರವಾಗಿ ನಂಬಿದ ಡಾ|| ವೆಂಕಟಸುಬ್ಬಯ್ಯನವರಾಗಲೀ, ಶ್ರೀ ಮಲ್ಲಪ್ಪನವರಾಗಲೀ ಈ ಶಾಸನಗಳನ್ನು ಕಾಲಾನುಕ್ರಮವಾಗಿ ವಿಂಗಡಣೆ ಮಾಡಿ, ವಿದ್ಯಾರಣ್ಯರಾಗಿರಬಹುದಾದ ಕ್ರಿಯಾಶಕ್ತಿಯಾರು ಎಂದು ಖಚಿತ ವಾಗಿ ಹೇಳುವುದಿಲ್ಲ. ಇವರಿಬ್ಬರ ಲೇಖನಗಳನ್ನೂ ನೋಡಿದಾಗ, ಈ ಇಬ್ಬರೂ ಈ ಎಲ್ಲಾ ಶಾಸನಗಳೂ ಒಬ್ಬ ಕ್ರಿಯಾಶಕ್ತಿಗೇ ಸಂಬಂಧಿಸಿದವು ಎಂದು ತಿಳಿದಿ

Q. J. M. S. Vol. VIII No. 2- "Rajaguru Kriyasakti" by Dr. A. Venkata Subbiah.

Sri Vidyabharathi Book Centre, Sringeri

CC-O. In Public Domain. Digitized by eGangotri

ರುವಂತಿದೆ. ಅದು ತಪ್ಪು. ಈ ಕೆಳಗೆ, ಕ್ರಿಯಾಶಕ್ತಿ ಆಚಾರ್ಯರಿಗೆ ಸಂಬಂಧಿಸಿದ ಶಾಸನಗಳ ಕಾಲಕ್ರಮವಾದ ಪಟ್ಟಿಯನ್ನು ಕೊಟ್ಟಿದ್ದೇನೆ. ಕ್ರಿಯಾಶಕ್ತಿಯ ಹೆಸರು ವಿಜಯನಗರದ ಅರಸರ ಸಂಬಂಧದಲ್ಲಿ ಮೊದಲು ಕಾಣಿಸಿಕೊಳ್ಳುವುದು 1347ರ ಸೊರಬದ ಶಾಸನದಲ್ಲಿ.

1 ಸೊರಬ ಶಾಸನ—E. C. VIII (ಸೊರಬ 375)—ಕಾಲ 1347

2 ಶಿಕಾರಿಪುರ — E. C. VII (S. K. 281) — ಕಾಲ 1368.

3 ಚನ್ನರಾಯಪಟ್ಟಣ—E. C. V (258)—1378

4 ಗದುಗಿನ ತಾಮ್ರ ಶಾಸನ—(A.R.S.I.E.—1924-25) ಕಾಲ 1379.

5 ಹೊಸ ಹಳ್ಳಿ—(J. B. H. S. 1928)—ಕಾಲ 1384

6 ಮುಳಬಾಗಿಲು—(E.C. X. MB 11) ಕಾಲ 1388.

7 M. A. R. 1912 — ೨ ಶಾಸನಗಳು—ಕಾಲ 1398 1399.

8 ಕೊಪ್ಪ (EC. VI-53) ಕಾಲ 1403

9 ದಾವಣಗೆರೆ (EC IX-23 ಕಾಲ 1410

10 A.R.S.I.E–1931 ಕಾಲ 1431.

ಈ ಶಾಸನಗಳೇ ಅಲ್ಲದೆ ಗಂಗಾಂಬಿಕೆಯ "ಮಧುರಾವಿಜಯ", ತೆಲುಗುಕವಿ ಶ್ರೀನಾಥ ಮತ್ತು ಕನ್ನಡದ ಲಕ್ಕಣದಂಡೇಶ ಇವರು ಕ್ರಿಯಾಶಕ್ತಿ ಆಚಾರ್ಯವನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ತಮ್ಮ ಕೃತಿಗಳಲ್ಲಿ ಹೆಸರಿಸುತ್ತಾರೆ. ಈ ಎಲ್ಲಾ ಶಾಸನಗಳನ್ನೂ ಕೂಲಂಕಶವಾಗಿ ಅಧ್ಯಯನ ಮಾಡಿದಾಗ ಈ ಶಾಸನಗಳಲ್ಲಿ ಮತ್ತು ಇತರ ಮೂಲಗಳಲ್ಲಿ ಹೆಸರಿಸಲ್ಪಟ್ಟ ಕ್ರಿಯಾಶಕ್ತಿ ಒಬ್ಬನೇ ಅಲ್ಲ, ಬೇರೆ ಬೇರೆ ಎಂಬುದು ಸ್ಪಷ್ಟವಾಗುತ್ತದೆ. ಸೊರಬ, ಶಿಕಾರಿಪುರದ ಶಾಸನಗಳು ಕಾಶಿವಿಲಾಸಕ್ರಿಯಾಶಕ್ತಿಗೆ ಸಂಬಂಧಪಟ್ಟವು. ಗದಗಿನ 1379ರ ಶಾಸನದಲ್ಲಿ ಬರುವ ಕ್ರಿಯಾಶಕ್ತಿ, ರಾಜರಾಜಗುರು ಪಿತಾಮಹ ವಾಣಿವಿಲಾಸ ಕ್ರಿಯಾಶಕ್ತಿ. ಮುಳಬಾಗಿಲಿನ ಶಾಸನದಲ್ಲಿ ಬರುವ ಕ್ರಿಯಾಶಕ್ತಿ ಯಾರು ಎಂದು ಹೇಳದಿದ್ದರೂ ಆ ಶಾಸನದ ಇತರ ವಿಚಾರಗಳಿಂದ ವಿದ್ಯಾಶಂಕರ ಕ್ರಿಯಾಶಕ್ತಿ ಎಂದು ಊಹಿಸಲಾಗಿದೆ. ೧ನೇ ದೇವರಾಯನ ಆಸ್ಥಾನಕ್ಕೆ ಬಂದ ಶ್ರೀನಾಥ, ತನ್ನನ್ನು ಗೌರವಿಸಿದ ಕ್ರಿಯಾಶಕ್ತಿ ಚಂದ್ರಭೂಷಣಕ್ರಿಯಾಶಕ್ತಿ ಎಂದು ಸ್ಪಷ್ಟವಾಗಿ ಹೇಳಿದ್ದಾನೆ. ಆದುದರಿಂದ ಈ ಶಾಸನಗಳಲ್ಲಿ ಉಲ್ಲೇಖಿತವಾದ ಕ್ರಿಯಾಶಕ್ತಿ ಒಬ್ಬನೇ ಅಲ್ಲ ಬೇರೆ ಬೇರೆ ಎಂಬುದು ಸುಸ್ಪಷ್ಟ. "ಮಧುರಾವಿಜಯ" ದಲ್ಲಿ ಗಂಗಾಬಿಕೆ ಹೇಳುವ ಕ್ರಿಯಾಶಕ್ತಿ ಸೊರಬ, ಶಿಕಾರಿಪುರ ಮತ್ತು ಚನ್ನರಾಯಪಟ್ಟಣದ ಶಾಸನಗಳಲ್ಲಿ ಬರುವ ಕಾಶಿವಿಲಾಸ ಕ್ರಿಯಾಶಕ್ತಿಯೇ ಇರಬೇಕು. ಈ ಕ್ರಿಯಾಶಕ್ತಿ ಸುಮಾರು 1379ರ ಗದಗಿನ ಶಾಸನದ ವೇಳೆಗೆ ತೀರಿಕೊಂಡು ಆತನ ನಂತರ ಆತನ ಶಿಷ್ಯನಾದ ವಾಣೀವಿಲಾಸ ಕ್ರಿಯಾಶಕ್ತಿ ರಾಜಗುರು ಪೀಠಕ್ಕೆ ಬಂದಿರಬೇಕು. ೧ನೇ ದೇವರಾಯ 1406ರಲ್ಲಿ ಪಟ್ಟಕ್ಕೆ ಬಂದು 1422ರ ವರೆಗೂ ರಾಜ್ಯವಾಳಿದ. ದಾವಣಗೆರೆಯ 1410ರ ಶಾಸನದಲ್ಲಿ ಕ್ರಿಯಾಶಕ್ತಿ ಎಂದು ಹೇಳಲಾದ ಆಚಾರ್ಯ ವಾಣಿವಿಲಾಸಕ್ರಿಯಾಶಕ್ತಿಯೋ ಅಥವಾ ಮತ್ತೊಬ್ಬ ಕ್ರಿಯಾಶಕ್ತಿಯೋ ಸ್ಪಷ್ಟವಾಗುವುದಿಲ್ಲ. ೨ನೇ ದೇವರಾಯ 1422ರಿಂದ 1446ರ ವರೆಗೆ ರಾಜ್ಯವಾಳಿದ, ತೆಲುಗು ಕವಿ ಶ್ರೀನಾಥ ವಿಜಯನಗರದ ಆಸ್ಥಾನಕ್ಕೆ ಬಂದಿದ್ದು ಈ ಕಾಲದಲ್ಲೇ. "ಶಿವತತ್ವ ಚಿಂತಾಮಣಿ"[1] ಯನ್ನು ಬರೆದ ಲಕ್ಕಣದಂಡೇಶನು ಈ ಕಾಲದವನೇ. ತನ್ನನ್ನು ಗೌರವಿಸಿದ್ದು

---

1 ಕನ್ನಡ ಸಾಹಿತ್ಯ ಚರಿತ್ರೆ—ಲೇ. ಡಾ|| ರಂ. ಶ್ರೀ ಮುಗಳಿ (1968)–ಪುಟ

Sri Vidyabharathi Book Centre, Sringeri

CC-O. In Public Domain. Digitized by eGangotri

ಚಂದ್ರಭೂಷಣ ಕ್ರಿಯಾಶಕ್ತಿ ಎಂದು ಶ್ರೀನಾಥ ಸ್ಪಷ್ಟವಾಗಿ ಹೇಳುವುದರಿಂದ ಲಕ್ಕಣದಂಡೇಶನು ಹೆಸರಿಸುವ ಕ್ರಿಯಾಶಕ್ತಿಯೂ, 1431ರ ಶಾಸನದಲ್ಲಿ ಬರುವ ಕ್ರಿಯಾಶಕ್ತಿಯೂ ಚಂದ್ರಭೂಷಣ ಕ್ರಿಯಾಶಕ್ತಿಯೇ ಆಗಿರಬೇಕು. ಇವರೇ ಅಲ್ಲದೆ ಈ ಕಾಲದಲ್ಲಿ ತ್ರಿಯಂಬಕ ಕ್ರಿಯಾಶಕ್ತಿಯೆಂಬ[24] ಆಚಾರ್ಯ ನಿದ್ದ ದೆಂದು ಡಾ|| ಶ್ರೀಕಂಠಶಾಸ್ತ್ರಿಗಳು ಹೇಳಿದ್ದಾರೆ. ಈ ಐದು ಕ್ರಿಯಾಶಕ್ತಿಗಳ ಪೈಕಿ ವಿದ್ಯಾರಣ್ಯರಾದ ಕ್ರಿಯಾಶಕ್ತಿ ಯಾರು ? ಈ ಐವರು ಕ್ರಿಯಾಶಕ್ತಿಗಳಿಗೆ ಸಂಬಂಧಿಸಿದ ಯಾವುದೆಂದು ಶಾಸನದಲ್ಲಿಯೂ ತಾವಾಗಲೀ, ತಮ್ಮ ಹಿಂದಿನ ಯಾವ ಕ್ರಿಯಾಶಕ್ತಿ ಆಚಾರ್ಯರೇ ಆಗಲೀ ಶೃಂಗೇರಿಯ ಜಗದ್ಗುರು ವಿದ್ಯಾರಣ್ಯ ರಾದರು ಎಂಬ ಅನುಮಾನಕ್ಕೆ ಪೋಷಕವಾಗುವಂತಹ ಯಾವ ಅಂಶವನ್ನೂ ಹೇಳಿಲ್ಲ. ಈ ಕ್ರಿಯಾಶಕ್ತಿಗಳಿಗೂ ಶೃಂಗೇರಿಯ ಪೀಠಕ್ಕೂ ಎಂತದಾದರೂ ಸಂಬಂಧವಿತ್ತು ಎಂಬ ಅಂಶವು ಈ ಶಾಸನಗಳಲ್ಲಿ ಕಂಡುಬರುವುದಿಲ್ಲ. ಕಾಲ ಮಾನದ ದೃಷ್ಟಿಯಿಂದ ನೋಡಿದಾಗ ವಿದ್ಯಾರಣ್ಯರ ಸಮಕಾಲಿನನಾಗಬಹು ದಾದ ಕ್ರಿಯಾಶಕ್ತಿ ಆಚಾರ್ಯರ್ ಸೊರಬ, ಶಿಕಾರಿಪುರ, ಚನ್ನರಾಯಪಟ್ಟಣ ಶಾಸನಗಳಲ್ಲಿ ಕಂಡುಬರುವ ಕ್ರಿಯಾಶಕ್ತಿ ಆಚಾರ್ಯರ್. ಈ ಕಾಶಿವಿಲಾಸ ಕ್ರಿಯಾಶಕ್ತಿ ಆಚಾರ್ಯರ್ ಸೊರಬ, ಶಿಕಾರಿಪುರ ಶಾಸನೆಗಳ ವೇಳೆಗೆ ಬನವಾಸಿ ಪ್ರಾಂತ್ಯದಲ್ಲಿ, ಅಲ್ಲಿಯ ಮಂಡಲಾಧಿಪತಿಯಾಗಿದ್ದ ಮಾಧವ ಮಂತ್ರಿಯ ಆಚಾರ್ಯನಾಗಿದ್ದ ಎಂದು ಶಾಸಗಳು ಸ್ಪಷ್ಟವಾಗಿ ಹೇಳುತ್ತವೆ. 1378ರ ಚನ್ನರಾಯಪಟ್ಟಣ ಶಾಸನದಲ್ಲಿ ಬರುವ ಕ್ರಿಯಾಶಕ್ತಿಯನ್ನು ಕೇವಲ ಕುಲ ಗುರು ಎಂದು ಹೇಳಿದೆಯೇ ಹೊರತು, ರಾಜಗುರು ಎಂದು ಕೂಡ ಹೇಳಿಲ್ಲ. 1379ರ ಗದಗಿನ ಶಾಸನದಿಂದ ಕಾಶಿವಿಲಾಸ ಕ್ರಿಯಾಶಕ್ತಿ ಕೈಲಾಸವಾಸಿಯಾಗಿ ಆತನ ಶಿಷ್ಯ ವಾಣಿವಿಲಾಸ ಕ್ರಿಯಾಶಕ್ತಿ ರಾಜಗುರುವಾಗಿದ್ದ ಎನ್ನುವುದು ಖಚಿತವಾಗುತ್ತದೆ. ವಾಣಿವಿಲಾಸ ಕ್ರಿಯಾಶಕ್ತಿಗೆ ಸಂಬಂಧಿಸಿದ ಯಾವ ಶಾಸನದಲ್ಲೂ ತನ್ನ ಗುರುವಾದ ಕಾಶಿವಿಲಾಸ ಕ್ರಿಯಾಶಕ್ತಿ ವಿದ್ಯಾರಣ್ಯ ಎಂಬ

---

೨೪. ಭಾರತೀಯ ಸಂಸ್ಕೃತಿ–ಲೇ. ಡಾ|| ಎಸ್. ಶ್ರೀಕಂಠಶಾಸ್ತ್ರಿ, (1969)–ಪು. 155

Sri Vidyabharathi Book Centre, Sringeri

 CC-O. In Public Domain. Digitized by eGangotri

ಯತಿನಾಮದಿಂದ ಶೃಂಗೇರಿಯ ಪೀಠಕ್ಕೆ ಹೋದರು ಎನ್ನುವ ವಿಷಯ ಸೂಚಿತ ನಾಗಿಲ್ಲ. ಹಾಗಿರುವಾಗ ಕಾಶಿವಿಲಾಸ ಕ್ರಿಯಾಶಕ್ತಿಗೂ, ವಿದ್ಯಾರಣ್ಯರಿಗೂ ಯಾವ ಸಾಮ್ಯವನ್ನು ಕಲ್ಪಿಸಲು ಆಧಾರವಿಲ್ಲ. ಹೊಸ ಹಳ್ಳಿಯ ತಾಮ್ರ ಶಾಸನದಲ್ಲಿ ಬರುವ ಕ್ರಿಯಾಶಕ್ತಿಯ ವಿಷಯವನ್ನು ಮುಂದೆ ವಿವೇಚನೆ ಮಾಡುತ್ತೇನೆ. ಸಥ್ಕ್ರಿ 1388ರ ಮುಳಬಾಗಿಲಿನ ಶಾಸನದಲ್ಲಿ ಉಲ್ಲೇಖಿತ ನಾದ ಕ್ರಿಯಾಶಕ್ತಿ ಆಚಾರ್ಯರೇ ವಿದ್ಯಾರಣ್ಯರಿರಬೇಕು ಎಂದು ಡಾ|| ವೆಂಕಟ ಸುಬ್ಬಯ್ಯನವರೂ, ಲೇಖಕರೂ ಊಹೆ ಮಾಡಿದ್ದಾರೆ. ಹಿಂದೆ ಡಾ|| ಆರ್. ನರಸಿಂಹಾಚಾರ್ಯರು ಇದು ವಿದ್ಯಾತೀರ್ಥರಿಗೆ ಸಂಬಂಧಿಸಿರಬಹುದು ಎಂದು ಊಹಿಸಿ, ಸಮರ್ಥನೀಯವಲ್ಲವೆಂದು ಆ ಊಹೆಯನ್ನು ಕೈಬಿಟ್ಟಿದ್ದರು. ಈಗ ಅದು ವಿದ್ಯಾರಣ್ಯರಿರಬಹುದೆಂದು ಆ ಶಾಸನದಲ್ಲಿರುವ "ವಿದ್ಯಾಶಂಕರ" ಎಂಬ ಹೆಸರಿನ ಬಲದ ಮೇಲೆ ಊಹೆ ಮಾಡಿದ್ದಾರೆ. ಆ ಶಾಸನದಲ್ಲಿ ಉಲ್ಲೇಖಿತ ನಾದ ಕ್ರಿಯಾಶಕ್ತಿಗೆ 'ವಿದ್ಯಾಶಂಕರ' ಎನ್ನುವ ಪೂರ್ವನಾಮಧೇಯವಿತ್ತು ಎನ್ನುವುದಕ್ಕೆ ಶಾಸನದಲ್ಲಿ ಆಧಾರವಿಲ್ಲ–ಈ ಕ್ರಿಯಾಶಕ್ತಿ ಕೈಲಾಸವಾಸಿ ಯಾದಾಗ ಅತನ ನೆನಪಿಗಾಗಿ ವಿದ್ಯಾಶಂಕರ ಮಂದಿರವನ್ನು ನಿರ್ಮಾಣಮಾಡಿ ಕುಮ್ಮಾಯಿಪಲ್ಲಿಯನ್ನು ವಿದ್ಯಾಶಂಕರ ಅಗ್ರಹಾರ ಎಂಬ ಹೆಸರಿನಿಂದ ದಾನ ಕೊಟ್ಟಂತೆ ತಿಳಿದುಬರುತ್ತದೆ.[25] ಇದರ ಮೇಲೆ ಶಾಸನದಲ್ಲಿ ಉಲ್ಲೇಖಿತನಾದ ಕ್ರಿಯಾಶಕ್ತಿಗೆ ವಿದ್ಯಾಶಂಕರ ಎಂಬ ಹೆಸರಿದ್ದಿರಬೇಕು ಎಂದು ಊಹೆಮಾಡ ಲಾಗಿದೆ. ಇರಬಹುದು. ಆದರೆ ವಿದ್ಯಾರಣ್ಯರಿಗೂ, ವಿದ್ಯಾಶಂಕರ ಎನ್ನುವ ಹೆಸರಿಗೂ ಏನು ಸಂಬಂಧ ? ವಿದ್ಯಾರಣ್ಯರಿಗೆ ಮರಣ ಪೂರ್ವದಲ್ಲಾಗಲಿ, ಆನಂತರದಲ್ಲಾಗಲೀ ವಿದ್ಯಾಶಂಕರ ಎನ್ನುವ ಹೆಸರಿತ್ತು ಎನ್ನುವುದಕ್ಕೆ ಎಲ್ಲಿಯೂ ಯಾವ ಆಧಾರವೂ ಇಲ್ಲ. ಅದಕ್ಕೆ ಪ್ರತಿಯಾಗಿ, ವಿದ್ಯಾರಣ್ಯರ ಗುರುಗಳಾದ ವಿದ್ಯಾತೀರ್ಥರ ಸಮಾಧಿ ವಿದ್ಯಾಶಂಕರ ಮಂದಿರ ಎಂದು ಹೆಸರಿರುವುದೂ, ಅವರ ಪೀಠಾಧಿಪತ್ಯದ ಚಿಹ್ನೆಯಾಗಿ ಶೃಂಗೇರಿ ಮಠದ ಆದ್ಯ ಪ್ರವರ್ತಕರಾದ ಶಂಕರಾಚಾರ್ಯರ ಹೆಸರೊಂದಿಗೇ ವಿದ್ಯಾತೀರ್ಥರ ಹೆಸರನ್ನೂ ಸಮ್ಮಿಳಿತ

---

೨೫. E. C. X M B. 11

Sri Vidyabharathi Book Centre, Sringeri

CC-0. In Public Domain. Digitized by eGangotri

ಗೊಳಿಸಿ ವಿದ್ಯಾಶಂಕರ ಮಠದ ಮುದ್ರೆಯಿರುವುದೂ ನಿಜ. ಈ ಕಾರಣಕ್ಕಾಗಿ ಮಠದ ಶ್ರೀ ಭಂಡಾರವನ್ನು ಶ್ರೀ ವಿದ್ಯಾಶಂಕರ ಭಂಡಾರ ಎಂದು ಕರೆಯಲಾಗುತ್ತಿತ್ತು ಎನ್ನುವುದಕ್ಕೆ ಹಲವಾರು ಶಾಸನಗಳ ಆಧಾರವಿದೆ. ಆದರೆ 1333 ರಲ್ಲೇ ಸಮಾಧಿಸ್ಥರಾದ ವಿದ್ಯಾತೀರ್ಥರಿಗೂ, 138೦ರ ಮುಳುಬಾಗಿಲಿನ ವಿದ್ಯಾಶಂಕರ ಕ್ರಿಯಾಶಕ್ತಿಗೂ ಯಾವ ಸಂಬಂಧವನ್ನೂ ಕಲ್ಪಿಸಲು ಸಾಧ್ಯವಿಲ್ಲ. ಹಾಗೆಯೇ ವಿದ್ಯಾರಣ್ಯರ ಬಗ್ಗೆ 1386–87ರ ಶಾಸನ ಲೇಖನ[1] ಸಮಯಕ್ಕೆ ಸ್ವಲ್ಪ ದಿನ ಮುಂಚಿತವಾಗಿ ವಿದ್ಯಾರಣ್ಯರು "ಪಂಪಾಕ್ಷೇತ್ರದಲ್ಲಿ ವಿರೂಪಾಕ್ಷ ದೇವರ ಸನ್ನಿಧಿಯಲ್ಲಿ ಪರಿಪೂರ್ಣರಾದಲ್ಲಿ" ಎಂದು ಹೇಳಿ, ಅವರ ಹೆಸರಿನಲ್ಲಿ ಇಮ್ಮಡಿ ಹರಿಹರ, ವಿದ್ಯಾರಣ್ಯಪುರ ಅಗ್ರಹಾರವನ್ನು ನಿರ್ಮಾಣಮಾಡಿರುವುದನ್ನೂ, ಅಲ್ಲಿ ವಿದ್ಯಾರಣ್ಯರ ಹೆಸರಿನಲ್ಲಿ ವಿದ್ಯಾವಿಶ್ವೇಶ್ವರ ಎಂಬ ಹೆಸರಿನಲ್ಲಿ ಲಿಂಗಸ್ಥಾಪನೆ ಮಾಡಿದುದನ್ನೂ ಯಾವ ಅನುಮಾನವೂ ಬರದ ರೀತಿ ಹೇಳುತ್ತದೆ. ಹಾಗಿರುವಲ್ಲಿ, ಹಂಪೆಯಲ್ಲಿ ಪರಿಪೂರ್ಣರಾದ ವಿದ್ಯಾರಣ್ಯರಿಗೂ, ಮುಳಬಾಗಿಲಿನಲ್ಲಿ ಕೈಲಾಸವಾಸಿಯಾದ ಕ್ರಿಯಾಶಕ್ತಿಗೂ ಹೇಗೆ ಸಂಬಂಧ ಕಲ್ಪಿಸಲು ಸಾಧ್ಯ ? ಮುಳಬಾಗಿಲಿನ ಶಾಸನದಲ್ಲಿ ವಿದ್ಯಾರಣ್ಯರ ಹೆಸರಾಗಲಿ, ಹಂಪೆಯ ವಿರೂಪಾಕ್ಷ ಮಠದ ಹೆಸರಾಗಲಿ, ಶೃಂಗೇರಿ ಪೀಠದ ಹೆಸರಾಗಲಿ ಬರುವುದಿಲ್ಲ. ಆ ಅನುಮಾನಕ್ಕೆ ಪೋಷಕವಾಗುವಂತಹ ಮಾತುಗಳೂ ಶಾಸನಗಳಲ್ಲಿ ಕಂಡುಬರುವುದಿಲ್ಲ. ಮುಳಬಾಗಿಲಿನ ವಿದ್ಯಾಶಂಕರ ಮಂದಿರ ವಿದ್ಯಾರಣ್ಯರ ಸಮಾಧಿಮಂದಿರ ಎಂದು ನಾವು ನಂಬಿದರೆ, ಆಗ ಈ ಎರಡು ಶಾಸನಗಳ ನಡುವಿನ ಕಾಲ ವ್ಯತ್ಯಾಸವೇನೇ ಇರಲಿ, ವಿದ್ಯಾರಣ್ಯರಿಗೆ ವಿದ್ಯಾರಣ್ಯಪುರದಲ್ಲಿ ಒಂದು, ಮುಳಬಾಗಿಲಿನಲ್ಲಿ ಒಂದು–ಹೀಗೆ ಎರಡು ಸ್ಮಾರಕಗಳನ್ನು ನಿರ್ಮಿಸಿದನೆಂದೂ, ಎರಡು ಕಡೆ ಅಗ್ರಹಾರಗಳನ್ನು ನಿರ್ಮಾಣಮಾಡಿದನೆಂದೂ ಅರ್ಥವಾಗುವುದಿಲ್ಲವೆ ? ಇದಲ್ಲದೆ ವಿದಾರಣ್ಯರು ಹಂಪೆಯ ವಿರೂಪಾಕ್ಷ ದೇವಾಲಯದ ಹಿಂಭಾಗದಲ್ಲಿರುವ ವಿರೂಪಾಕ್ಷ ಮಠದಲ್ಲೇ ಸಮಾಧಿಯಾದರು, ಅಲ್ಲಿರುವ ವಿದ್ಯಾರಣ್ಯ ಮೂರ್ತಿ ಅವರ ಸ್ಮಾರಕ ಎಂದು ಹೇಳುತ್ತಾರೆ. ಅಂದರೆ ಒಬ್ಬ ವಿದ್ಯಾರಣ್ಯರಿಗೆ ಮೂರು ಕಡೆ ಸಮಾಧಿಯೆ ? ಇತಿಹಾಸ

---

೨೬ M.A.R. (1916) p. 38,

Sri Vidyabharathi Book Centre, Sringeri

CC-O. In Public Domain. Digitized by eGangotri

ದಲ್ಲಿ ಎಲ್ಲಿಯಾದರೂ ಇಂತಹ ನಿದರ್ಶನವಿದೆಯೆ ? ವಿದ್ಯಾರಣ್ಯರಂತಹ ಖ್ಯಾತ ನಾಮಧೇಯರಿಗೆ ವಿದ್ಯಾರಣ್ಯಪುರ ಅಗ್ರಹಾರವನ್ನು ಕಟ್ಟಿಸಿದ ಬಳಿಕ, ಮತ್ತೆ ಗೊಂದಲಕ್ಕೀಡುಮಾಡುವ ವಿದ್ಯಾಶಂಕರ ಅಗ್ರಹಾರ ಎಂಬ ಹೆಸರಿನ ದಾನದ ಆಗತ್ಯ ಏನಿತ್ತು ? ಇಮ್ಮಡಿ ಹರಿಹರರಾಯನಿಗೆ ತಲೆ ಕೆಟ್ಟಿಗಿರಲಿಲ್ಲವೆ ? ಹಂಪೆಯಲ್ಲಿ ಸಮಾಧಿಸ್ಥರಾದ ಶೃಂಗೇರಿಯ ಜಗದ್ಗುರುಗಳಿಗೆ ಮುಳಬಾಗಲಿನ ಬಳಿಯ ಕುಮಾರಾಯಿಪಲ್ಲಿಯಲ್ಲಿ ಸ್ಮಾರಕ ಮಂದಿರ ಕಟ್ಟಿದರು ಅಂದರೆ ಹಾಸ್ಯಾಸ್ಪದ ಊಹೆಯಾಗುವುದಿಲ್ಲವೆ ? ಐತಿಹಾಸಿಕವಾಗಿ ಅವಿವಾದಾಸ್ಪದವಾದ ಪ್ರಬಲ ಸಾಕ್ಷಿಗಳಿಲ್ಲದೆ ಇಂತಹ ಊಹೆಯನ್ನು ಮಾಡುವುದು ತರ್ಕಕ್ಕೆ ತಿಲಾಂಜಲಿ ಕೊಟ್ಟ ವಾದವಾಗುತ್ತದೆಯೇ ಹೊರತು ತರ್ಕದ ಒರೆಗಲ್ಲಿಗೆ ಬದುಕುವ ಐತಿಹಾಸಿಕಾಂಶವಾಗುವುದಿಲ್ಲ. ಆದರೂ ಲೇಖಕರು ಮುಳಬಾಗಿಲಿನ ಶಾಸನ ವಿದ್ಯಾರಣ್ಯರಿಗೆ ಸಂಬಂಧಿಸಿರಬೇಕು ಎನ್ನುತ್ತಾರೆ. ಈ ತರ್ಕ ದೇವರಿಗೇ ಪ್ರೀತಿಯಾಗಬೇಕು. ಶ್ರೀ ಮಲ್ಲಪ್ಪನವರಿಗೇ ಒಪ್ಪಿತವಾಗಬೇಕು. ನನ್ನ ಮಟ್ಟಿಗಂತೂ ಇದು ತರ್ಕಶೂನ್ಯ ವಾದ.

ಇನ್ನು ಕೊನೆಯದಾಗಿ ಲೇಖಕರು ತಮ್ಮ ಸಿದ್ಧಾಂತದ ಶಿಖರ ಎಂದು ಭಾವಿಸಿರುವ 1384 ರ ಹೊಸಹಳ್ಳಿ ತಾಮ್ರ ಶಾಸನವನ್ನು ನೋಡೋಣ.[1] ಕ್ರಿಯಾಶಕ್ತಿಯೇ ವಿದ್ಯಾರಣ್ಯ ಎಂಬ ಸಿದ್ಧಾಂತವನ್ನು ಹೀಗೆಲ್ಲಾ ತರ್ಕಮಾಡಿ ಮಂಡಿಸಿ, ಕೊನೆಯಲ್ಲಿ ಹೊಸಹಳ್ಳಿಯ ತಾಮ್ರಶಾಸನವನ್ನು ಆಧಾರವಾಗಿ ಹೇಳಿ, ಅದರ ಬಗ್ಗೆ ಬರೆಯುತ್ತಾ "ಈ ವಿಷಯದ ಬಗ್ಗೆ, ಈ ಶಾಸನದಲ್ಲಿ ಅತ್ಯಂತ ನಿರ್ಧಾರಕವಾದ ಆಧಾರ ದೊರೆಯುತ್ತದೆ. ಬೊಂಬಾಯಿ ಇತಿಹಾಸ ಸಂಸ್ಥೆಯ ಪತ್ರಿಕೆಯಲ್ಲಿ ಪ್ರಕಟವಾಗಿರುವ ಈ ಶಾಸನದಲ್ಲಿ ಹೇಳಲಾದ 'ಮಹಾನುಭಾವಾನಾಂ ಕ್ರಿಯಾಶಕ್ತಿ ವಿದ್ಯಾರಣ್ಯ ಶ್ರೀ ಚರಣಾನಾಂ ಉಪದೇಶೇನ' ಎಂಬ ಮಾತಿನಿಂದ ಕ್ರಿಯಾಶಕ್ತಿ ವಿದ್ಯಾರಣ್ಯ ಇಬ್ಬರೂ ಏಕ

---

೨೬ "Hosahalli copper plate grant of Harihara II"- by Kundanagar, Journal of Bombay Historical Society, Vol. I No. 2 p. 121-123 (1928).

Sri Vidyabharathi Book Centre, Sringeri

CC-0. In Public Domain. Digitized by eGangotri

ವ್ಯಕ್ತಿಯೆನ್ನುವುದು ಸಂದೇಹಾತೀತವಾಗಿ ಸಾಧಿತವಾಗುತ್ತದೆ. ಉಪದೇಶೇನ' ಎನ್ನುವ ಶಬ್ದ ಏಕವಚನದಲ್ಲಿ ಇದೆ; ಇದರಿಂದ ಉಪದೇಶ ಕೊಟ್ಟವರು ಒಬ್ಬ ವ್ಯಕ್ತಿ, ಇಬ್ಬರಲ್ಲ ಎನ್ನುವುದು ಖಚಿತವಾಗುತ್ತದೆ. ಹಾಗಲ್ಲದೆ ಈಗ ಊಹಿಸಲ್ಪಟ್ಟಿರುವಂತೆ ವಿದ್ಯಾರಣ್ಯ ಮತ್ತು ಕ್ರಿಯಾಶಕ್ತಿಗಳು ಪ್ರತ್ಯೇಕ ಧರ್ಮಶಾಖೆಗೆ ಸೇರಿದ ಇಬ್ಬರು ಪ್ರತ್ಯೇಕ ವ್ಯಕ್ತಿಗಳಾಗಿದ್ದಲ್ಲಿ 'ಉಪದೇಶೇನ' ಎಂದು ಏಕವಚನ ಪ್ರಯೋಗವಿರುತ್ತಿರಲಿಲ್ಲ. 'ಮಹಾನು ಭಾವಾನಾಂ' ಎನ್ನುವುದು ಬಹುವಚನದಲ್ಲಿದೆ. ಆದರೆ ಇಬ್ಬರು ವ್ಯಕ್ತಿಗಳನ್ನು ಹೇಳಿಲ್ಲ, ಕ್ರಿಯಾಶಕ್ತಿ ವಿದ್ಯಾರಣ್ಯ ಎನ್ನುವುದು ಇಬ್ಬರು ಬೇರೆ ಬೇರೆ ವ್ಯಕ್ತಿಗಳನ್ನು ಕುರಿತದ್ದಾಗಿದ್ದರೆ ದ್ವಿವಚನವೇ ಪ್ರಯೋಗಿಸಲ್ಪಡಬೇಕಾಗಿತ್ತು. ಕ್ರಿಯಾಶಕ್ತಿ ವಿದ್ಯಾರಣ್ಯ ಎನ್ನುವ ಏಕವ್ಯಕ್ತಿಗೆ ಗೌರವಸೂಚಕವಾಗಿ ಬಹುವಚನ ಪ್ರಯೋಗಿಸಲ್ಪಟ್ಟಿದೆ. ಗೌರವಾರ್ಹರಾದ ವ್ಯಕ್ತಿಯನ್ನು ಉಲ್ಲೇಖಿಸುವಾಗ ಏಕವಚನದ ಬದಲು ಗೌರವ ಸೂಚಕವಾಗಿ ಬಹುವಚನವನ್ನು ಬಳಸಲಾಗುತ್ತದೆ. ಈ ಶಾಸನದ ಕಾಲ 1381. ಅಂದರೆ ಕ್ರಿಯಾಶಕ್ತಿ ವಿದ್ಯಾರಣ್ಯ ಶೃಂಗೇರಿ ಪೀಠಾಧಿಪತಿಯಾದ ಹೊಸದರಲ್ಲಿ ರಚಿತವಾದದ್ದು. ಆ ವೇಳೆಗೆ ವಿದ್ಯಾರಣ್ಯ ಎನ್ನುವ ಹೆಸರು ಜನಪರಿಚಿತವಾಗಿಲ್ಲದಿದ್ದ ಕಾರಣ, ಜನರಲ್ಲಿ ಸಂದೇಹವನ್ನು ನಿವಾರಿಸುವ ಸಲುವಾಗಿ ಕ್ರಿಯಾಶಕ್ತಿ ವಿದ್ಯಾರಣ್ಯ ಎನ್ನುವ ಹೆಸರನ್ನು ಬಳಸಲಾಗಿದೆ. ಈ ಶಾಸನ ಕ್ರಿಯಾಶಕ್ತಿ ವಿದ್ಯಾರಣ್ಯ ಶ್ರೀಪಾದರು ಶೃಂಗೇರಿಯ ಜಗದ್ಗುರುಗಳಾಗಿ ಪೀಠಾರೋಹಣ ಮಾಡಿದರು ಎಂದು ಅಸಂಧಿಗ್ಧವಾಗಿ, ಅಂತಿಮವಾಗಿ ತೀರ್ಮಾನಮಾಡುತ್ತದೆ" ಎಂದು ಹೇಳಿದ್ದಾರೆ. ಶಾಸನದ ಬಗ್ಗೆ ಲೇಖಕರು ಹೇಳುವ ಮಾತಾಗಲಿ, ಅವರ ವ್ಯಾಖ್ಯಾನವಾಗಲೀ ಹಾಗಿರಲಿ, ಈಗ ಆ ಶಾಸನವೇ ಏನು ಹೇಳುತ್ತದೆ ನೋಡೋಣ. ಲೇಖಕರೇ ಶಾಸನವನ್ನು ಸಮಗ್ರವಾಗಿ ಉದಹರಿಸಿದ್ದರೆ ಅಥವಾ ತಾವು ಉದಹರಿಸಿದ ಭಾಗವನ್ನಾದರೂ ಸಮರ್ಪಕವಾಗಿ ಉದಹರಿಸಿದ್ದರೆ, ಅವರಿಗೂ, ನನಗೂ, ಕನ್ನಡ ಜನಕ್ಕೂ ಶ್ರಮ ತಪ್ಪುತ್ತಿತ್ತು. ಆದರೆ ಅವರು ಹಾಗೆ ಮಾಡಿಲ್ಲ. ಅವರು "ಮಹಾನು ಭಾವಾನಾಂ ಕ್ರಿಯಾಶಕ್ತಿ ವಿದ್ಯಾರಣ್ಯ ಶ್ರೀ ಚರಣಾನಾಂ ಉಪದೇಶೇನ" ಎಂದು ಉದಹರಿಸಿರುವ ಭಾಗ ಶಾಸನದಲ್ಲಿ ಹೀಗಿದೆ. ಶಾಸನದ ದಾತೃವಾದ ಇಮ್ಮಡಿ ಹರಿಹರನ ಬಗ್ಗೆ "ಮಹಾನುಭಾವಾನಾಂ ಕ್ರಿಯಾಶಕ್ತಿ ವಿದ್ಯಾರಣ್ಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಚರಣಾನಾಂ ಉಪದೇಶ ಜನಿತ ತತ್ವಪ್ರಕಾಶಿಕೇ ಧರ್ಮಶೇಖರಣ" ಎಂದಿದೆ. ಲೇಖಕರು 'ಉಪದೇಶದ' ಕಂಕುಳಲ್ಲಿ ತುರುಕಿರುವ 'ನ' ಅಕ್ಷರದ ಶಾಸನದಲ್ಲಿ ಇಲ್ಲ. ಇದರ ಅರ್ಥ ಬಹಳ ಸ್ಪಷ್ಟವಿದೆ. "ಮಹಾನುಭಾವರಾದ ಕ್ರಿಯಾಶಕ್ತಿ ವಿದ್ಯಾರಣ್ಯ ಶ್ರೀ ಚರಣಗಳ ಉಪದೇಶ ಜನಿತವಾದ ತತ್ವ ಪ್ರಕಾಶದಿಂದ ಧರ್ಮವನ್ನು ಶೇಖರಿಸಿದವನು" ಎನ್ನುವುದು ಶಾಸನದ ಅರ್ಥ. ಈ ಶಾಸನವನ್ನು ಸಂಪಾದಿಸಿ ಪ್ರಕಟಿಸಿದ ಪ್ರೊ. ಕುಂದಣಗಾರ್‌ರವರು ಈ ಶಾಸನ ಇಂಗ್ಲಿಷಿನಲ್ಲಿ ಹೀಗೆ ಅನುವಾದಿಸಿದ್ದಾರೆ. "Harihara the truthful, the chief of the meritorious, whose mind was illumined by the eternal truth at the advice of the feet of Vidyaranya, the stimulus of the meritorious." ಇವರ ಅನುವಾದದಲ್ಲೂ ಲೇಖಕರ ವ್ಯಾಖ್ಯಾನ ಧ್ವನಿತವಾಗುವುದಿಲ್ಲ. ಕ್ರಿಯಾಶಕ್ತಿ ಎನ್ನುವ ಪದ ವಿದ್ಯಾರಣ್ಯ ರಿಗೆ ಪೂರ್ವನಾಮ ಎಂಬ ಪ್ರಾಮುಖ್ಯವಾದ ಅಂಶ ಅವರಿಗೂ ಹೊಳೆದಿಲ್ಲ. ಇನ್ನು ಶಾಸನದ ಉಳಿದ ಭಾಗದಲ್ಲಿ ಎಲ್ಲಿಯಾದರೂ ಈ ಅಂಶದ ಮೇಲೆ ಬೆಳ ಕನ್ನು ಚೆಲ್ಲುವ ಮಾತು ಕಾಣಬರುತ್ತದೆಯೇನೋ ನೋಡೋಣ. ಶಾಸನದ ಕೊನೆಯಲ್ಲಿ ಶಾಸನಾಕಾರ "ಅವಿದ್ಯಾಘರ್ಮ ಸಂತಪ್ತ ತೃಷಾ ವ್ಯಾಕುಲಿತ ವಯಂ। ಆನಂದಾಮೃತ ಸಂಪೂರ್ಣಾಂ ವಿದ್ಯಾತೀರ್ಥಮುಪಾಸ್ಮಹೆ" ಎಂದು ಶ್ರೀವಿದ್ಯಾತೀರ್ಥರನ್ನೂ, ಆ ಬಳಿಕ, "ವಾಚಾಲಂ ಕುರತೇ ಮೂಕಂ. ಮೂಕಂ ವಾಚಾಲ ಪುಂಗವಂ। ವಿದ್ಯಾರಣ್ಯ ಗುರೋಶ್ಚಿತ್ರಂ ಚರಿತ್ರಂ ಚತುರಾನನಾತ್।।" ಎಂದು ವಿದ್ಯಾರಣ್ಯರನ್ನು ಹೊಗಳುತ್ತದೆ. ಶಾಸನದ ಅಂತ್ಯ ಪದ್ಯಗಳು ವಿದ್ಯಾರಣ್ಯರನ್ನೂ, ಅವರ ಗುರುಗಳಾದ ವಿದ್ಯಾತೀರ್ಥರನ್ನೂ–ಈ ಶ್ಲೋಕದಲ್ಲಿ ವಿದ್ಯಾತೀರ್ಥರ ಬಗ್ಗೆ . ಮಹೇಶ್ವರ ಎನ್ನುವ ಪದವಿಲ್ಲದಿರುವುದನ್ನು ಲೇಖಕರು ಗಮನಿಸಬೇಕು–ಸ್ತುತಿಸುತ್ತದೆ. ಇಲ್ಲೆಲ್ಲೂ ಕ್ರಿಯಾಶಕ್ತಿಯ ಹೆಸರೇ ಇಲ್ಲ. ಲೇಖಕರು ಊಹಿಸಿದಂತೆ ಕ್ರಿಯಾಶಕ್ತಿ ವಿದ್ಯಾರಣ್ಯರಾದರು ಎಂಬ ಅಂಶವನ್ನೇ ಜಗಜ್ಜಾಹೀರುಮಾಡುವ ಉದ್ದೇಶವಾಗಿದ್ದಲ್ಲಿ, ಈ ಕೊನೆಯ ಪದ್ಯಗಳಲ್ಲಿ ಮತ್ತಷ್ಟು ಸ್ಪಷ್ಟವಾಗಬೇಕಿತ್ತು. ಆದರೆ ಹಾಗೆ ಮಾಡದೆ ವಿದ್ಯಾರಣ್ಯರನ್ನೇ ಹೊಗಳಿರುವುದರಿಂದ ಈ ಶಾಸನಕ್ಕೂ ಕ್ರಿಯಾಶಕ್ತಿಗೂ ಯಾವ ಸಂಬಂಧವೂ

Sri Vidyabharathi Book Centre, Sringeri

CC-0. In Public Domain. Digitized by eGangotri

ಇಲ್ಲ, ಲೇಖಕರ ಕಲ್ಪನೆ ನಿರಾಧಾರ ಎನ್ನುವುದು ವ್ಯಕ್ತವಾಗುತ್ತದೆ- ಪ್ರಾಯಶಃ ಕ್ರಿಯಾಶಕ್ತಿ ಎನ್ನುವುದು ವಿದ್ಯಾರಣ್ಯರಿಗೆ ಗುಣವಾಚಕವಾಗಿ ಉಪಯೋಗಿಸಲ್ಪಟ್ಟಿರಬೇಕು. ಹಾಗಲ್ಲದೆ ಬಹು ಉದಾರವಾಗಿ ಶಾಸನವನ್ನು ಅರ್ಥಮಾಡಬಹುದಾದರೂ, ಹರಿಹರನು ಕ್ರಿಯಾಶಕ್ತಿ ಮತ್ತು ವಿದ್ಯಾರಣ್ಯ ಶ್ರೀ ಚರಣರ ಉಪದೇಶದಿಂದ ಧರ್ಮವನ್ನು ಶೇಖರಿಸಿದನು ಎಂದು ಅರ್ಥ ಮಾಡಬಹುದು ; ಕ್ರಿಯಾಶಕ್ತಿಯೇ ವಿದ್ಯಾರಣ್ಯ ಎಂಬ ಲೇಖಕರ ವಾದಕ್ಕೆ ಪೋಷಕವಾಗುವ ಅಂಶ ತಿಲಮಾತ್ರವಷ್ಟಾದರೂ ಶಾಸನದಲ್ಲಿ ಗೋಚರಿಸು ವುದಿಲ್ಲ. ಲೇಖಕರು ಊಹಿಸಿರುವಂತೆ ವಿದ್ಯಾರಣ್ಯ ಎಂಬ ಹೆಸರು ಜನತೆಗೆ ಅಪರಿಚಿತವಾದುದೇನೂ ಆಗಿರಲಿಲ್ಲ. 1375, 1377, 1378, 1380ರ ಶಾಸನಗಳಲ್ಲಿ ಯಾವ ಕ್ರಿಯಾಶಕ್ತಿಯ ಗೊಂದಲವೂ ಇಲ್ಲದೆ ವಿದ್ಯಾರಣ್ಯರ ಹೆಸರು ಬಳಸಲ್ಪಟ್ಟಿದೆ. ಅಲ್ಲದೆ ಹೊಸಹಳ್ಳಿಯ ಶಾಸನದ ಕಾಲ ಲೇಖಕರು ಹೇಳಿದಂತೆ 1381, ಅಲ್ಲ, 1384. ಹಾಗಿರುವಾಗ 1381 ಪೂರ್ವಭಾಗ ದಲ್ಲೆಲ್ಲೋ ಇದ್ದ ಕ್ರಿಯಾಶಕ್ತಿ ಎಂಬಾತ ವಿದ್ಯಾರಣ್ಯ ಎಂಬ ನಾಮಧೇಯ ಧರಿಸಿ ಶೃಂಗೇರಿಯ ಪೀಠಾಧಿಪತಿಯಾದ ಎಂದು ಹೇಳುವುದು ಒಂದು ಶಾಸನದ ಪದಗಳನ್ನು ತಮ್ಮ ವಾದ ಸಮರ್ಥನೆಗಾಗಿ ಲೇಖಕರು ಹೇಗಾದರೂ ಕಿತ್ತಾಡಬಲ್ಲರು, ಎಂತಹ ಅಪಾರ್ಥವನ್ನಾದರೂ ಕಲ್ಪಿಸಬಲ್ಲರು ಎನ್ನುವುದಕ್ಕೆ ಸಾಕ್ಷಿಯೇ ವಿನಾ, ಬೇರಾವುದಕ್ಕೂ ಸಾಕ್ಷಿಯಾಗಲಾರದು ಲೇಖಕರ ವಾದ ಎಷ್ಟು ನಿರಾಧಾರವಾದದ್ದು ಎಂದು ತೋರಿಸುವುದಕ್ಕೆ 1403 ನೇ ಕೊಪ್ಪ 53ನೆಯ ಶಾಸನ[1] ಬಹಳ ಸ್ಪಷ್ಟವಾದ ಸಾಕ್ಷಿ. ಆ ಶಾಸನದಲ್ಲಿ ದಾನ ವೃತ್ತಿಗಳನ್ನು ವಿಂಗಡಿಸುವಾಗ "ಕ್ರಿಯಾಶಕ್ತಿ ಒಡೆಯರಿಗೆ ವೃತ್ತಿ ೧, ಶೃಂಗೇರಿಯ ಒಡೆಯರಿಗೆ ವೃತ್ತಿ ೧" ಎಂದು ಸುಸ್ಪಷ್ಟವಾಗಿ ಹೇಳಿ, ಈ ಎರಡು ಹೆಸರುಗಳಿಗೂ ಯಾವ ಸಂಬಂಧವೂ ಇರಲಿಲ್ಲವೆಂದು ಸಾರಿ ಹೇಳುತ್ತದೆ. ಅಷ್ಟೇ ಅಲ್ಲದೆ 1431 ರ ಪುತ್ತೂರು ಶಾಸನ[2] ಕ್ರಿಯಾಶಕ್ತಿ ದೇವನೊಬ್ಬನನ್ನು

---

೨೮ E.C. VI–K p. 53.

೨೯ ARSIE 1937.

Sri Vidyabharathi Book Centre, Sringeri

CC-O. In Public Domain. Digitized by eGangotri

ಹೆಸರಿಸುತ್ತದೆ. ಈ ಅಂಶಗಳಿಂದ ಕ್ರಿಯಾಶಕ್ತಿ ಆಚಾರ್ಯರು ಮತ್ತು ಶೃಂಗೇರಿಯ ಆಚಾರ್ಯರು ವಿಜಯನಗರದ ಅರಸುಗಳಿಂದ ಪೂಜೆಯನ್ನು ಪಡೆದ ಇಬ್ಬರು ವಿಭಿನ್ನ ಮಹನೀಯರೆಂದು, ಎರಡು ಪ್ರತ್ಯೇಕ ಧಾರ್ಮಿಕ ಸಂಸ್ಥೆಗಳ ಅಧಿಪತಿಗಳೆಂದೂ ಯಾವ ಸಂಕೋಚವೂ ಇಲ್ಲದೆ ಹೇಳಬಹುದು. ಆದುದರಿಂದ ಕ್ರಿಯಾಶಕ್ತಿಯೇ ವಿದ್ಯಾರಣ್ಯರಾದರು ಎನ್ನುವುದು ಇಬ್ಬರು ಪೂಜ್ಯರಿಗೂ, ಲೇಖಕರು ಮಾಡಿದ ಮಹದಪಚಾರವೇ ವಿನಾ ಬೇರೆ ಅಲ್ಲ. ಹೊಸಹಳ್ಳಿಯ ಶಾಸನ ಶ್ರೀ ಮಲ್ಲಪ್ಪನವರ ವಾದಕ್ಕೆ ಅಂತಿಮ ಸಾಕ್ಷ್ಯವಲ್ಲ, ಅವರ ವಾದದ ಮರಣ ಶಾಸನ.

ಕ್ರಿಯಾಶಕ್ತಿಗೆ ಸಂಬಂಧಿಸಿದ ಈ ಭಾಗವನ್ನು ಮುಕ್ತಾಯ ಮಾಡುವ ಮೊದಲು ಮತ್ತೊಂದು ಮಾತನ್ನು ಹೇಳಬೇಕು. ಲೇಖಕರು ಆತನನ್ನು ಓರಂಗಲ್ಲಿನ ಗೋಲಕಿ ಮಠಕ್ಕೆ ಸೇರಿದವರು ವಿಜಯನಗರಕ್ಕೆ ವಲಸೆ ಬಂದವರು ಎಂದು ಊಹಿಸಿದ್ದಾರೆ. ಈ ಊಹೆಗೂ ಯಾವ ಆಧಾರವೂ ಇಲ್ಲ. ಕ್ರಿಯಾಶಕ್ತಿಗಳಿಗೆ ನಾವು ನೋಡಿದ ಯಾವ—ಶಾಸನಗಳಲ್ಲೂ ಓರಂಗಲ್ಲಿನಲ್ಲಾಗಲಿ ಗೋಲಕಿ ಮಠದಲ್ಲಾಗಲಿ ಸಂಬಂಧವಿಲ್ಲ. ಕ್ರಿಯಾಶಕ್ತಿಗಳ ಬಗ್ಗೆ ಆಳವಾದ ಅಧ್ಯಯನ ನಡೆಸಿದ ಡಾ|| ವೆಂಕಟಸುಬ್ಬಯ್ಯನವರು ಈ ಕ್ರಿಯಾಶಕ್ತಿಗಳು ಗೋಲಕಿ ಮಠದಿಂದ ಕರ್ನಾಟಕಕ್ಕೆ ವಲಸೆ ಬಂದರು ಎಂಬ ಮಾತನ್ನು ಹೇಳಿಲ್ಲ- ಕಾಶಿವಿಲಾಸ ಕ್ರಿಯಾಶಕ್ತಿಗೆ ಸಂಬಂಧಿಸಿದ ಶಾಸನಗಳು ನಾಗರಖಂಡಕ್ಕೆ ಸಂಬಂಧಿಸಿದ ಸೊರಬ, ಶಿಕಾರಿಪುರ ಈ ಪ್ರಾಂತದಲ್ಲಿ ಹೆಚ್ಚಾಗಿ ದೊರೆಯುತ್ತವೆ. ಇದಲ್ಲದೆ, ಕಾಶಿವಿಲಾಸ ಕ್ರಿಯಾಶಕ್ತಿಯ ಶಿಷ್ಯನಾದ ಮಾಧವ ಮಂತ್ರಿಯು-ಬನವಾಸಿ ಪ್ರಾಂತದ ಅಧಿಪತಿಯಾಗಿದ್ದಾತ-ಆತನಿಗೂ ಓರಂಗಲ್ಲಿಗೂ ಯಾವ ಸಂಬಂಧವೂ ಇದ್ದಂತೆ ಆತನ ಯಾವ ಶಾಸನದಿಂದಲೂ ತಿಳಿದುಬಂದಿಲ್ಲ. ಬನವಾಸಿ ಬಳಿಯ ಬಳ್ಳಿಗಾವೆ ಶತಶತಮಾನಗಳಿಂದ ಪಾಶುಪತರಿಗೆ, ಕಾಳಾಮುಖರಿಗೆ, ಶುದ್ಧ ಸೈವಪಂಥೀಯರಿಗೆ ಭದ್ರನೆಲೆಯಾಗಿತ್ತು ಎಂಬ ಅಂಶವನ್ನು ಸಾರಲು ನೂರಾರು ಶಾಸನಗಳಿವೆ. ಹಾಗಿರುವಾಗ ಕನ್ನಡನಾಡಿನ ಕ್ರಿಯಾಶಕ್ತಿಯನ್ನು ಓರಂಗಲ್ಲಿನ ಗೋಲಕಿಮಠದಿಂದ, ಕನ್ನಡ ಅರಸುಗಳಿಗೆ ರಾಜಗುರುಗಳಾಗಿದ್ದ ಮಹನೀಯರುಗಳನ್ನು ಓರಂಗಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ನಿಂದ ವಲಸೆ ಬಂದರು ಎನ್ನುವುದಕ್ಕೆ ಯಾವ ಆಧಾರವೂ ಇಲ್ಲ. ಆದುದರಿಂದ ಶ್ರೀ ಮಲ್ಲಪ್ಪನವರ ಈ ವಾದವು ಅವರ ಉಳಿದ ವಾದಗಳಂತೆ, ನಿರಾಧಾರವಾಗಿದ್ದು, ಕನ್ನಡನಾಡಿನಲ್ಲಿ ನಡೆದ ಎಲ್ಲವನ್ನೂ ಓರಂಗಲ್ಲಿಗೆ, ಗೋಳಕಿ ಮಠಕ್ಕೆ ಗಂಟು ಹಾಕುವ ಹಂಬಲದ ದ್ಯೋತಕವಾಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶೃಂಗೇರೀ ಮಠದ ಜಂಗಮ ಸಂಪ್ರದಾಯ

ಶ್ರೀಮಲ್ಲಪ್ಪನವರು ವಿಜಯನಗರ ಸಂಸ್ಥಾಪಕರುಗಳ ಬಗ್ಗೆ, ಸಂಸ್ಥಾಪನಾಚಾರ್ಯರಾದ ವಿದ್ಯಾರಣ್ಯರ ಬಗ್ಗೆ ಓರಂಗಲ್ಲಿನ ಮೂಲದ ಕಟ್ಟು ಕಥೆಯನ್ನು ಕಂಚಿಕುಂಭಕೋಣ ಮಠದ, ಶೃಂಗೇರಿಗೆ ಸಂಬಂಧಿಸದ, ಅಪ್ರಾಮಾಣಿಕ ಹೇಳಿಕೆಗಳನ್ನು ಆಧಾರವಾಗಿಟ್ಟುಕೊಂಡು, ಯಾವ ಐತಿಹಾಸಿಕ ಆಧಾರಗಳೂ ಇಲ್ಲದೆ ಕ್ರಿಯಾಶಕ್ತಿ ವಿದ್ಯಾರಣ್ಯ ಎಂಬ ದ್ವೈತ್ಯನನ್ನು ಸೃಷ್ಟಿಮಾಡಿದ್ದು ಕೇವಲ ಆಕಸ್ಮಿಕವಲ್ಲ, ಸಂಶೋಧನೆಯಲ್ಲಿ ಎಂತಹ ವಿದ್ವಾಂಸರಿಂದಲೂ ಆಗಬಹುದಾದ ತಪ್ಪು ಸಿದ್ಧಾಂತವಲ್ಲ, ಒಂದು ನಿರ್ದಿಷ್ಟವಾದ ಉದ್ದೇಶವನ್ನು ಇಟ್ಟುಕೊಂಡು, ಆ ಒಳ ಉದ್ದೇಶ ಸಾಧನೆಗಾಗಿ ಅಲ್ಲಸಲ್ಲದ ಸಾಮಗ್ರಿಗಳಿಗೆ ಇಲ್ಲದ ಐತಿಹಾಸಿಕ ಮಹತ್ವಕೊಟ್ಟು, ತಮ್ಮ ಕಲ್ಪನೆಯ ಮೂಸೆಯಲ್ಲಿ ಕ್ರಿಯಾಶಕ್ತಿ ವಿದ್ಯಾರಣ್ಯ ಎಂಬ ನೂತನ ವ್ಯಕ್ತಿಯೊಬ್ಬನನ್ನು ಅವತಾರ ಮಾಡಿಸಿದ್ದಾರೆ ಎನ್ನುವುದು ಅವರ ಲೇಖನದ ಈ ಮೂರನೆಯ ಭಾಗದಲ್ಲಿ ಬಹು ಸ್ಪಷ್ಟವಾಗುತ್ತದೆ. ಈ ಲೇಖಕರು ಮುಬ್ಬು ಕವಿಸುವ

Sri Vidyabharathi Book Centre, Sringeri

 CC-O. In Public Domain. Digitized by eGangotri

ಧೂಳೆಬ್ಬಿಸಿ ಇಷ್ಟೆಲ್ಲಾ ಕಸರತ್ತು ಮಾಡಿರುವುದು, ತಮ್ಮ ಲೇಖನದಲ್ಲಿ ಮೊದಲಲ್ಲಿ ಹೇಳಿಕೊಂಡಿರುವಂತೆ ಶೃಂಗೇರಿಯ ಜಗದ್ಗುರಗಳ ಬಗ್ಗೆ ಫಾದರ್ ಹೆರಾಸರು ಮಾಡಿದ ಅಪಮಾನಕಾರಕ, ಅಸಭ್ಯ, ಕುತ್ಸಿತಟೀಕೆಗಳನ್ನು ಅಲ್ಲ ಗಳೆಯುವುದಕ್ಕಾಗಿ ಅಲ್ಲ; ವಿಜಯನಗರದ ಅರಸರ ಬಗ್ಗೆ ಇರುವ ಕಟ್ಟುಕಥೆ ಗಳನ್ನು ಕಡಿದೊಗೆದು ಸತ್ಯವನ್ನು ಸ್ಥಾಪಿಸುವುದಕ್ಕೂ ಅಲ್ಲ. ಹೇಳಿಕೊಂಡಿರು ವುದು ಅದೇ, ಆದರೆ ಅಂತಹ ಮಹದುದ್ದೇಶವೇನೂ ಸಾಧಿತವಾಗಿಲ್ಲ. ಅವರ ನಿಜವಾದ ಆಕಾಂಕ್ಷೆ, ಶೃಂಗೇರಿ ಮಠದಲ್ಲಿ ಆರಂಭಕಾಲದಿಂದಲೂ ರೇವಣಸಿದ್ಧ ಪರಂಪರೆಯ ಜಂಗಮ ಸಂಪ್ರದಾಯವಿತ್ತು ಎಂದು ಹೇಳುವುದಕ್ಕಾಗಿ. ಅವರ ಲೇಖನದ ಅರ್ಧಭಾಗದಷ್ಟು ಸ್ಥಳವನ್ನು ಆಕ್ರಮಿಸಿಕೊಂಡಿರುವ ಈ ವಾದಕ್ಕೆ ಉಳಿದದ್ದೆಲ್ಲಾ ಕೇವಲ ಹಿನ್ನೆಲೆ ಮತ್ತು ಆಡಿರುವ ಮಾತುಗಳು ಕೇವಲ ನಾಂದಿವಾಕ್ಯಗಳು.

ಒಂದು ಧಾರ್ಮಿಕ ಸಂಸ್ಥೆ ಆರಂಭದಲ್ಲಿ ಒಂದು ಪಂಗಡದವರಾಗಿದ್ದು ನಂತರ ಮತ್ತೊಂದು ಪಂಗಡದವರ ಕೈಸೇರಿ ಈಗಿನ ಕಾಲದಲ್ಲಿ ಮೂರನೆಯವ ರೊಬ್ಬರ ವಶದಲ್ಲಿರುವುದು ಇತಿಹಾಸದಲ್ಲಿ ಅಪರೂಪ ಸಂಗತಿಯೇನಲ್ಲ. ಎಷ್ಟೋ ಬೌದ್ಧ ಚೈತ್ಯಗಳು ಜೈನರ ಬಸದಿಗಳಾಗಿ, ಶೈವರ ಗುಡಿಗಳಾಗಿ, ವೈಷ್ಣವ ಮಂದಿರಗಳಾಗಿ, ಮಂದಿರಗಳು ಮಸೀದಿಗಳಾಗಿ, ಮಸೀದಿಗಳು ಚರ್ಚುಗಳಾಗಿ ರುವ ಉದಾಹರಣೆ ಬೇಕಾದಷ್ಟಿವೆ. ಈ ಲೇಖಕರೇ ಇದಕ್ಕೆ ಉದಾಹರಣೆಯಾಗಿ ನಿಡುಮಾಮಿಡಿ ಮಠ, ಸುತ್ತೂರಿನ ಮಠದ ನಿದರ್ಶನಗಳನ್ನು ಕೊಟ್ಟಿದ್ದಾರೆ. ದೇವ ಮಂದಿರಗಳು, ಪೂಜಾಸ್ಥಾನಗಳು ಮತಾಂತರಗೊಂಡಂತೆಯೇ ಧಾರ್ಮಿಕ ಸಂಸ್ಥೆಗಳೂ, ಅವರ ಅಧಿಪತಿಗಳೂ, ಅದರ ಹಿಂಬಾಲಕರೂ ಕಾಲ ಕಾಲಕ್ಕೆ ಮತಾಂತರ ಹೊಂದಿದ್ದಾರೆ. ಹೀಗಿರುವಾಗ ಒಂದು ಧಾರ್ಮಿಕ ಸಂಸ್ಥೆಯ ಇತಿಹಾಸವನ್ನು ಬರೆಯುವಾಗ ಅದರ ಬಗ್ಗೆ ಲಬ್ಧವಾಗಿರುವ ಐತಿ ಹಾಸಿಕ ಆಧಾರಗಳು ಅಂತಹ ಪರಿವರ್ತನೆ ಆದದ್ದನ್ನು ನಿರ್ವಿವಾದವಾಗಿ ತೋರಿಸುತ್ತವೆ. ಅದಕ್ಕೆ ಯಾರೂ ವ್ಯಥೆಪಡಬೇಕಾಗಿಲ್ಲ ಆದರೆ ಆ ಬಗೆಯ ಲೇಖನಗಳನ್ನು ಬರೆಯುವಾಗ ಅಂತಹ ಸಂಶೋಧಕರಲ್ಲಿ ನಿರೀಕ್ಷಿಸುವುದು ನಿಷ್ಪ ಕ್ಷಪಾತವಾದ, ಪೂರ್ವಗ್ರಹದೋಷಮುಕ್ತವಾದ, ನಿರ್ದುಷ್ಟವಾದ ಪ್ರಾಮಾಣಿ

Sri Vidyabharathi Book Centre, Sringeri

CC-O. In Public Domain. Digitized by eGangotri
ಕತೆ. ಸಂಶೋಧಕರಲ್ಲಿ ಅದಿಲ್ಲದಿದ್ದಾಗ ಅವರ ಹೇಳಿಕೆಯ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಅವರ ಹೇಳಿಕೆ ಅಪ್ರಾಮಾಣಿಕವಾಗಿದ್ದರೆ, ಇರುವ ಐತಿಹಾಸಿಕ ಆಧಾರಗಳಿಗೆ ವಿರೋಧವಾಗಿದ್ದರೆ, ಅಂತಹ ಬರಹವನ್ನು ದುಷ್ಟ ಪ್ರಯತ್ನವೆಂದು ಅನಿವಾರ್ಯವಾಗಿ ಖಂಡಿಸಬೇಕಾಗುತ್ತದೆ. 'ಇದು ಒಂದು ಸಂಸ್ಥೆಯ ಸಮಸ್ಯೆಯಲ್ಲ. ಮೂಲಭೂತವಾದ ಸತ್ಯದ ಸಮಸ್ಯೆ. ಈ ಮಾತು ಈ ಲೇಖಕರ ಶೃಂಗೇರಿ ಮಠದ ಸಂಪ್ರದಾಯದ ವಿಮರ್ಶೆಗೂ ಅನ್ವಯಿಸುತ್ತದೆ. ಅವರು ಶೃಂಗೇರಿಯ ಮಠದಲ್ಲಿ ಜಂಗಮ ಸಂಪ್ರದಾಯವಿತ್ತು ಎಂಬುದನ್ನು ಅವಿವಾದಾಸ್ಪದವಾದ ಆಧಾರಗಳೊಡನೆ ತೋರಿಕೊಟ್ಟದ್ದಿದ್ದರೆ, ಅವರ ಪ್ರಯತ್ನಕ್ಕೆ ಮೆಚ್ಚಿ, ಅವರಿಗೆ ಹೂವಿನಮಾಲೆ ಹಾಕುವವರಲ್ಲಿ ನಾನು ಮೊದಲಿಗನಾಗುತ್ತಿದ್ದೆ. ಆದರೆ, ಕನ್ನಡಿಗರ ದುರ್ದೈವ. ಲೇಖರ ಪ್ರಯತ್ನ ಅಂತಹ ಪ್ರಶಂಸೆಗಾಗಲಿ ಮೆಚ್ಚುಗೆಗಾಗಲಿ ಪಾತ್ರವಾದುದಲ್ಲ ; ಕೇವಲ ಖಂಡನೀಯ.

ಈ ಮುಂಚೆಯೇ ನಾನು, ಈ ಲೇಖಕರು ತಮ್ಮ ತಳಹದಿಯನ್ನು ಎಷ್ಟು ದೋಷಪೂರ್ಣ, ದುರ್ಬಲ, ಪೊಳ್ಳುವಸ್ತುಗಳಿಂದ ನಿರ್ಮಿಸಿದ್ದಾರ ಎಂಬುದನ್ನು ತೋರಿಸಿಕೊಟ್ಟಿದ್ದೇನೆ. ಈ ತಳಹದಿಯ ಮೇಲೆ ಅವರು ನಿರ್ಮಾಣ ಮಾಡಿರುವ ಸಿದ್ಧಾಂತದ ಗಾಳಿ ಮಂಟಪವೂ ಅಷ್ಟೇ ಅಭದ್ರ ವಾದುದು ಆಧಾರರಹಿತವಾದದ್ದು, ಐತಿಹಾಸಿಕ ಅಂಶಗಳಿಗೆ ಅಪಚಾರ ಬಗೆಯುವಂತಾದ್ದು. ಲೇಖಕರು ತಮ್ಮ "ಶೃಂಗೇರಿಯ ಮಠದ ಜಂಗಮ ಸಂಪ್ರದಾಯದ ಸಿದ್ಧಾಂತಕ್ಕೆ ಪೋಷಕವಾಗಿ ಆಧಾರ ಸಾಮಗ್ರಿಗಳನ್ನು ಒದಗಿಸಿದ್ದಾರೆ. ಆದರೆ, ಇವು ಏಕಪಕ್ಷೀಯ ವಾದಗಳು. ತಮ್ಮ ವಾದಕ್ಕೆ ಆಧಾರವಾಗಿ ಲೇಖಕರು ಶೈವ ಸಂಪ್ರದಾಯ, ಅದರ ವಿವಿಧ ಶಾಖೆಗಳು, ಅವುಗಳ ಆಧಾರ ಗ್ರಂಥಗಳಿಂದ ವಿಪುಲವಾಗಿ ಉದಹರಿಸಿದ್ದಾರೆ. ಆದರೆ ಈ ವಾದಕ್ಕೆ ಅಷ್ಟೇ ಸಾಲದು, ಶೈವ ಸಂಪ್ರದಾಯಕ್ಕೆ ಸಂಬಂಧಿಸಿದಂತೆ ಗ್ರಂಥಗಳು ಇರುವ ಹಾಗೆಯೇ, ಶಂಕರಾಚಾರ್ಯರ ಅದ್ವೈತಕ್ಕೆ ಸಂಬಂಧಿಸಿದಂತೆ ನೂರಾರು ಗ್ರಂಥಗಳಿವೆ. ಶೃಂಗೇರಿಯ ವಿದ್ಯಾರಣ್ಯ ಪೂರ್ವ ಆಚಾರ್ಯರುಗಳು ಬರೆದ ಗ್ರಂಥಗಳಿವೆ. ವಿದ್ಯಾರಣ್ಯರು ಭಾರತೀ ತೀರ್ಥರು ಬರೆದ ಹಲವಾರು ಗ್ರಂಥಗಳಿವೆ. ಅವರ ಶಿಷ್ಯ ಪರಂಪರೆಗೆ ಸೇರಿದವರು ಬರೆದ ಸಮಕಾಲೀನ

Sri Vidyabharathi Book Centre, Sringeri

CC-O. In Public Domain. Digitized by eGangotri

ಮತ್ತು ನಂತರದ ನೂರಾರು ಗ್ರಂಥಗಳಿವೆ. ಇಂತಹ ಗ್ರಂಥಗಳಿಂದ ಲೇಖಕರು ತಮ್ಮ ವಾದಕ್ಕೆ ಪೋಷಕವಾಗಬಹುದಾದ ಯಾವೊಂದು ಅಂಶವನ್ನೂ ಉದಹರಿಸಿಲ್ಲ, ತದ್ವಿರುದ್ಧವಾಗಿ, ಐತಿಹಾಸಿಕವಾಗಿ ನಂಬಲು ಅನರ್ಹವಾದ ಕೆಲವು ಕೃತಿಗಳನ್ನು ಉದಹರಿಸಿದ್ದಾರೆ. ತಾವು ಉದಹರಿಸಿರುವ ಮೂಲಗಳಿಗೂ ನಾನಾಮೂಲಿನಂತೆಯೇ ತಪ್ಪು ವ್ಯಾಖ್ಯಾನ ಮಾಡಿದ್ದಾರೆ. ಮೂರು; ಮೂರಲ ಒಂಬತ್ತು ಎಂದು ಹೇಳುವುದನ್ನು ಬಿಟ್ಟು ಮೂವತ್ತಾರು ಎಂದು ಸಾಧಿಸಲು ಹೊರಟಿದ್ದಾರೆ. ಇಂತಹ ವಾದಕ್ಕೆ ಉತ್ತರ ಕೊಡಬೇಕಾಗಿ ಬಂದದ್ದು ನನ್ನ ದುರ್ದೈವ.

ತಮ್ಮ ವಾದವನ್ನು ಲೇಖಕರು ತಪ್ಪು ಗ್ರಹಿಕೆಯಿಂದಲೇ ಆರಂಭ ಮಾಡಿದ್ದಾರೆ.

ಈ ಸಿದ್ಧಾಂತ ಸಾಧನೆಗೆ ಇವರು ಬಳಸಿರುವ ಆಧಾರ ಗ್ರಂಥಗಳು ಸಂದೇಹಾಸ್ಪದವಲ್ಲದ ಐತಿಹಾಸಿಕ ಕೃತಿಗಳಲ್ಲ. ಇವರು ಈ ಸಂದರ್ಭದಲ್ಲಿಯೂ ನಿರಾಧಾರವಾದ ತಪ್ಪು ಹೇಳಿಕೆಗಳನ್ನು ಮಾಡಿದ್ದಾರೆ. ಅಂತಹ ಹೇಳಿಕೆಗಳಲ್ಲಿ ವಿಜಯನಗರದ ಇಮ್ಮಡಿ ದೇವರಾಯ ವೀರಶೈವನಾದ ಎನ್ನುವುದು ಒಂದು. ಇಮ್ಮಡಿ ದೇವರಾಯನ ಕಾಲದಲ್ಲಿ ವೀರಶೈವರಿಗೆ ಅಪಾರ ಪ್ರೋತ್ಸಾಹ ಸಿಕ್ಕಿತು. ವೀರಶೈವ ಧರ್ಮದ ಪುನರುದ್ಧಾರವಾದದ್ದು ಆ ಕಾಲದಲ್ಲಿ ಅದನ್ನು ಯಾರೂ ಅಲ್ಲಗಳೆಯುವುದಿಲ್ಲ. ಆದರೆ ಇಮ್ಮಡಿ ದೇವರಾಯ ವೀರಶೈವನಾದ ಎನ್ನುವುದಕ್ಕೆ ಈ ಲೇಖಕರಿಗೆ ಇರುವ ಸಾಕ್ಷ್ಯವೇನು? ಅವರು ಯಾವ ಸಾಕ್ಷ್ಯವನ್ನೂ ಕೊಟ್ಟಿಲ್ಲ. ತಾವು ಹೇಳುವುದೇ ಪ್ರಮಾಣ ಎಂಬ ಧೋರಣೆಯಲ್ಲಿ ಹೇಳಿದ್ದಾರೆ. ಇದು ತಪ್ಪು. ಇಮ್ಮಡಿ ದೇವರಾಯ ವೀರಶೈವ ಮತಕ್ಕೆ ಪ್ರೋತ್ಸಾಹ ಕೊಟ್ಟಂತೆ ಉಳಿದ ಮತಗಳಿಗೂ ಪ್ರೋತಾಹ ನೀಡಿದ. ಆತನ ಔದಾರ್ಯ ವೀರಶೈವರಿಗೆ ಮಾತ್ರ ಸೀಮಿತವಾಗಿರಲಿಲ್ಲ. ಎಲ್ಲ ಮತೀಯರಿಗೂ ದಾನ ನೀಡಿದ ನೂರಾರು ಶಾಸನಗಳಿವೆ. ಅಲ್ಲದೆ ವಿಜಯನಗರದ ಇಮ್ಮಡಿ ದೇವರಾಯ ಶಂಕರಾಚಾರ್ಯರ ಬ್ರಹ್ಮಸೂತ್ರ ಭಾಷ್ಯಕ್ಕೆ ವೃತ್ತಿಯನ್ನು ಬರೆದಿ

Sri Vidyabharathi Book Centre, Sringeri

CC-O. In Public Domain. Digitized by eGangotri

ದ್ದಾನೆ ಎಂದು ಡಾ|| ಎಸ್. ಶ್ರೀಕಂಠ ಶಾಸ್ತ್ರಿಗಳು ಹೇಳಿದ್ದಾರೆ.[31] ವಸ್ತುಸ್ಥಿತಿ ಹಾಗಿರುವಾಗ ಲೇಖಕರ ಹೇಳಿಕೆಗೆ ಏನು ಬೆಲೆ ? ಅದೇ ರೀತಿಯಲ್ಲಿ ಹೊನ್ನಾಳಿಯ ಮಾಧವರಾಯನ 71 ಮತ್ತು 84ರ ಶಾಸನಗಳಲ್ಲಿ[32] ಬಳಸಿರುವ 'ವೀರವಸಂತ' ಎಂಬ ಶಬ್ದವನ್ನು ತಮ್ಮ ವಾದಕ್ಕೆ ಪೋಷಕವಾಗಿ ಸೂಚಿಸಿದ್ದಾರೆ. 'ವೀರವಸಂತ' ವೀರಶೈವರಿಗೆ ವಿಶಿಷ್ಟವಾದ ಶಬ್ದವಿರಬಹುದು. ಆದರೆ ಶಾಸನಗಳಲ್ಲಿ ಹಾಗೆಂದು ವರ್ಣಿತವಾದ ಮಾಧವರಾಯ ಸ್ವಯಂ ವೀರಶೈವನಾಗಿದ್ದ ಎನ್ನುವುದಕ್ಕಾಗಲೀ, ಆತನಿಗೂ ಶೃಂಗೇರಿಯ ಮಠಕ್ಕೂ ಎಂಥದೇ ಸಂಬಂಧವಿದ್ದಿತು ಎಂದು ಹೇಳುವುದಕ್ಕಾಗಲೀ, ಆ ಶಾಸನಗಳಲ್ಲಿ ಯಾವ ಆಧಾರವೂ ಇಲ್ಲ. ಇದೇ ರೀತಿಯಲ್ಲಿಯೇ ಲೇಖಕರು ಮತ್ತೊಂದು ಶಾಸನವನ್ನು ದುರುಪಯೋಗಪಡಿಸಿಕೊಂಡು, ತಪ್ಪು ಅಭಿಪ್ರಾಯ ಬರುವಂತೆ ವ್ಯಾಖ್ಯಾನಮಾಡಿ" ರೇವಣಸಿದ್ಧ ಸಂಪ್ರದಾಯಕ್ಕೆ ಸೇರಿದ ರಂಭಾಪುರಿ ಮಠಕ್ಕೆ ಸೇರಿದುದೆಂದು ಲೋಕವಿದಿತವಾದ ಬಾಳೆಹಳ್ಳಿಯ ವೀರಭದ್ರದೇವಾಲಯಕ್ಕೆ ಮಾಧವಾಚಾರ್ಯರು ದಾನ ಕೊಟ್ಟಿದ್ದಾರೆ" ಎಂದು ಹೇಳಿದ್ದಾರೆ. ಆ ಶಾಸನ M. A. R. ಪುಟ 215-216ರಲ್ಲಿ ಪ್ರಕಟವಾಗಿದೆ. ಆ ಶಾಸನ ಪಾಠ ಹೀಗಿದೆ—"ಶ್ರೀವೀರಬುಕ್ಕಣ್ಣೊಡೆಯರು ಪೃಥ್ವೀರಾಜ್ಯಂ ಗೈಯ್ಯುತ್ತಿರೆ ಅರಗರಾಜ್ಯವನಾಳುವ ಕುಮಾರ ವಿರುಪಣ್ಣೊಡೆಯ ಮಹಾಪ್ರಧಾನಿ ಮಾದರಸ ಒಡೆಯರು ಮಾಡಿದ ಧರ್ಮ ಸಾತಳಿಗೆ ನಾಡೊಳಗೆ ಬಾಳೆಹಳ್ಳಿ ವೀರೇಶ್ವರದೇವರ ಅಮೃತಪಡಿಗೆ ಬಾಳೆಹಳ್ಳಿಯಲಿ ವರಹ ನೂರ ಒಂದರ......ಮಾಡಿದ ಧರ್ಮ" ಈ ಶಾಸನಕ್ಕೂ ಶೃಂಗೇರಿಯ ಮಠಕ್ಕೂ ವಿದ್ಯಾರಣ್ಯರಿಗೂ ಯಾವ ಸಂಬಂಧವೂ ಇಲ್ಲ. ಬಾಳೆಹಳ್ಳಿಯ ರಂಭಾಪುರಿ ಮಠದ ಸುಳಿವಾಗಲೀ ರೇವಣಸಿದ್ಧಸಂಪ್ರದಾಯದ ಮಾತಾಗಲೀ,

೩೧ ಭಾರತೀಯ ಸಂಸ್ಕೃತಿ ಲೇ ; ಡಾ. ಎಸ್. ಶ್ರೀಕಂಠಶಾಸ್ತ್ರಿ—ಪು. 147 (ಇಮ್ಮಡಿದೇವರಾಯನಿಂದ ರಚಿತವಾದ ಬ್ರಹ್ಮಸೂತ್ರ ಭಾಷ್ಯದ ಮೇಟಿನ ವೃತ್ತಿಯು ಮೈಸೂರಿನ ಓರಿಯಂಟಲ್ ಲೈಬ್ರರಿಯಲ್ಲಿದ್ದು, ಅದೀಗ ಅಚ್ಚಿಗೆ ಸಿದ್ಧಗೊಳಿಸಲ್ಪಟ್ಟಿದೆ.)

೩೨ EC. VIII HN. 71 ಮತ್ತು 84.

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ಶಾಸನದಲ್ಲಿ ಎಲ್ಲೂ ಬಂದಿಲ್ಲ. ಈ ದಿನ ಆ ದೇವಸ್ಥಾನ ಯಾರ ವಶದಲ್ಲೋ ಇದೆ ಎಂದರೆ, ಅದಕ್ಕೆ ಈ ಶಾಸನ ಸಾಕ್ಷಿಯಾಗುವುದಿಲ್ಲ. ಅದಕ್ಕೆ ಪ್ರತಿಯಾಗಿ ಆ ದೇವಾಲಯದ ಇಂದಿನ ಅಧಿಕಾರಿಗಳು ಆ ಶಾಸನದಿಂದ ಅಧಿಕಾರವನ್ನು ಪಡೆಯದೆ ಹೇಗೋ ಅಧಿಕಾರ ಪಡೆದಿದ್ದಾರೆ ಎನ್ನುವುದಕ್ಕೆ ಮಾತ್ರ ಸಾಕ್ಷಿಯಾಗುತ್ತದೆ. ಹಾಗಿರುವಾಗ ಶೃಂಗೇರಿಯ ಮಠದ ಜಂಗಮ ಸಂಪ್ರದಾಯವನ್ನು ಸಾಧಿಸುವುದಕ್ಕೆ ಈ ಶಾಸನದಲ್ಲಿ ಆಧಾರವೆಲ್ಲಿದೆ ? ಆದ್ದರಿಂದ ಈ ಬಗ್ಗೆ ಲೇಖಕರು ಬರೆದಿರುವ ಮಾತುಗಳು ಮೂಲ ಶಾಸನ ತಿಳಿಯದ ಓದುಗರನ್ನು ಅಡ್ಡದಾರಿಗೆ ಎಳೆಯುವ ಪ್ರಯತ್ನವೆಂದು ಧಾರಾಳವಾಗಿ ಹೇಳಬಹುದು.

ಹಾಗೆಯೇ ತಮ್ಮ ವಾದಕ್ಕೆ ಅನಗತ್ಯವಾಗಿ ಲಕ್ಕಣದಂಡೇಶನನ್ನೂ ಎಳೆದು ತಂದಿದ್ದಾರೆ, ಲೇಖಕರು. ಲಕ್ಕಣದಂಡೇಶ ತನ್ನ ಕೃತಿಯಲ್ಲಿ, "ಕ್ರಿಯಾಶಕ್ತಿರಾಯನೆ ವಿರೂಪಾಕ್ಷನೆಂದವನ ಚರಣಾಂಬುಜಕ್ಕೆ ಶರಣು" ಎಂದು ಮಾತ್ರ ಹೇಳಿದ್ದಾನೆ. ನಾನು ಈ ಹಿಂದೆಯೇ ತೋರಿಸಿರುವಂತೆ ಲಕ್ಕಣದಂಡೇಶ ಹೇಳುವ ಕ್ರಿಯಾಶಕ್ತಿ ಚಂದ್ರಭೂಷಣ ಕ್ರಿಯಾಶಕ್ತಿ ಇರಬೇಕು. ಇವನಿಗೂ ವಿದ್ಯಾರಣ್ಯರ ಸಮಕಾಲೀನರಾದ ಕ್ರಿಯಾಶಕ್ತಿ ಆಚಾರ್ಯರಿಗೂ ಯಾವ ಸಂಬಂಧವೂ ಇಲ್ಲ. ಲಕ್ಕಣದಂಡೇಶ ತನ್ನ ಕ್ರಿಯಾಶಕ್ತಿ ಗುರುವಿನ ಹಿರಿಯರು ಶೃಂಗೇರೀ ಪೀಠದ ಗುರುಗಳಾಗಿದ್ದರು ಎಂದು ಎಲ್ಲಿಯೂ ಹೇಳುವುದಿಲ್ಲ. ಹಾಗಿರುವಾಗ ವಿನಾಕಾರಣ ಲಕ್ಕಣ ದಂಡೇಶನನ್ನು ಈ ವಾದಕ್ಕೆ ಎಳೆದು ತರುವ ಅಗತ್ಯವೇನಿತ್ತು ? ಹಾಗೆಯೇ ಕಾಶೀವಿಲಾಸ ಕ್ರಿಯಾಶಕ್ತಿ ಆಚಾರ್ಯರ ಶಿಷ್ಯನಾದ ಮಾಧವಮಂತ್ರಿ ಸೂತಸಂಹಿತೆಗೆ ಒಂದು ಟೀಕೆಯನ್ನು ಬರೆದಿದ್ದಾನೆ, ಎಂದು ಹೇಳುತ್ತಾರೆ. ಕ್ರಿಯಾಶಕ್ತಿಗಳಿಗೂ ವಿದ್ಯಾರಣ್ಯರಿಗೂ ಸಂಬಂಧವಿಲ್ಲವೆಂದು ಸಾಧಿತವಾದ ಮೇಲೆ ಮಾಧವಮಂತ್ರಿ ಯಾವ ಗ್ರಂಥದ ಮೇಲೆ ಟೀಕೆ ಬರೆದು ಈ ವಾದಕ್ಕೆ ಆಗಬೇಕಾದ ಉಪಯೋಗವೇನು ? ಹಾಗೆಯೇ ವಿನಾಕಾರಣ ನಿಜಗುಣ ಶಿವಯೋಗಿಗಳು, ಸರ್ಪಭೂಷಣ ಶಿವಯೋಗಿಗಳು, 'ಕ್ಷೇತ್ರಜ್ಞ ಸುಮನೋಬಾಣ' ಕೃತಿಯ ಕರ್ತೃವನ್ನು ವಿನಾಕಾರಣ, ಅಪ್ರಾಸಂಗಿಕವಾಗಿ ಲೇಖಕರು ಹೆಸರಿಸಿದ್ದಾರೆ. ಇವರೆಲ್ಲರೂ

Sri Vidyabharathi Book Centre, Sringeri

CC-O. In Public Domain. Digitized by eGangotri

ಖಚಿತವಾಗಿ ವೀರಶೈವ ಆಚಾರ್ಯರು. ಇವರು ತಮ್ಮ ಗ್ರಂಥಗಳಲ್ಲಿ ಎಲ್ಲಿಯೂ ತಾವು ಶಂಕರರ ಅದ್ವೈತ ಸಿದ್ಧಾಂತದ ಅನುಯಾಯಿಗಳೆಂದಾಗಲೀ, ಶೃಂಗೇರಿಯ ಮಠದ ಶಿಷ್ಯರೆಂದಾಗಲೀ ಹೇಳಿಕೊಂಡಿಲ್ಲ. ಅಂತಹ ಯಾವ ಅಂಶವನ್ನೂ ಮೇಲೆ ಹೇಳಿದ ಮಹನೀಯರ ಗ್ರಂಥದಿಂದ ಲೇಖಕರು ಉದಹರಿಸಿಲ್ಲ. ಹಾಗಿರುವಾಗ ಈ ಹೆಸರುಗಳ ಪಡೆಯನ್ನು ಮುಂದೊಡ್ಡುವುದು ಯಾರನ್ನು ಬೆದರಿಸುವ ಪ್ರಯತ್ನ ? ಯಾರ ಕಣ್ಣಿಗೆ ಮಂಕುಬೂದಿ ಎರಚುವ ಸಾಹಸ ? ಇದು ಸಾಧ್ಯವಿಲ್ಲದ ಮಾತು, ವಿಫಲ ದುಸ್ಸಾಹಸ.

ಮೇಲೆ ಹೇಳಿದ ರೀತಿಯಲ್ಲಿಯೇ ಲೇಖಕರು ಕನ್ನಡದ ಮಹಾಕವಿ ಹರಿಹರನನ್ನೂ ತಮ್ಮ ವಾದದ ಆಖಾಡಕ್ಕೆ ಎಳೆದು ತಂದಿದ್ದಾರೆ. ಆತನ ಬಗ್ಗೆ ಹೇಳುತ್ತಾ, ವಿದ್ಯಾರಣ್ಯರು ಶೃಂಗೇರಿಯ ಪೀಠಾಧಿಪರಾಗುವುದಕ್ಕೆ ಮುಂಚೆ ಗುರುಗಳಾಗಿದ್ದ ಹಂಪೆಯ ವಿರೂಪಾಕ್ಷ ಮಠಕ್ಕೆ ಹರಿಹರನು ಗುರುವಾಗಿದ್ದನು ಎಂದು ಲೇಖಕರು ಹೇಳಿದ್ದಾರೆ. ಹರಿಹರ ಹಂಪೆಯ ವಿರೂಪಾಕ್ಷನ ಭಕ್ತನಾಗಿದ್ದ ಎನ್ನುವುದು ನಿರ್ವಿವಾದ ಅಂಶ. ಆದರೆ ಆತ ಹಂಪೆಯ ವಿರೂಪಾಕ್ಷ ಮಠದ ಗುರುವಾಗಿದ್ದ ಎಂಬುದಕ್ಕೆ ಆತನ ಕಾವ್ಯಗಳಲ್ಲಾಗಲಿ, ಆತನ ಸೋದರಳಿಯ ರಾಘವಾಂಕನ ಕೃತಿಗಳಲ್ಲಾಗಲಿ, ರಾಘವಾಂಕ ಚರಿತ್ರೆಯನ್ನು ಬರೆದ ಸಿದ್ಧನಂಜೇಶನ ಕೃತಿಯಲ್ಲಾಗಲಿ, ಹರಿಹರ ರಾಘವಾಂಕರನ್ನು ರನ್ನು ಮುಕ್ತಕಂಠದಿಂದ ಸ್ತುತಿಸಿರುವ ನೂರಾರು ವೀರಶೈವ ಕವಿಗಳಾಗಲಿ, ಯಾರೊಬ್ಬರೂ ಹರಿಹರನು ಹಂಪೆಯ ವಿರೂಪಾಕ್ಷ ಮಠದ ಗುರುವಾಗಿದ್ದ ಎಂಬ ಮಾತನ್ನು ಹೇಳಿಲ್ಲ. ಹಾಗಿರುವಾಗ ಭಕ್ತಾಗ್ರೇಸರನಾಗಿದ್ದ ಹರಿಹರನನ್ನು ತಮ್ಮ ವಾದ ಚಾಪಲ್ಯದಿಂದ ಲೇಖಕರು ವಿರೂಪಾಕ್ಷ ಮಠದ ಗುರುವನ್ನಾಗಿ ಮಾಡಿರುವುದರ ಔಚಿತ್ಯವೇನು ? ವಿದ್ಯಾರಣ್ಯರಿಗೆ ವಿರೂಪಾಕ್ಷ ಮಠದ ಸಂಬಂಧವಿದ್ದುದ್ದು ನಿಜ ; ಹರಿಹರನಿಗೆ ಇತ್ತು ಎಂದು ಹೇಳಲು ಯಾವ ಆಧಾರವೂ ಇಲ್ಲ. ಹಾಗಿರುವಾಗ ಹರಿಹರನಿಗೆ ಈ ವಿರೂಪಾಕ್ಷಮಠದ ಪಟ್ಟವನ್ನು ಕುತ್ತಿಗೆಗೆ ಕಟ್ಟಿ ವಿದ್ಯಾರಣ್ಯರಿಗೆ ಸಂಬಂಧ ಕಲ್ಪಿಸಿ, ಕ್ರಿಯಾಶಕ್ತಿ ಆಚಾರ್ಯರೇ ವಿದ್ಯಾರಣ್ಯರು ಎಂಬ ಅಸಂಬದ್ಧ ಸಂಶೋಧನೆಮಾಡಿ, ಈ ಕ್ರಿಯಾಶಕ್ತಿ ವಿದ್ಯಾರಣ್ಯರು, ಅದ್ವೈತ ಪಂಥಕ್ಕೆ ಸೇರಿದ "ಶ್ರೋತ್ರೀಯ ಶುದ್ಧ

Sri Vidyabharathi Book Centre, Sringeri

CC-O. In Public Domain. Digitized by eGangotri

ಶೈವ ಬ್ರಾಹ್ಮಣ ಪಾಶುಪತ ಮಾಹೇಶ್ವರ" ಎಂಬ ವಿನೂತನ ಪಂಥವೊಂದನ್ನು ಸೃಷ್ಟಿಸಿದ್ದಾರೆ- ಹಲವು ಹೆಡೆಗಳ ರಾಕ್ಷಸನಂತೆ ಕಾಣುವ ಈ ದೈತ್ಯ ಶಬ್ದದ ಅರ್ಥವಾದರೂ ಏನು ? ನಮಗೇನೋ ಇದು ಯಾವ ಮತೀಯ ಪಂಥವನ್ನೂ ಸೂಚಿಸದ, ವಾದೋತ್ಸಾಹದಲ್ಲಿ ಬಾರಿಸಿದ ಪೊಳ್ಳು, ಬುಡಬುಡಕೆಯ ಗುಡು ಗಾಟದ ಸದ್ದಿನಂತೆ ಕೇಳುತ್ತದೆಯೇ ಹೊರತು, ಬೇರೇನೂ ಅರ್ಥವಾಗುವುದಿಲ್ಲ. ಇದನ್ನು ವಿವರಿಸಲು ವಾಚಸ್ಪತಿಗಳೇ ಬರಬೇಕು.

ಇದೇ ರೀತಿಯಲ್ಲಿ ಲೇಖಕರು ಹಂಪೆಯ ವಿರೂಪಾಕ್ಷದೇವಾಲಯದ ಹಿಂದಿರುವ, ವಿದ್ಯಾರಣ್ಯರ ಸಮಾಧಿ ಎಂದು ಹೇಳಲಾದ ಗವಿಯಲ್ಲಿ ಕಂಡು ಬರುವ ಒಂದು ಚಿತ್ರವನ್ನು ವಿದ್ಯಾರಣ್ಯರು ಜಂಗಮ ಸಂಪ್ರದಾಯಕ್ಕೆ ಸೇರಿದವರು ಎನ್ನುವ ವಾದಕ್ಕೆ ಪೋಷಕವಾಗಿ ಉದಹರಿಸಿದ್ದಾರೆ. ಈ ಚಿತ್ರವನ್ನು ಶ್ರೀ ಎಸ್. ಶ್ರೀಕಂಠಯ್ಯನವರು ತಮ್ಮ ಲೇಖನವೊಂದರಲ್ಲಿ ಸೂಚಿಸಿ[33] ಇದರ ಬಗ್ಗೆ, "ಯಾವುದೆಂದು ಗುರುತಿಸಲು ಕಷ್ಟಸಾಧ್ಯವಾದ ಈ ಪ್ರಾಚೀನ ಮೂರ್ತಿ ಮತ್ಸ್ಯದ ಮೇಲೆ ಭದ್ರಾಸನದಲ್ಲಿ ಕುಳಿತಿದೆ ; ಇದರ ಎಡಗಾಲು ಬಲಗಾಲಿನ ಮೇಲಿದೆ. ಇದರ ಎಡಗೈ ಬಲಗೈಮೇಲಿದ್ದು ಎರಡೂ ಯೋಗ ದಂಡದ ಮೇಲೆ ಇರಿಸಲ್ಪಟ್ಟವೆ," ಎಂದು ವಿವರಿಸಿ ಈ ಶಿಲ್ಪ ಮತ್ಸ್ಯೇಂದ್ರನಾಥರ ಹಠಯೋಗದರ್ಶನದ ಶಾಖೆಗೆ ಸೇರಿದ್ದಿರಬಹುದೆ ಎಂದು ಶಂಕಿಸಿದ್ದಾರೆ. ಈ ಶಿಲ್ಪವನ್ನು ಲೇಖಕರು ತಮ್ಮ ವಾದಕ್ಕೆ ಪೋಷಕ ಅಸ್ತ್ರವನ್ನಾಗಿ ಬಳಸಿಕೊಂಡು ಕಂಚಿಯ ಮಾಹೇಶ್ವರರು ನಾಥ ಸಂಪ್ರದಾಯದವರು, ಕಂಚಿಯ ವಿದ್ಯಾ ತೀರ್ಥರು ಮಾಹೇಶ್ವರರಾಗಿದ್ದರು, ವಿದ್ಯಾರಣ್ಯರು ಅವರ ಶಿಷ್ಯರು-ಹೀಗೆಲ್ಲಾ ವಾದದ ಕಗ್ಗಂಟನ್ನು ಹೊಸೆದು ವಿದ್ಯಾರಣ್ಯರು ಮಾಹೇಶ್ವರ ಸಂಪ್ರದಾಯಕ್ಕೆ ಸೇರಿದ ಜಂಗಮರು ಎಂದು ಸಾಧಿಸಲು ಪ್ರಯತ್ನಿಸಿದ್ದಾರೆ. ಯೋಗ ನಾಥ ಪಂಥದವರಿಂದಾಗಲೀ, ಮಾಹೇಶ್ವರ ಪಂಥದವರಿಂದಾಗಲೀ ಸೃಷ್ಟಿಯಾದುದಲ್ಲ. ಪಾತಂಜಲಿಯ ಯೋಗ ಸೂತ್ರದಷ್ಟೇ ಪ್ರಾಚೀನವಾದುದು. ಅಷ್ಟೇ ಅಲ್ಲ, ಹರಪ್ಪ ಸಂಸ್ಕೃತಿಗೆ ಸೇರಿದ ಗುಜರಾತಿನ ಲೋಹತಲ್‌ದ ಭೂ ಸಂಶೋಧನೆ

೩೩, Q J M S-26-Page 232.

Sri Vidyabharathi Book Centre, Sringeri

CC-O. In Public Domain. Digitized by eGangotri

ಯಲ್ಲಿ ವಿವಿಧ ಯೋಗಾಸನಗಳಲ್ಲಿರುವ ಗಾರೆಯ (ಟೆರಕೋಟ) ಮೂರ್ತಿಗಳು ದೊರೆತಿವೆಯೆಂದು ಆ ಸಂಶೋಧನೆ ನಡೆಸಿದ ಶ್ರೀ ಎಸ್. ಆರ್. ರಾಯರು, "ಲೋಹತಲ್ ಮತ್ತು ಹರಪ್ಪ ಸಂಸ್ಕೃತಿ" ಎಂಬ ಗ್ರಂಥದಲ್ಲಿ ಸಚಿತ್ರವಾಗಿ ವಿವರಿಸಿದ್ದಾರೆ.[34] ಯೋಗದ ವಿವಿಧ ಭಂಗಿಗಳಲ್ಲಿ ಕುಳಿತ ಮೂರ್ತಿಶಿಲ್ಪ ಕರ್ನಾಟಕದ ಹಲವಾರು ಶಿವ, ವಿಷ್ಣು ದೇವಾಲಯಗಳಲ್ಲಿ ನೂರಾರು ಸಂಖ್ಯೆಯಲ್ಲಿ ಕಂಡುಬರುದಿದೆ. ವಿದ್ಯಾರಣ್ಯರ ಗುರುಗಳಾದ ವಿದ್ಯಾತೀರ್ಥರು ಮಹಾಯೋಗಿಗಳಾಗಿದ್ದರು, ಲಂಬಿಕಾಯೋಗಸಿದ್ಧಿಯನ್ನು ಪಡೆದಿದ್ದರು ಎನ್ನುವುದು ಪ್ರಸಿದ್ಧ ವಿಚಾರ. ಹಾಗೆಯೇ ಸಂನ್ಯಾಸ ಸ್ವೀಕಾರ ಮಾಡಿದವರು ಅಷ್ಟಾಂಗ ಯೋಗ ಪ್ರವೀಣರಾಗಿರಬೇಕು ಎನ್ನುವ ನಂಬಿಕೆಯು ನಮ್ಮಲ್ಲಿದೆ. ಹಾಗಿರುವಾಗ ಯಾವುದೋ ಒಂದು ಯೋಗಾಸನದಲ್ಲಿ ಕುಳಿತ ಮೂರ್ತಿಯ ಚಿತ್ರದ ಆಧಾರದ ಮೇಲೆ ನಿರಾಧಾರವಾದ ವಾದದ ಬಲೆಯನ್ನು ನೆಯ್ದು ವಿದ್ಯಾರಣ್ಯರನ್ನು ಜಂಗಮ ಸಂಪ್ರದಾಯಕ್ಕೆ ಸೇರಿದವರು ಎಂದು ಹೇಳುವ ಮಾತಿನಲ್ಲಿ ಎಷ್ಟು ಔಚಿತ್ಯವಿದೆ ಎನ್ನುವುದನ್ನು ವಾಚಕರ ವಿವೇಚನೆಗೇ ಬಿಡುತ್ತೇನೆ.

ಇದೇ ಅಲ್ಲದೆ ಲೇಖಕರು 'ವಿದ್ಯಾರಣ್ಯ ಕಾಲಜ್ಞಾನ' ವನ್ನೂ ತಮ್ಮ ವಾದಾಸ್ತ್ರವಾಗಿ ಪ್ರಯೋಗ ಮಾಡಿದ್ದಾರೆ. ಈ 'ವಿದ್ಯಾರಣ್ಯ ಕಾಲಜ್ಞಾನ' ದ ಬಗ್ಗೆ ಡಾ|| ಪಿ. ಬಿ. ದೇಸಾಯ್‌ರವರು, ಇದು ೧೮ನೇ ಶತಮಾನದ ಕೊನೆ ಅಥವಾ ಇನ್ನೂ ಈಚಿನ ಕಾಲದಲ್ಲಿ ಸಂಕಲಿತವಾದ ಕೃತಿ. ಈ ಕೃತಿಯ ಕರ್ತೃತ್ವವನ್ನು ವಿದ್ಯಾರಣ್ಯರಿಗೆ ಆರೋಪಿಸಿರುವುದರಿಂದಲೂ, ಇದರಲ್ಲಿ ಅನೈತಿಹಾಸಿಕ ಅಂಶಗಳೂ, ಮನಸೋ ಇಚ್ಛೆಯಾಗಿ ವರ್ಣಿತವಾಗಿರುವುದರಿಂದಲೂ, ಶ್ರೀ ರೇವಣಸಿದ್ಧರ ಪ್ರವೇಶದಿಂದ ಪುರಾಣಾಂಶವೂ ಇದರಲ್ಲಿ ಸಮಾವೇಶಗೊಂಡಿರುವುದರಿಂದ, ಇದು ಕಟ್ಟುಕತೆಯ ಜಾತಿಗೆ ಸೇರಿದ ಕೃತಿಯೆಂದು ಅರ್ಥವಾಗುತ್ತದೆ" ಎಂದು ಹೇಳಿದ್ದಾರೆ.[35] 'ವಿದ್ಯಾರಣ್ಯ ಕಾಲಜ್ಞಾನ' ದ ಹಸ್ತಪ್ರತಿಯನ್ನು ಸಂಶೋಧನೆ ಮಾಡಿದ ಡಾ|| ಎಂ. ಹೆಚ್. ಕೃಷ್ಣ ಅವರ

---

೩೪. "Lohatol and Indus vallay civilization" by S. R. Rao-Asia Publishing House (1973).

Sri Vidyabharathi Book Centre, Sringeri

CC-O. In Public Domain. Digitized by eGangotri

1932ರ ಮಾರ್ಚಿನಲ್ಲಿ "ಈ ವಿದ್ಯಾರಣ್ಯ ಕಾಲಜ್ಞಾನಮಾಲೆ" ಪ್ರಾಯಶಃ ಬೇರೆ ಬೇರೆ ಕಾಲಗಳಲ್ಲಿ, ಬೇರೆ ಬೇರೆ ವ್ಯಕ್ತಿಗಳಿಂದ 1580ರಿಂದ 1600ರ ಕಾಲಾವಧಿಯಲ್ಲಿ ರಚಿಸಲ್ಪಟ್ಟಿರಬಹುದು. ಈ ಕೃತಿಗಳು ಆ ಕಾಲದಲ್ಲಿ ಪ್ರಚಲಿತ ವಾಗಿದ್ದ ಯಾವುದೋ ವೃತ್ತಾಂತಗಳ ಮೇಲೆ ಆಧಾರಿತವಾಗಿದ್ದು, ನಂತರ ಸಂಪಾದಕರ ಅಜ್ಞಾನದಿಂದಲೋ, ಊಹೆಯಿಂದಲೋ ಎಷ್ಟೋ ಸಂಗತಿಗಳು ಸೇರಿಸಲ್ಪಟ್ಟಿರಬೇಕು. ಕೆಳದಿ ಒಂದನೇ ಬಸವರಾಜನ (1697–1714) ಸಂಸ್ಕೃತದಲ್ಲಿ ರಚಿತವಾದ ವಿಶ್ವಕೋಶದಂತಹ ಕೃತಿಯಲ್ಲಿ ಮೊಟ್ಟಮೊದಲ ಬಾರಿಗೆ 'ವಿದ್ಯಾರಣ್ಯ ಕಾಲಜ್ಞಾನ' ದ ಹೆಸರು ಕೇಳಬರುತ್ತದೆ" ಎಂದು ಹೇಳಿದ್ದಾರೆ. ಹೀಗೆ ಮೂಲವೇ ಸಂದೇಹಗ್ರಸ್ತವಾದ, ಖಚಿತ ಕಾಲಕ್ಕೆ ಸೇರದ, ಈ ಕೃತಿಯನ್ನು ಇತಿಹಾಸ ರಚನೆಗೆ ಪ್ರಾಮಾಣಿಕ ಆಧಾರ ವಸ್ತು ಎಂದು ಸ್ವೀಕರಿಸುವುದು ಹೇಗೆ ಸಾಧ್ಯ? ಸತ್ಯವು ತಿಳಿದಿದ್ದರೂ ಲೇಖಕರು ಪ್ರಾಮಾಣಿಕವಾದ ಐತಿಹಾಸಿಕ ವಸ್ತು ಎಂದೇ ನಂಬಿದ್ದಾರೆ. ಅಷ್ಟೇ ಅಲ್ಲ 1932ರ M. A. R. ಅನ್ನು ಉದಹರಿಸುತ್ತ, "ವಿದ್ಯಾರಣ್ಯ ಮಾಧವ ಚಾರ್ಯ ಮತ್ತು ವಿಜಯನಗರ ಸಾಮ್ರಾಜ್ಯದ ಹಲವರಿಗೆ ಸಂಬಂಧಿಸಿದ ವಿಷಯ ಗಳನ್ನು ಹೇಳುವ 'ವಿದ್ಯಾರಣ್ಯರ ಕಾಲಜ್ಞಾನ' ಎನ್ನುವ ಕೃತಿಯೊಂದು ಮೈಸೂರಿನ ಓರಿಯೆಂಟಲ್ ಲೈಬ್ರೆರಿಯಲ್ಲಿ ವೀರಶೈವ ವಚನಗಳ ಕಟ್ಟಿನಲ್ಲಿ ದೊರೆಯಿತು" ಎಂದು ಹೇಳಿರುವುದನ್ನು ಆಧಾರವಾಗಿಟ್ಟುಕೊಂಡು, "ವಿದ್ಯಾ ರಣ್ಯರು ಮತ್ತು ಅವರ ಶಿಷ್ಯರು ತಮ್ಮ ಸಂಪ್ರದಾಯಕ್ಕೆ ಸೇರಿದವರೇ ಎಂದು ವೀರಶೈವರು ನಂಬಿದ್ದರು ಎಂದು ಹೇಳುವುದಕ್ಕೆ ಇದೂ ಒಂದು ಆಧಾರ"ಎಂದು ತಮ್ಮ ವಾದದ ಕತ್ತಿಯನ್ನು ಮಸೆದಿದ್ದಾರೆ. ಏನು ವಾದ ? ಎಂಥ ತರ್ಕ ? ಏನು ವಿಚಾರ ವೈಭವ ? ಯಾವುದಕ್ಕೂ ಆಧಾರವಾಗಲಾರದ ಪುಸ್ತಕವೊಂದು ವೀರಶೈವ ವಚನಗಳ ಕಟ್ಟಿನಲ್ಲಿ ದೊರೆಯಿತು ಎಂಬಷ್ಟು ಅಲ್ಪಕಾರಣ ವಿದ್ಯಾ ರಣ್ಯರು ವೀರಶೈವರಾಗಿದ್ದರು, ಶೃಂಗೇರಿಯ ಮಠದವರದ್ದು ಜಂಗಮ ಸಂಪ್ರದಾಯ ಎಂದು ಹೇಳಲು ಸಾಕ್ಷಿಯೆ ? 'ವಿದ್ಯಾರಣ್ಯ ಕಾಲಜ್ಞಾನ' ವಿದ್ಯಾರಣ್ಯರು ವೀರಶೈವರಾಗಿದ್ದರು ಎಂದು ಹೇಳುವುದಿಲ್ಲ. ಹಲವಾರು ಕಟ್ಟು

---

೩೫. "Hoysala Dynasty" Ed. Dr. B. Sheip Ali —P. 330

Sri Vidyabharathi Book Centre, Sringeri

 CC-O. In Public Domain. Digitized by eGangotri

ಕತೆಗಳನ್ನು ಹೇಳುವ ಈ ಕೃತಿಯು ಕ್ರಿಯಾಶಕ್ತಿ ಆಚಾರ್ಯರೇ ವಿದ್ಯಾರಣ್ಯರು ಎಂದು ಹೇಳುವುದಿಲ್ಲ. ಆದರೂ ಈ ಹುಸಿಮರಳಿನ ಮೇಲೆ ತಮ್ಮ ಸಿದ್ಧಾಂತದ ಸೌಧವನ್ನು ಕಟ್ಟಿದ್ದಾರೆ ಲೇಖಕರು. ಅವರ ಐತಿಹಾಸಿಕ ವಿವೇಚನೆಗೆ ನಾನು ಮೇಲೆ ಉದಹರಿಸಿದ ಮುಕ್ತಾಫಲ ಒಂದು ಅಪೂರ್ವ ಉದಾಹರಣೆ. ಪ್ರಾಯಶಃ ಯಾವ ಐತಿಹಾಸಿಕ ವಿಮರ್ಶೆಯಲ್ಲೂ ಇಂತಹ ಅಪ್ರಬುದ್ಧವಾದ ವೈಖರಿಯನ್ನು ನಾನು ಕಂಡಿಲ್ಲ. ಬಾಲಿಶ ಉತ್ಸಾಹ ಒಂದೇ ಇಂತಹ ಉದ್ಗಾರಕ್ಕೆ ಪ್ರೇರೇಪಣೆಯಾಗಿರಬಹುದು.

ಇನ್ನು ಶೃಂಗೇರಿ ಮಠದಲ್ಲಿ ಪ್ರಚಲಿತವಿರುವ ಪೂಜಾಪದ್ಧತಿ, ಪೂಜಾ ಮೂರ್ತಿಗಳು ಇವುಗಳ ವಿಷಯವನ್ನು ತಮ್ಮ ಸಿದ್ಧಾಂತಕ್ಕೆ ಪೋಷಕವಾಗಿ ಉದಹರಿಸಿ ಲೇಖಕರು ತಮ್ಮ ಸಿದ್ಧಾಂತವನ್ನು ಸ್ಥಾಪಿಸಲು ಮಾಡಿರುವ ಪ್ರಯತ್ನವನ್ನು ನೋಡೋಣ. ಇವರ ವಾದದಲ್ಲಿ ಹಲವಾರು ದೃಷ್ಟಿಗಳಿಂದ ಪ್ರಧಾನಸ್ಥಾನವನ್ನು ಪಡೆದಿರುವ ಚಂದ್ರಮೌಳೀಶ್ವರ ಪೂಜೆಯ ಬಗೆಗೆ ಮುಂದೆ ಪ್ರಸ್ತಾಪಿಸುತ್ತೇನೆ. ಸದ್ಯಕ್ಕೆ ಇವರು ಪೋಷಕವಾಗಿ ಹೇಳುವ ಶಾರದಾ, ಗಣಪತಿ ಇವುಗಳ ವಿಷಯವನ್ನು ಪರ್ಯಾಲೋಚನೆ ಮಾಡೋಣ.

ಶೃಂಗೇರಿಯಲ್ಲಿ ನಿತ್ಯಪೂಜೆ ಕೈಗೊಳ್ಳುತ್ತಿರುವ ಈ ದೇವತಾಮೂರ್ತಿಗಳ ಬಗ್ಗೆ ವೈಯಕ್ತಿಕ ಪ್ರಸ್ತಾಪ ನೋಡುವ ಮೊದಲು, ಇಲ್ಲಿ ನಡೆಯುತ್ತಿರುವ ಮೂರ್ತಿಪೂಜೆ ಬಗ್ಗೆ ಮೂಲಭೂತವಾದ ಪ್ರಶ್ನೆಯನ್ನು ಲೇಖಕರು ಎತ್ತಿದ್ದಾರೆ. ಅದು ಅದ್ವೈತಮತ ಸ್ಥಾಪನಾಚಾರ್ಯರಾದ ಶ್ರೀ ಶಂಕರಾ ಚಾರ್ಯರು ಮೂರ್ತಿಪುಜೆಗೆ ವಿರೋಧಿಗಳಾಗಿದ್ದರು ಎಂಬುದು. ಲೇಖಕರು ಶಂಕರಾಚಾರ್ಯರ ಬ್ರಹ್ಮಸೂತ್ರಭಾಷ್ಯ, ಗೀತಾಭಾಷ್ಯಗಳಿಂದ ಕೆಲವು ಭಾಗ ಗಳನ್ನು ಉದಹರಿಸಿ, ಇದರಿಂದ ಶಂಕರಾಚಾರ್ಯರು ನಿರ್ಗುಣ ಬ್ರಹ್ಮೋ ಪಾಸನೆಯೊಂದನ್ನೇ ಪ್ರತಿಪಾದಿಸಿದ್ದಾರೆ. ಆದುದರಿಂದ ಸಗುಣೋಪಾಸನೆ ಅವರ ಸಂಪ್ರದಾಯಕ್ಕೆ ವಿರೋಧವಾದದ್ದು. ಎಂತಲೇ ಶೃಂಗೇರಿಯ ಮಠದಲ್ಲಿ ಚಂದ್ರಮೌಳೀಶ್ವರ, ರತ್ನಗರ್ಭಗಣಪತಿ, ಶಾರದಾ ಮತ್ತು ಶ್ರೀ ಚಕ್ರಗಳನ್ನು ನಿತ್ಯವೂ ಆರಾಧಿಸುತ್ತಿರುವುದೇ ಶೃಂಗೇರಿಯ ಮಠ ಶಂಕರಾಚಾರ್ಯರ

Sri Vidyabharathi Book Centre, Sringeri

CC-O. In Public Domain. Digitized by eGangotri

ಅದ್ವೈತ ಪರಂಪರೆಗೆ ಸೇರಿದ ಮಠವಲ್ಲ ಎಂಬುದನ್ನು ಸಾಧಿಸುತ್ತದೆ ಎಂದು ಹೇಳಿದ್ದಾರೆ.

ಶಂಕರಾಚಾರ್ಯರ ಅದ್ವೈತ ಪರಂಪರೆಯ ಬಗ್ಗೆ ಲೇಖಕರು ಎತ್ತಿರುವ ಆಕ್ಷೇಪ ಏಕಪಕ್ಷೀಯವಾದದ್ದು. ಶಂಕರಾಚಾರ್ಯರು ತಮ್ಮ ಪ್ರಸ್ಥಾನತ್ರಯ ಭಾಷ್ಯದಲ್ಲಿ ನಿರ್ಗುಣಬ್ರಹ್ಮೋಪಾಸನೆಯೇ ಅದ್ವೈತಸಿದ್ಧಿಗೆ, ಮುಕ್ತಿಗೆ ದಾರಿ ಎಂದು ಹೇಳಿರುವುದು, ನಿಜ. ಆದರೆ ಅವರು ಕೇವಲ ಪ್ರಸ್ಥಾನತ್ರಯ ಭಾಷ್ಯ ವನ್ನಷ್ಟೇ ಬರೆದಿಲ್ಲ. ಶಂಕರಾಚಾರ್ಯರ ಬಗ್ಗೆ ಮಾತನಾಡುವಾಗ ಅವರ ಕೃತಿಗಳ ಮತ್ತು ಜೀವನದ ಸಾಧನೆಯ ಸಮಗ್ರಾವಲೋಕನ ಮಾಡುವುದು ಅತ್ಯಗತ್ಯ. ಪ್ರಸ್ಥಾನತ್ರಯ ಭಾಷ್ಯಗಳು ಶಂಕರಾಚಾರ್ಯರ ಸಾಧನೆಯ ಸ್ವರ್ಣಕಳಶ. ವಿಶ್ವದರ್ಶನ ಶಾಸ್ತ್ರಕ್ಕೆ ಅವರು ನೀಡಿದ ಅನರ್ಘ್ಯ ಕಾಣಿಕೆ. ಭಾರತೀಯ ಸಾಂಸ್ಕೃತಿಕ ಇತಿಹಾಸದಲ್ಲಿ ಶಂಕರಾಚಾರ್ಯರ ಅದ್ವೈತಸಿದ್ಧಾಂತ ಎಷ್ಟು ಪ್ರಾಮುಖ್ಯಸ್ಥಾನವನ್ನು ಪಡೆದಿದೆಯೋ, ಅಷ್ಟೇ ಮಟ್ಟಿಗೆ ಅವರು ಸಾಧಿಸಿದ ಹಿಂದೂ ಧರ್ಮದ ಸಮನ್ವಯ ಕಾರ್ಯವು ಅಷ್ಟೇ ಪ್ರಧಾನಸ್ಥಾನವನ್ನು ಪಡೆದಿದೆ. ಬೌದ್ಧ ಮತ್ತು ಜೈನಧರ್ಮಗಳ ಆಘಾತದಿಂದ ಜರ್ಝರಿತ ವಾಗಿದ್ದ ವೈದಿಕ ಧರ್ಮ ಪರಂಪರೆಯನ್ನು ಪುನಶ್ಚೇತನಗೊಳಿಸಿ, ಆ ಧರ್ಮ ಪರಂಪರೆಯನ್ನು ಮತ್ತೆ ಭದ್ರಬುನಾದಿಯ ಮೇಲೆ ಸ್ಥಾಪಿಸುವ ಸಲುವಾಗಿ ಶಂಕರಾಚಾರ್ಯರು ಅದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿದಂತೆಯೇ, ನಾನಾ ದೇವತೋಪಾಸನೆಗಳಿಂದ ಛಿನ್ನ ವಿಭಿನ್ನವಾಗಿದ್ದ ಹಿಂದೂ ಸಮಾಜವನ್ನು ಏಕವೇದಿಕೆಯ ಮೇಲೆ ಸಮನ್ವಯ ಗೊಳಿಸುವುದಕ್ಕಾಗಿ ಪ್ರಯತ್ನಪಟ್ಟು ಷಣ್ಮತಸ್ಥಾಪನಾಚಾರ್ಯರೆಂದು ಕೀರ್ತಿತ ರಾಗಿದ್ದಾರೆ. ಹಾಗೆಯೇ, ಹಲವಾರು ಐತಿಹಾಸಿಕ ಕಾರಣಗಳಿಂದಾಗಿ ಭಾರತೀಯ ಧರ್ಮದಲ್ಲಿ ಪ್ರವೇಶಮಾಡಿದ್ದ ವಾಮಾಚಾರಗಳನ್ನು ಖಂಡಿಸಿ, ಉಗ್ರ ಪದ್ಧತಿಯನ್ನು ತೊಡೆದು ಹಾಕಿ, ಸಕಲರಿಗೂ ಒಪ್ಪಿಗೆಯಾಗುವಂತಹ ವೈದಿಕ ಪೂಜಾ ಪದ್ಧತಿಯನ್ನು ಅವರು ಆಚರಣೆಗೆ ತಂದರೆಂಬುದು ಲೋಕವಿಶ್ರುತ ವಾದ ವಿಷಯ. ಈ ಕಾರ್ಯಕ್ಕಾಗಿ ಅವರು ಬೌದ್ಧ ಜೈನಧರ್ಮೀಯರನ್ನು ವಿರೋಧಿಸಿದಂತೆಯೇ ಹಿಂದೂ ಧರ್ಮದ ಒಳಪಂಗಡಗಳಾದ ಶೈವರು,

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಪಾಲಿಕರು, ಕಾಳಾಮುಖರು ಮೊದಲಾದ ಗುಂಪುಗಳೊಂದಿಗೂ ವಾದ ವಿವಾದ ಮಾಡಿ ಅವರಲ್ಲಿ ಆಚರಣೆಯಲ್ಲಿದ್ದ ಶೃತಿಸಮ್ಮತವಲ್ಲದ ಆಚರಣೆಗಳನ್ನು ಖಂಡಿಸಿದರು. ಉಗ್ರದೇವತಾ ಪೂಜೆ ನಡೆಯುತ್ತಿದ್ದ ಕಾಂಚಿ, ಕೊಲ್ಲೂರು, ಮೊದಲಾದೆಡೆಗಳಲ್ಲಿ ಅವನ್ನು ತಪ್ಪಿಸಿ, ಅಲ್ಲಿದ್ದ ಉಗ್ರಮೂರ್ತಿಗಳ ಸ್ಥಾನದಲ್ಲಿ ಸೌಮ್ಯಮೂರ್ತಿಗಳನ್ನು ಸ್ಥಾಪಿಸಿದರೆಂಬುದು ಲೋಕಪ್ರಸಿದ್ಧವಾದ ವಿಷಯ. ಅದ್ವೈತ ಸಿದ್ಧಾಂತ, ವೈದಿಕ ಪೂಜಾ ಪದ್ಧತಿ, ಸಕಲ ದೇವತೋಪಾಸನೆಗಳ ಭದ್ರ ತಳಹದಿಯ ಮೇಲೆ ಹಿಂದೂ ಧರ್ಮವನ್ನು ಸಮನ್ವಯಗೊಳಿಸಿದ ಅಮೋಘ ಸಾಧನೆ ಶಂಕರಾಚಾರ್ಯರದು. ಆಚಾರ್ಯರು ಕೇವಲ ತತ್ತ್ವೋಪಾಸಕರಾದ ದಾರ್ಶನಿಕರೇ ಆಗಿರಲಿಲ್ಲ. ಒಂದು ಸಿದ್ಧಾಂತವನ್ನು ಪ್ರತಿಪಾದಿಸುವುದು ಎಷ್ಟು ಮುಖ್ಯವೋ, ಆ ಸಿದ್ಧಾಂತ ಜೀವಂತವಾಗಿ ಉಳಿಯಬೇಕಾದರೆ ಅದಕ್ಕೆ ವ್ಯಾವಹಾರಿಕವಾದ ಒಂದು ಭದ್ರ ವ್ಯವಸ್ಥೆಯೂ ಇರಬೇಕು, ಎಂಬ ವ್ಯಾವಹಾರಿಕ ಸತ್ಯವನ್ನು ಆಚಾರ್ಯರು ಮನಗಂಡಿದ್ದರು. ಈ ದೃಷ್ಟಿಯಿಂದಲೇ ತಾವು ಸ್ಥಾಪಿಸಿದ ಧರ್ಮವ್ಯವಸ್ಥೆ ಸುಭದ್ರವಾಗಿ ಉಳಿಯಲು ಮತ್ತು ಅದಕ್ಕೆ ಎಂದೂ ಧಕ್ಕೆ ಬರದಂತೆ ಕಾಪಾಡಲು, ಶಂಕರಾಚಾರ್ಯರು ಭಾರತದ ನಾಲ್ಕು ದಿಕ್ಕುಗಳಲ್ಲಿ ಚತುರ್ಮಠಗಳನ್ನು ಸ್ಥಾಪಿಸಿ, ತಮ್ಮಿಂದಲೇ ಶಿಕ್ಷಣ ಪಡೆದ ತಮ್ಮ ನಾಲ್ವರು ಶಿಷ್ಯರನ್ನು ಆ ಪೀಠಗಳಿಗೆ ಆಚಾರ್ಯರನ್ನಾಗಿ ನೇಮಿಸಿದರು. ಈ ಕಾರ್ಯಕ್ಕಾಗಿ ದಶನಾಮೀ ಸಂನ್ಯಾಸಿ ಪದ್ಧತಿಯೂ ರೂಪುಗೊಂಡಿತು. ಶಂಕರಾಚಾರ್ಯರ ಮಠ ಸಂಪ್ರದಾಯಗಳ ಪರ್ಯಾಲೋಚನೆ ಮಾಡುವಾಗ ಮೂಲಭೂತವಾದ ಈ ವಿಷಯವನ್ನು ನಾವು ಮರೆಯಬಾರದು.

ಎರಡನೆಯದಾಗಿ ಶಂಕರಾಚಾರ್ಯರು ಮುಮುಕ್ಷುಗಳಿಗಾಗಿ ಪ್ರಸ್ಥಾನತ್ರಯ ಭಾಷ್ಯ ಬರೆದಂತೆಯೇ, ಸಾಮಾನ್ಯ ಜನರಿಗೂ ಅದ್ವೈತ ತತ್ತ್ವದರ್ಶನ ಮಾಡಿಸುವ ಸಲುವಾಗಿ ಪ್ರಕರಣಗ್ರಂಥಗಳನ್ನು ಬರೆದಿದ್ದಾರೆ. ಸಾಮಾನ್ಯ ಜನರಲ್ಲೂ ದೈವಭಕ್ತಿಯ ಆವೇಶ ತುಂಬುವ, ಶ್ರದ್ಧೆಯನ್ನು ರಕ್ತಗತಗೊಳಿಸುವ ಶಿವಾನಂದ ಲಹರಿ, ಸೌಂದರ್ಯಲಹರಿ, ಆನಂದಲಹರಿ, ಮೊದಲಾದ ನೂರಾರು ದಿವ್ಯ ಸ್ತೋತ್ರಗಳನ್ನು ರಚಿಸಿದ್ದಾರೆ. ಈ ಸ್ತೋತ್ರಗಳು ಆದಿಶಂಕರಾಚಾರ್ಯ

Sri Vidyabharathi Book Centre, Sringeri

CC-0. In Public Domain. Digitized by eGangotri

ಕೃತವಾದುವೋ ಅಲ್ಲವೋ, ಅದ್ವೈತಮತ ಸ್ಥಾಪನಾಚಾರ್ಯರಾದ ಶಂಕರರು
ಈ ಸ್ತೋತ್ರಗಳನ್ನು ರಚಿಸದೇ ಇದ್ದರೆ, ಈ ಸ್ತೋತ್ರಗಳನ್ನು ಬರೆದವರು ಬೇರೆ
ಶಂಕರಾಚಾರ್ಯರೆ ? ಎಂಬ ಬಗ್ಗೆಯೂ ಸಾಕಷ್ಟು ಜಿಜ್ಞಾಸೆ, ವಿಮರ್ಶೆ
ಎಲ್ಲವೂ ನಡೆದುವು. ಕೊನೆಯಲ್ಲಿ ಶಂಕರಾಚಾರ್ಯರ ಹೆಸರಿಗೆ ಕೆಲವು
ಸ್ತೋತ್ರಗಳು ಆರೋಪಿತವಾಗಿರಬಹುದಾಗಿದ್ದರೂ ಬಹುಮಟ್ಟಿನ ಸ್ತೋತ್ರ
ಗಳು ಆದಿಶಂಕರಾಚಾರ್ಯ ಕೃತವೆಂದೇ ವಿದ್ವಾಂಸರು ಒಪ್ಪಿಕೊಂಡಿದ್ದಾರೆ.
ಶಂಕರಾಚಾರ್ಯರ ಬಗ್ಗೆ ಬಹು ಆಳವಾದ ವ್ಯಾಸಂಗ ಮಾಡಿದ ಶ್ರೀಬಲದೇವ
ಉಪಾಧ್ಯಾಯರು, ಶಂಕರಾಚಾರ್ಯಕೃತ ಸ್ತೋತ್ರಗಳ ಬಗ್ಗೆ ಚರ್ಚೆಮಾಡಿ
ಖಚಿತವಾಗಿ ಆದಿ ಶಂಕರಾಚಾರ್ಯರಿಂದಲೇ ರಚಿತವಾದ ಸ್ತೋತ್ರಗಳಾವುವು
ಎಂದು ನಿರ್ಧರಿಸಿದ್ದಾರೆ[೩೬]. ಅದ್ವೈತ ಸ್ಥಾಪನಾಚಾರ್ಯರಾದ ಶಂಕರಾ
ಚಾರ್ಯರು ಈ ಸ್ತೋತ್ರಗಳನ್ನು ರಚಿಸಿರುವುದೇ ಅವರು ಮೂರ್ತಿ
ಪೂಜೆಗೆ ವಿರೋಧವಾಗಿರಲಿಲ್ಲ ಎನ್ನುವುದಕ್ಕೆ ಪ್ರಮಾಣವಾಗಿದೆ. ಎಲ್ಲಕ್ಕಿಂತ
ಮಿಗಿಲಾಗಿ ಇಂದು ಅದ್ವೈತ ಸಿದ್ಧಾಂತಾನುಯಾಯಿಗಳಾದ ಸಹಸ್ರ ಸಹಸ್ರ
ಗೃಹಗಳಲ್ಲಿ ಆಚರಣೆಯಲ್ಲಿರುವ ಶಿವ, ವಿಷ್ಣು, ಅಂಬಿಕ, ಗಣಪತಿ,
ಸೂರ್ಯ ಈ ದೇವತೆಗಳನ್ನೊಳಗೊಂಡ ಪಂಚಾಯತನ ಪೂಜಾ ಪದ್ಧತಿಗೆ
ಶಂಕರಾಚಾರ್ಯರೇ ಪ್ರವರ್ತಕರು ಎನ್ನುವುದು ಲೋಕಸಮ್ಮತವಾದ
ವಿಷಯ.

ಇನ್ನು ಶಂಕರ ಮಠಗಳಲ್ಲಿ ಆಚರಣೆಯಲ್ಲಿರುವ ಶ್ರೀಚಕ್ರೋಪಾಸನೆಯ
ಬಗ್ಗೆ ಹೇಳುವುದಾದರೆ, ಈ ವಿಷಯದಲ್ಲಿ ಒಂದು ಮಾತನ್ನು ಮುಖ್ಯವಾಗಿ
ಗಮನಿಸಬೇಕು. ಇಲ್ಲಿ ಆಚರಣೆಯಲ್ಲಿರುವ ಶ್ರೀ ಚಕ್ರೋಪಾಸನಾಕ್ರಮ
ಕೌಲಮಾರ್ಗವಲ್ಲ, ವೈದಿಕಮಾರ್ಗ, ಈ ಬಗ್ಗೆಯ ಶ್ರೀ ಚಕ್ರೋಪಾಸನೆ
ಶಂಕರಾಚಾರ್ಯರಿಂದ ಅಂಗೀಕರಿಸಲ್ಪಟ್ಟಿತ್ತು. ಅಷ್ಟೇ ಅಲ್ಲ ಈ ಬಗೆಯ
ದೇವತೋಪಾಸನೆಯನ್ನು ಕುರಿತಾದ "ಪ್ರಪಂಚಸಾರ"ವೆಂಬ ತಂತ್ರಗ್ರಂಥ

---

೩೬ "ಶ್ರೀ ಶಂಕರಾಚಾರ್ಯರು"—ಶ್ರೀ ಬಲದೇವ

Sri Vidyabharathi Book Centre, Sringeri

CC-O. In Public Domain. Digitized by eGangotri

ಶಂಕರಾಚಾರ್ಯರಿಂದಲೇ ಬರೆಯಲ್ಪಟ್ಟಿದು ಎಂದು ವಿದ್ವಾಂಸರೆಲ್ಲರೂ ಒಪ್ಪಿಕೊಂಡಿದ್ದಾರೆ[37]. ಈ 'ಪ್ರಪಂಚಸಾರ'ಕ್ಕೆ ಶಂಕರರ ಪ್ರಥಮ ಶಿಷ್ಯರಾದ ಪದ್ಮಪಾದರು "ವಿವರಣೆ" ಎಂಬ ವ್ಯಾಖ್ಯಾನ ರಚಿಸಿದ್ದಾರೆ. ಈ ಬಗ್ಗೆ ಆಳವಾಗಿ ಅಧ್ಯಯನ ಮಾಡಿದ ಡಾ. ಶ್ರೀಕಂಠಶಾಸ್ತ್ರಿಗಳವರು ಹೀಗೆ ಬರೆದಿದ್ದಾರೆ, "ನಿರ್ಗುಣ ಬ್ರಹ್ಮವಾದಿಗಳಾದ ಶ್ರೀ ಶಂಕರಾಚಾರ್ಯರೇ ಶ್ರೀ ವಿದ್ಯಾ ಉಪಾಸಕರಾಗಿದ್ದು, ಪ್ರಪಂಚಸಾರ, ಆನಂದಲಹರಿ, ಸೌಂದರ್ಯಲಹರಿ, ಲಲಿತಾತ್ರಿಶ್ಶತಿ ಭಾಷ್ಯ ಮುಂತಾದ ಗ್ರಂಥಗಳನ್ನು ರಚಿಸಿರುವರು- ಮುಖ್ಯ ಪೀಠಗಳಲ್ಲಿ ಶ್ರೀ ಚಕ್ರಯಂತ್ರಗಳನ್ನು ಸ್ಥಾಪಿಸಿರುವರು. ಅವರ ಪರಮಗುರುಗಳು ಶಕ್ತಿ ಸೂತ್ರಗಳನ್ನೂ, ಸುಭಗೋದಯ ಮುಂತಾದ ಗ್ರಂಥಗಳನ್ನೂ ರಚಿಸಿರುವರು. ಆಚಾರ್ಯರ ಗುರುಗಳಾದ ಗೋವಿಂದ ಭಗವತ್ಪಾದರು ರಸೇಶ್ವರವಾದ ಪರವಾದ 'ರಸಹೃದಯ'ವೆಂಬ ಗ್ರಂಥವನ್ನು ಬರೆದಿರುವರು,[37]" ಎಂಬುದಾಗಿ ಹೇಳಿದ್ದಾರೆ. ಇವೆಲ್ಲಾ ಚಾರಿತ್ರಿಕವಾಗಿ ವಿಮರ್ಶಿಸಲ್ಪಟ್ಟು, ಅದರಿಂದ ಸಿದ್ಧವಾದ ಅಂಶಗಳು. ಈ ಎಲ್ಲಾ ಆಧಾರಗಳನ್ನೂ ಪರಿಶೀಲನೆ ಮಾಡುವುದರಿಂದ ಶೃಂಗೇರಿಯ ಮಠದಲ್ಲಿ ಆಚರಣೆಯಲ್ಲಿರುವ ಚಂದ್ರಮೌಳೀಶ್ವರ, ಶಾರದಾ, ಗಣಪತಿ, ಶ್ರೀಚಕ್ರ ಇವುಗಳ ಉಪಾಸನೆ ಶಾಂಕರ ಸಂಪ್ರದಾಯಕ್ಕೆ ವಿರೋಧವಾದುದಲ್ಲ ಎಂಬ ಮಾತು ನಿಷ್ಪನ್ನವಾಗುತ್ತದೆ. ಈ ಬಗೆಯ ಪೂಜಾ ಪದ್ಧತಿ ಕೇವಲ ಶೃಂಗೇರಿಯಲ್ಲಿ ಮಾತ್ರ ಆಚರಣೆಯಲ್ಲಿರುವುದಿಲ್ಲ. ಶಂಕರಾಚಾರ್ಯರಿಂದ ನೇರವಾಗಿ ಸ್ಥಾಪಿಸಲ್ಪಟ್ಟ ಚತುರ್ಮಠಗಳಲ್ಲೂ, ಆ ಮಠದ ಗುರುಗಳಿಂದ ಸ್ಥಾಪಿತವಾದ ನೂರಾರು ಶಾಖಾ ಮಠಗಳಲ್ಲೂ ಇಂದಿಗೂ ಆಚರಣೆಯಲ್ಲಿದೆ ಅಷ್ಟೇಕೆ, ಲೇಖಕರು ತಮ್ಮ ವಾದಕ್ಕೆ ಆಧಾರವೆಂದು ಭಾವಿಸುವ ಹೊಳೆನರಸೀಪುರದ ಶ್ರೀ ಸಚ್ಚಿದಾನಂದೇಂದ್ರ ಸರಸ್ವತಿ ಸ್ವಾಮಿಗಳವರ ಆಶ್ರಮದಲ್ಲಿಯೂ ಈ ಪದ್ಧತಿ ಆಚರಣೆಯಲ್ಲಿದೆ. ಈ ಕಾರಣಕ್ಕಾಗಿಯೇ ಶೃಂಗೇರಿಯ ಮಠದವರದು ಜಂಗಮ ಸಂಪ್ರದಾಯ ಎಂದು ಹೇಳುವುದಾದರೆ ಈ ನೂರಾರು ಮಠಗಳನ್ನೂ ಆ ಸಂಪ್ರದಾಯಕ್ಕೆ ಸೇರಿಸಬೇಕಾಗುತ್ತದೆ. ಅದರೆ

---

೩೭ ಭಾರತೀಯ ಸಂಸ್ಕೃತಿ ಲೇ ; ಡಾ. ಎಸ್. ಶ್ರೀಕಂಠಶಾಸ್ತ್ರಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಅಂತಹ ತರ್ಕಬದ್ಧವಾದ ಹೇಳಿಕೆಯನ್ನು ಮಾಡುವ ಸಾಹಸಕ್ಕೆ
ಹೋಗಿದೆ ಲೇಖಕರು ಶೃಂಗೇರಿಯ ಮಠವನ್ನು ಮಾತ್ರ ತಮ್ಮ
ವಾದಕ್ಕೆ ಏಕೈಕ ಲಕ್ಷ್ಯವನ್ನಾಗಿ ಮಾಡಿಕೊಂಡಿದ್ದಾರೆ. ಇದರ ಉದ್ದೇಶ
ವೇನು? ಸತ್ಯಸ್ಥಾಪನೆಯೆ? ಅಥವಾ ಶೃಂಗೇರಿಯ ಮಠದ ಬಗ್ಗೆ ಇವರಿಗಿ
ರುವ ವಿಶೇಷವಾದ ಪಕ್ಷಪಾತವೆ? ಲೇಖಕರೇ ಹೇಳಬೇಕು. ನಾನು ಹೇಳುವು
ದಿಷ್ಟೇ ಲೇಖಕರು ಏಕಪಕ್ಷೀಯವಾದ ಆಧಾರಗಳನ್ನು ಪರಿಶೀಲಿಸದೇ ನಿರ್ಮತ್ಸರ
ವಾಗಿ ಎಲ್ಲಾ ಆಧಾರಗಳನ್ನೂ ಪರಿಶೀಲಿಸಿದ್ದಾರೆ ಅವರಿಂದ ಈ ಸಿದ್ಧಾಂತದ
ಹೆಸರಿನ ರಾದ್ಧಾಂತ ನಡೆಯುತ್ತಿರಲಿಲ್ಲ,

ಇನ್ನುಮುಂದೆ ಲೇಖಕರು ವಿಶೇಷವಾಗಿ ಪ್ರಸ್ತಾಪಿಸಿರುವ, ತಮ್ಮ
ವಾದದ ಬತ್ತಳಿಕೆಯಲ್ಲಿನ ಬ್ರಹ್ಮಾಸ್ತ್ರ ಎಂದು ಭಾವಿಸಿರುವ ಚಂದ್ರಮೌಳೀಶ್ವರ
ಲಿಂಗದ ವಿಷಯಕ್ಕೆ ಬರೋಣ. ಶೃಂಗೇರಿಯ ಮಠದಲ್ಲಿ ಅರ್ಚಿತವಾಗುತ್ತಿ
ರುವ ಚಂದ್ರಮೌಳೀಶ್ವರಲಿಂಗ ಶಾಂಕರ ಸಂಪ್ರದಾಯಕ್ಕೆ ವಿರೋಧವಾದದ್ದಲ್ಲ
ಎನ್ನುವುದನ್ನು ನಾನು ಈಗಾಗಲೇ ಸ್ಪಷ್ಟಪಡಿಸಿದ್ದೇನೆ. ಈಗ ಉಳಿದಿರುವುದು
ಒಂದು ಅಂಶ ಮಾತ್ರ. ಅದು ಶೃಂಗೇರಿಯ ಮಠದಲ್ಲಿ ಅರ್ಚಿತವಾಗುತ್ತಿರುವ
ಚಂದ್ರಮೌಳೀಶ್ವರಲಿಂಗ ಶೃಂಗೇರಿಯ ಆಚಾರ್ಯರಿಗೆ ರೇವಣಸಿದ್ಧರಿಂದ ಕೊಡ
ಲ್ಪಟ್ಟಿತು. ರೇವಣಸಿದ್ಧರು ವೀರಶೈವ ಪಂಚಾಚಾರ್ಯರಲ್ಲಿ ಒಬ್ಬರು. ಅದು
ದರಿಂದಲೇ ಅವರಿಂದ ಚಂದ್ರಮೌಳೀಶ್ವರಲಿಂಗವನ್ನು ಪಡೆದ ಆಚಾರ್ಯರು
ರೇವಣಸಿದ್ಧಸಂಪ್ರದಾಯಕ್ಕೆ ಸೇರಿದ ಜಂಗಮರು ಎನ್ನುವುದು ಲೇಖಕರ ವಾದ
ಈ ವಾದದಲ್ಲಿ ಎಷ್ಟು ಹುರುಳಿದೆ, ಐತಿಹಾಸಿಕವಾಗಿ ಎಷ್ಟು ಸತ್ಯವಿದೆ ಎನ್ನುವು
ದನ್ನು ನೋಡೋಣ. ಚಂದ್ರಮೌಳೀಶ್ವರ ಲಿಂಗಾರ್ಚನೆ ಕೇವಲ ಶೃಂಗೇರಿಯ
ಮಠದ ವೈಶಿಷ್ಟ್ಯವಲ್ಲ. ಶಂಕರಾಚಾರ್ಯರಿಂದ ಸ್ಥಾಪಿತವಾದ ಚತುರ್ಮಠ
ಗಳಲ್ಲೂ ಪೂಜೆಗೊಳ್ಳುತ್ತಿರುವುದು ಚಂದ್ರಮೌಳೀಶ್ವರಲಿಂಗ. ಈ ಮೂರ್ತಿಯ
ಬಗ್ಗೆ ಪರಂಪರಾಗತವಾಗಿ ಬಂದ ಒಂದು ನಂಬಿಕೆಯಿದೆ. ಶಂಕರಾಚಾರ್ಯರು
ಈ ಲಿಂಗಗಳನ್ನು ಪ್ರತ್ಯಕ್ಷವಾಗಿ ಪರಮೇಶ್ವರನಿಂದ ಪಡೆದು, ಬಳಿಕ ಅವನ್ನು
ತಮ್ಮ ಶಿಷ್ಯರಿಗೆ ಅನುಗ್ರಹಿಸಿದರು ಎನ್ನುವುದು ಸಾಂಪ್ರದಾಯಿಕವಾಗಿ ಬಂದಿ
ರುವನಂಬಿಕೆ. ಇದೇ ಮಾತನ್ನೇ "ಶ್ರೀಶಂಕರ ಅಷ್ಟೋತ್ತರ ಶತನಾಮಾವಳಿ"-

Sri Vidyabharathi Book Centre, Sringeri

CC-O. In Public Domain. Digitized by eGangotri

"ಕೈಲಾಸ ಯಾತ್ರಾ ಸಂಪ್ರಾಪ್ತ ಶ್ರೀಚಂದ್ರಮೌಳೀಶ್ವರ ಪ್ರಪೂಜಕಃ" ಎಂದು ಹೇಳಿದೆ. ಶಂಕರಾಚಾರ್ಯರ ಬಗ್ಗೆ ಉಪಲಬ್ಧವಿರುವ ಎಲ್ಲಾ ಶಂಕರವಿಜಯ ಗಳೂ ಈ ಮಾತನ್ನು ಒಪ್ಪಿಕೊಂಡಿವೆ. ಶೃಂಗೇರಿಯಲ್ಲಿರುವ ಚಂದ್ರಮೌಳೀಶ್ವರಲಿಂಗವು ಈ ಪೈಕಿ ಬಂದು. ಹಾಗಲ್ಲ, ಶೃಂಗೇರಿಯ ಚಂದ್ರಮೌಳೀಶ್ವರ ಲಿಂಗ ರೇವಣಸಿದ್ಧರೇ ಕೊಟ್ಟಿದ್ದು, ಶಂಕರಾಚಾರ್ಯರಲ್ಲ, ಎನ್ನುವುದಾದರೆ, ಉಳಿದ ಶಂಕರಮಠಗಳಲ್ಲಿ ಇರುವ ಚಂದ್ರಮೌಳೀಶ್ವರಲಿಂಗಗಳನ್ನು ರೇವಣಸಿದ್ಧರೇ ಕೊಟ್ಟರೆ? ಇದಕ್ಕೆ ಯಾವ ಆಧಾರವೂ ಇಲ್ಲ. ಅಂತಹ ಹೇಳಿಕೆಯನ್ನು ಲೇಖಕರು ಮಾಡಿಲ್ಲ. ಅವರು ಹೇಳಿರುವುದಿಷ್ಟು ಶೃಂಗೇರಿಯಲ್ಲಿರುವ ಚಂದ್ರ ಮೌಳೀಶ್ವರ ಲಿಂಗರೇವಣಸಿದ್ಧರೇ ಕೊಟ್ಟದ್ದು, ಈ ವಾದಕ್ಕೆ ಲೇಖಕರ ಆಧಾರ ಜನಜನಿತವಾದ ದಂತಿ, ಶಿವಭೂಪಾಲನ 'ಶಿವತತ್ತ್ವ ರತ್ನಾಕರ', 'ವಿದ್ಯಾರಣ್ಯ ಕಾಲಜ್ಞಾನ', ಮತ್ತು 'ಗುರುವಂಶಕಾವ್ಯ'. ಈ ಎಲ್ಲಾ ಆಧಾರಗಳ ಐತಿಹಾಸಿಕ ಪ್ರಾಮಾಣಿಕತೆಯ ಬಗ್ಗೆ ಈ ಹಿಂದೆಯೇ ನಾನು ವಿಶ್ಲೇಷಿಸಿರುವುದ ರಿಂದ ಆ ಮಾತನ್ನು ಪುನರುಕ್ತಿಸಿಸಬೇಕಾದ ಅಗತ್ಯವಿಲ್ಲ. ಅಲ್ಲದೆ ಶೃಂಗೇರಿಯ ಚಂದ್ರಮೌಳೀಶ್ವರ ಲಿಂಗದ ಬಗ್ಗೆ ವಿಶೇಷ ಅಧ್ಯಯನ ಮಾಡಿದ ಶ್ರೀ ಲ. ನ. ಶಾಸ್ತ್ರಿಗಳು, ಶೃಂಗೇರಿಯಲ್ಲಿರುವುದು ಒಂದಲ್ಲ ಐದು ಚಂದ್ರಮೌಳೀಶ್ವರ ಲಿಂಗ ಗಳು ಎಂದು "ಶಂಕರ ಕೃಪಾ" ಪತ್ರಿಕೆಯಲ್ಲಿ ಪ್ರಕಟವಾದ ಲೇಖನ ಮಾಲೆಯಲ್ಲಿ ಐತಿಹಾಸಿಕ ಸಾಕ್ಷ್ಯಸಾಹಿತ್ಯಗಳೊಡನೆ ಖಚಿತಪಡಿಸಿದ್ದಾರೆ.[೩೮] ಆ ಐದರಲ್ಲೂ ಯಾವುದೂ ಪಂಚಾಚಾರ್ಯರಲ್ಲಿ ಒಬ್ಬರಾದ ರೇವಣಸಿದ್ಧಯೋಗಿಯಿಂದ ಕೊಡಲ್ಪಟ್ಟದ್ದಲ್ಲ ಎಂದು ತಿಳಿಸಿಕೊಟ್ಟಿದ್ದಾರೆ. ಪ್ರಾಯಶಃ ಆ ಲೇಖನ ಈ ಲೇಖಕರ ದೃಷ್ಟಿಗೆ ಬೀಳದಿರಬಹುದು. ಈಗಲಾದರೂ ಅದನ್ನು ಓದಿನೋಡಲಿ. ಈಗ ಲೇಖಕರೇ ಉದಹರಿಸಿರುವ, ಕಲ್ಪಿಸಿರುವ ಸಿದ್ಧಾಂತಗಳು ಎಷ್ಟು ಮಟ್ಟಿಗೆ ಸಾಧು ಎಂದು ಪರಿಶೀಲಿಸೋಣ. ರೇವಣಸಿದ್ಧಯೋಗಿಗಳಿಂದ ಚಂದ್ರ ಮೌಳೀಶ್ವರ ಲಿಂಗವನ್ನು ಪಡೆದವರು ಆದಿ ಶಂಕರರಲ್ಲ ಎನ್ನು ಮಾತನ್ನು ಲೇಖಕರೇ ಒಪ್ಪಿಕೊಂಡಿದ್ದಾರೆ. ಆದರೆ ಆ ವಿಷಯವನ್ನು ಅಲ್ಲಿಗೇ ಬಿಟ್ಟಿಲ್ಲ.

---

೩೮. "ಶ್ರೀ ಚಂದ್ರಮೌಳೀಶ್ವರ"– ಲೇ॥ ಲ. ನ. ಶಾಸ್ತ್ರಿ—"ಶಂಕರ ಕೃಪಾ", ಪ್ರಮಾದಿ ಸಂವತ್ಸರ–Vol. IX ಸಂ. 1-7 (1973).

Sri Vidyabharathi Book Centre, Sringeri

CC-O. In Public Domain. Digitized by eGangotri

ಅವರು ಆಧಾರವೆಂದು ಭಾವಿಸಿರುವ ಗ್ರಂಥಗಳಲ್ಲಿ ಈ ವಿಷಯವಿರುವುದರಿಂದ ಇದು ಸತ್ಯವೇ ಇರಬೇಕೆಂದು ಭಾವಿಸಿ ರೇವಣಸಿದ್ಧರಿಂದ ಲಿಂಗವನ್ನು ಪಡೆದ ಶಂಕರಾಚಾರ್ಯರು ಯಾರಿರಬಹುದು ಎಂದು ಸಂಶೋಧನೆಗೆ ತೊಡಗಿ, ಈ ಬಗ್ಗೆ ಒಂದು ಸಿದ್ಧಾಂತಕ್ಕೆ ತಲುಪಿದ್ದಾರೆ. ಇವರ ಸಂಶೋಧನೆಯ ಪ್ರಕಾರ ರೇವಣಸಿದ್ಧರಿಂದ ಚಂದ್ರಮೌಳೀಶ್ವರ ಲಿಂಗ ಪಡೆದ ಶಂಕರಾಚಾರ್ಯರು ಹರಿಹರ ಕವಿಯಿಂದ ಕೀರ್ತಿತರಾದ ಶಂಕರಾಚಾರ್ಯರು, ಈ ಶಂಕರಾಚಾರ್ಯರ ಬಗ್ಗೆ ಲೇಖಕರು, "ಈ ಶಂಕರಾಚಾರ್ಯರು ಭಾಷ್ಯಕಾರರ ಶಂಕರರಷ್ಟು ದೊಡ್ಡವರಲ್ಲವಾದರೂ, ಹಂಪೆಯ ಮಠದ ಆಚಾರ್ಯರಾಗಿದ್ದರು ಎಂಬುದನ್ನು ಹರೀಶ್ವರ ಕವಿ ಇವರನ್ನು ಹೊಗಳಿರುವ ರೀತಿಯಿಂದ ಊಹಿಸಬಹುದು. ಹಂಪೆಯ ತನ್ನ ಗುರು ಪರಂಪರೆಯನ್ನು ಹೇಳುವ ಸಂದರ್ಭದಲ್ಲಿ ಹರೀಶ್ವರ ಈ ಶಂಕರಾಚಾರ್ಯರನ್ನು ಸ್ತೋತ್ರ ಮಾಡಿದ್ದಾನೆ. ಸಂತ ಹರಿಹರ ಅಥವಾ ಹರೀಶ್ವರ ಲಿಂಗದೊಂದಿಗೆ ಯಜ್ಞೋಪವೀತವನ್ನು ಧರಿಸುತ್ತಿದ್ದನು. ಅಲ್ಲದೆ, ರಾಘವಾಂಕ ಚರಿತ್ರೆಯಲ್ಲಿ ಹೇಳಿರುವಂತೆ ತನ್ನ ಅಳಿಯನಾದ ರಾಘವಾಂಕನಿಗೆ ಗಾಯಿತ್ರಿ ಮಂತ್ರೋಪದೇಶ ಮಾಡಿದನು. ಶ್ರೀ ಕಪಟರಾಳ ಕೃಷ್ಣರಾಯರು, ಆ ಕಾಲದಲ್ಲಿ ಶುದ್ಧ ಶೈವ ಎಂದು ಜನಪ್ರಿಯವಾಗಿದ್ದ ಗೋಲಕಿ ಮಠದ ಸಂಪ್ರದಾಯಕ್ಕೆ ಸೇರಿದ ಆರಾಧ್ಯ ಬ್ರಾಹ್ಮಣವಂಶಕ್ಕೆ ಹರಿಹರ ಸೇರಿದವನು ಎಂದು ನ್ಯಾಯವಾಗಿಯೇ ತೋರಿಸಿಕೊಟ್ಟಿದ್ದಾರೆ. ಕ್ರಿಯಾಶಕ್ತಿ ವಿದ್ಯಾರಣ್ಯರು ಆತನ ಶಿಷ್ಯ ಮಾಧವಾಚಾರ್ಯರು ಇದೇ ಸಂಪ್ರದಾಯಕ್ಕೆ ಸೇರಿದವರು. ಮೇಲೆ ಹೇಳಿದ ಶಂಕರಾಚಾರ್ಯರು ಸಂತ ಹರಿಹರನ ಸಂಪ್ರದಾಯಕ್ಕೆ ಸೇರಿದವನಿರಬೇಕೆನ್ನುದು ಸ್ಪಷ್ಟ; ಆದುದರಿಂದ ಅವರು ತಮ್ಮ ಸಮಕಾಲೀನರಾದ ರೇವಣಸಿದ್ಧ ಮಹಾಯೋಗಿಗಳಿಂದ ಲಿಂಗವನ್ನು ಸ್ವೀಕರಿಸಿದರೆಂದು ಹೇಳುವುದರಲ್ಲಿ ಏನೂ ಆಶ್ಚರ್ಯವಿಲ್ಲ....... ಹಂಪೆ ಮಠದ ಶಂಕರಾಚಾರ್ಯರಿಗೆ ಕೊಡಲ್ಪಟ್ಟ ಲಿಂಗ ಗುರುವಿನಿಂದ ಗುರುವಿಗೆ ಕೊಡಲ್ಪಟ್ಟು, ಹಾಗೆ ವಿದ್ಯಾರಣ್ಯ-ಕ್ರಿಯಾಶಕ್ತಿಗೆ ಪ್ರಾಪ್ತವಾಗಿ. ಆತ ಶೃಂಗೇರಿಯ ಮಠದ ವಿದ್ಯಾರಣ್ಯಗುರು ಎಂಬ ಅಭಿಧೇಯದಿಂದ ಜಗದ್ಗುರುವಾಗಿ ಸ್ಥಾಪಿಸಲ್ಪಟ್ಟಾಗ ಅವರೊಂದಿಗೆ ಆ ಲಿಂಗವೂ ಶೃಂಗೇರಿ ಮಠಕ್ಕೆ ಬಂತು. ಇದು ಶೃಂಗೇರಿ ಮಠದ ಗುರುಗಳಿಗೆ ಚಂದ್ರಮೌಳೀಶ್ವರ ಲಿಂಗ ಹೇಗೆ ಬಂದಿತು ಎಂಬುದನ್ನು ಮತ್ತು ಆ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಠ ರೇವಣಸಿದ್ಧ ಸಂಪ್ರದಾಯಕ್ಕೆ ಸೇರಿದ್ದು ಎಂಬುದನ್ನು ಸ್ಪಷ್ಟಪಡಿಸುತ್ತದೆ" ಎಂದು ಲೇಖಕರು ತಮ್ಮ ವಾದ ಕೋಟೆಯನ್ನು ಹೂಡಿದ್ದಾರೆ. ಮೇಲು ನೋಟಕ್ಕೆ, ತೋರಿಕೆಗೆ ಬಹು ತರ್ಕವಾಗಿ ಕಾಣುವ ಈ ವಾದ ಕೋಟೆ ಎಷ್ಟು ಸುಭದ್ರ ಎಂದು ನೋಡೋಣ. ಹರಿಹರ ಕವಿಗೆ ಶಂಕರಾಚಾರ್ಯ ಎಂಬೊಬ್ಬ ಗುರುವನ್ನು ತನ್ನ "ಗಿರಿಜಾ ಕಲ್ಯಾಣ" ಕಾವ್ಯದಲ್ಲಿ ಸ್ತುತಿಸಿರುವುದು, ನಿಜ. ಆದರೆ ಈ ಶಂಕರಾಚಾರ್ಯರು ಹಂಪೆಯ ವಿರೂಪಾಕ್ಷ ಮಠದ ಪೀಠಾಧಿಪತಿ ಗಳಾಗಿದ್ದರು ಎನ್ನುವ ವಿಷಯ, ಹರಿಹರನ ಕಾವ್ಯಗಳಲ್ಲಿ ಎಲ್ಲೂ ಬರುವುದಿಲ್ಲ. ತನ್ನ ಗುರು ಒಬ್ಬ ಮಠಾಧಿಪತಿಯಾಗಿದ್ದರೆ, ಆತ ಗೋಲಕಿ ಮಠಕ್ಕೆ ಸೇರಿದವನಾಗಿದ್ದರೆ, ಹರಿಹರನು ಆ ವಿಷಯವನ್ನು ತನ್ನ ಕಾವ್ಯಗಳಲ್ಲಿ ಪ್ರಸ್ತಾಪಿಸುತ್ತಿರಲಿಲ್ಲವೆ ? ನಾನು ನೋಡಿರುವ ಹರಿಹರನ ಯಾವ ಕೃತಿಗಳಲ್ಲೂ ಅಂತಹ ಪ್ರಸ್ತಾಪವಿಲ್ಲ. ನಾನು ನೋಡದೆ, ಲೇಖಕರೊಬ್ಬರೇ ನೋಡಿರ ಬಹುದಾದ ಹರಿಹರಕೃತ ಕಾವ್ಯಗಳಲ್ಲಿ ಅಂತಹ ಉಲ್ಲೇಖವಿದ್ದಲ್ಲಿ, ಅವರು ನೇರವಾಗಿ ಉದಹರಿಸಬಹುದಾತ್ತು. ಹಾಗೇಕೆ ಮಾಡಿಲ್ಲ ? ಒಂದು ವೇಳೆ ತನ್ನ ಗುರು ಒಬ್ಬ ಮಠಾಧಿಪತಿಯಾಗಿದ್ದ ಎನ್ನುವ ವಿಷಯ ಹರಿಹರನ ದೃಷ್ಟಿ ಯಲ್ಲಿ ಬಹುಗೌಣವೆಂದು ಕಂಡು ಬಂದು ಅದನ್ನು ಪ್ರಸ್ತಾಪಿಸದೇ ಬಿಟ್ಟಿದ್ದರೂ, ಆ ಗುರುವಿಗೆ ರೇವಣಸಿದ್ಧರು ಚಂದ್ರಮೌಳೀಶ್ವರ ಲಿಂಗವನ್ನು ಕೊಟ್ಟ ವಿಷಯ ವನ್ನು ಏಕೆ ಹೇಳಿಲ್ಲ ? ಹರಿಹರನು ರೇವಣಸಿದ್ಧಯೋಗಿಗಳ ಪರಮಭಕ್ತ. ಅವರ ಬಗ್ಗೆ ಪ್ರತ್ಯೇಕವಾಗಿ ಒಂದು ರಗಳೆಯ ಕಾವ್ಯವನ್ನೇ ರಚಿಸಿದ್ದಾನೆ. ಉಳಿದ ಕೃತಿಗಳಲ್ಲಿರಲಿ, ರೇವಣಸಿದ್ಧಯೋಗಿ ರಗಳೆಯಲ್ಲಾದರೂ ಈ ವಿಷಯ ಹೇಳಬೇಕಾಗಿತ್ತಲ್ಲ.[೩೯] ಏಕೆ ಹೇಳಿಲ್ಲ ? ಈ ದಿಸೆಯಲ್ಲಿ ಲೇಖಕರ ತರ್ಕ ದೃಷ್ಟಿ ಹರಿದಿಲ್ಲ. ಪ್ರಾಯಶಃ ಅಲ್ಲೆಲ್ಲೂ ಇವರ ವಾದಕ್ಕೆ ಆಧಾರವಿಲ್ಲದಿರುವುದೇ

---

೩೯. ಹರಿಹರ ಕವಿಯ ರೇವಣಸಿದ್ದೇಶ್ವರ ರಗಳೆಯ ಚಾರಿತ್ರಿಕ ವ್ಯಕ್ತಿಗಳ ಬಗ್ಗೆ ನೋಡಿ.—"ಕರ್ನಾಟಕ ಸಂಸ್ಕೃತಿಯ ಸಂಶೋಧನೆ"—ಕಪಟರಾಳ ಕೃಷ್ಣ ರಾಯರು--ಪು. 14-45-"ಹರಿಹರನು ನಿರೂಪಿಸಿದ ರೇವಣ ಸಿದ್ಧೇಶ್ವರನ ಸಮಕಾಲೀನರು".

Sri Vidyabharathi Book Centre, Sringeri

CC-O. In Public Domain. Digitized by eGangotri

ಇದಕ್ಕೆ ಕಾರಣವಿರಬೇಕು. ಹರಿಹರನ ಮಾತು ಹೋಗಲಿ, ಈ ಲೇಖಕರೇ ಪರಮ ಪ್ರಮಾಣವೆಂದು ಭಾವಿಸುವ 'ವಿದ್ಯಾರಣ್ಯ ಕಾಲಜ್ಞಾನ, ಶಿವತತ್ತ್ವ ರತ್ನಾಕರ, ಗುರುವಂಶ ಕಾವ್ಯ ಇವುಗಳಲ್ಲಿ ರೇವಣಸಿದ್ಧರಿಂದ ಲಿಂಗವನ್ನು ಪಡೆದಾತ ಹಂಪೆಯ ವಿರೂಪಾಕ್ಷ ಮಠದ ಪೀಠಾಧಿಪರಾಗಿದ್ದ ಶಂಕರಾಚಾರ್ಯರು ಎನ್ನುವ ಮಾತು ಏಕೆ ಹೇಳಲ್ಪಟ್ಟಿಲ್ಲ ? ಈ ಬಗ್ಗೆ ವಿಜಯನಗರ, ಶೃಂಗೇರಿ, ವಿದ್ಯಾರಣ್ಯರ ಬಗ್ಗೆ ಐತಿಹಾಸಿಕವಾಗಿ ಪ್ರಾಮಾಣಿಕವಲ್ಲದ ಘಟನೆಗಳನ್ನು ಆ ಕಾಲದಲ್ಲಿ ಪ್ರಚಲಿತವಾಗಿದ್ದ ಕಿಂವದಂತಿಗಳನ್ನು ಉಲ್ಲೇಖಿಸುವ ಈ ಗ್ರಂಥಗಳು ಈ ಪ್ರಮುಖ ವಿಚಾರದಲ್ಲಿ ಏಕೆ ಮೌನವಾಗಿವೆ ? ಅಷ್ಟೇ ಅಲ್ಲ, ಸ್ವತಃ ವೀರ ಶೈವನಾಗಿದ್ದ ಬಸವ ಭೂಪಾಲ ಈ ವಿಷಯವನ್ನು ಮತ್ತು ಕ್ರಿಯಾಶಕ್ತಿ–ವಿದ್ಯಾರಣ್ಯರೆಂಬ ನಾಮಪರಿವರ್ತನೆಯೊಂದಿಗೆ ಪೀಠಾಧಿಪತಿಯಾದದ್ದನ್ನೂ ಏಕೆ ಹೇಳಿಲ್ಲ ? ಕೇವಲ ಸಮಕಾಲೀನ ಸ್ಥಿತಿಯನ್ನಷ್ಟೇ ಅಲ್ಲ, ಭೂತಭವಿಷ್ಯತ್ ಕಾಲಗಳಲ್ಲಿನ ಎಲ್ಲಾ ವಿಷಯಗಳನ್ನೂ ನಿರೂಪಿಸುವ 'ವಿದ್ಯಾರಣ್ಯ ಕಾಲಜ್ಞಾನ' ಈ ವಿಷಯದಲ್ಲಿ ಬಾಯಿ ಹೊಲಿದುಕೊಂಡಿರುವುದೇಕೆ ? ವಿದ್ಯಾರಣ್ಯ ಕಾಲಜ್ಞಾನದ ಕವಿಗೆ ರೇವಣರ ಪರಿಚಯವಿತ್ತು. ಆತನ ಕೃತಿಯಲ್ಲಿ ರೇವಣ ಸಿದ್ಧರು ಸ್ವಪ್ನದಲ್ಲಿ ಹರಿಹರ ಬುಕ್ಕರಿಗೆ ಲಿಂಗಗಳನ್ನು ಕೊಟ್ಟರು ಎಂದು ಹೇಳಿದ್ದಾನೆ. ಶಂಕರಾಚಾರ್ಯರಿಗೆ ಮತ್ತು ವಿದ್ಯಾರಣ್ಯರಿಗೆ ಏಕೆ ಕೊಡಲಿಲ್ಲ ? ಹರಿಹರ ಬುಕ್ಕರಿಗೆ ಕೊಟ್ಟ ಲಿಂಗಗಳು ಏನಾದುವು ? ಆ ಲಿಂಗಗಳಲ್ಲಿ ಯಾವುದಾದರೂ ತಪ್ಪಿಸಿಕೊಂಡು ಶೃಂಗೇರಿಗೆ ಬಂದುವೆ ? ಈಗ ಅವು ಎಲ್ಲಿವೆ ? ಇದಾವ ಪ್ರಶ್ನೆಗಳನ್ನೂ ಚಿಂತಿಸುವ ತೊಂದರೆಯನ್ನೇ ಲೇಖಕರು ತೆಗೆದುಕೊಂಡಂತಿಲ್ಲ. ಅದಕ್ಕೆ ಪ್ರತಿಯಾಗಿ ಕರ್ಣಾಕರ್ಣಿಕೆಯನ್ನು ಉಲ್ಲೇಖಿಸುವ ಕೃತಿಗಳನ್ನು ಚಾರಿತ್ರಿಕ ಪ್ರಮಾಣವೆಂದು ಉದ್ಘೋಷಿಸುತ್ತಾರೆ. ಇದು ಇವರ ಚಾರಿತ್ರಿಕ ಸತ್ಯನಿಷ್ಠೆಗೆ ಸಾಕ್ಷಿಯೆ ? ಇವೆಲ್ಲರಿಂದ ಅವರ ವಾದ ನಿರಾಧಾರವಾದದ್ದೆಂದು ಸಿದ್ಧವಾಗುತ್ತದೆ.

ಇನ್ನು 'ಗುರುವಂಶಕಾವ್ಯ'ದಲ್ಲಿ ಬರುವ ಈ ಬಗ್ಗೆಯ ಉಲ್ಲೇಖ; 'ಗುರುವಂಶಕಾವ್ಯ' ಮೂಲದಲ್ಲಿ ಚಂದ್ರಮೌಳೀಶ್ವರ ಲಿಂಗ "ಸುಸಿದ್ಧದತ್ತಂ" ಎಂದು ಹೇಳಿದೆ. ಇದರ ವ್ಯಾಖ್ಯಾನದಲ್ಲಿ 'ಸಿದ್ಧ' ಎಂದರೆ 'ರೇವಣಸಿದ್ಧ' ಎಂದು

Sri Vidyabharathi Book Centre, Sringeri

CC-O. In Public Domain. Digitized by eGangotri

ಹೇಳಲಾಗಿದೆ. ಆದರೆ 'ಗುರುವಂಶಕಾವ್ಯ' ಹೇಳುವ ರೇವಣಸಿದ್ಧರು ಪಂಚಾಚಾರ್ಯರಲ್ಲೊಬ್ಬರಾದ ರೇವಣಸಿದ್ಧರೇ ಎಂದು ಖಚಿತವಾಗಿ ಹೇಳಿಲ್ಲ. ಇಲ್ಲಿ ಬರುವ ರೇವಣಸಿದ್ಧ ಎನ್ನುವ ಶಬ್ದಕ್ಕೆ ಅರ್ಥಾಂತರ ಉಂಟೆಂದು ಪಂಡಿತರು ಹೇಳುತ್ತಾರೆ. ರೇವಣ ಎನ್ನುವುದು ಒಬ್ಬ ವ್ಯಕ್ತಿಯನ್ನಾಗಲೀ ಅಥವಾ ಶೈವಾಚಾರ್ಯರನ್ನಾಗಲೀ ನಿರ್ದೇಶಿಸುವುದಿಲ್ಲವೆಂದೂ, ರೇವಣ ಎಂದರೆ, 'ರೇವಾ' ಎಂದರೆ ನರ್ಮದಾತೀರದಲ್ಲಿ ವಾಸವಾಗಿದ್ದ ಸಿದ್ಧನೆಂದೂ ಅರ್ಥವಾಗುತ್ತದೆ ಎಂದು ; ರೇವಣ ಎನ್ನುವ ಪದಕ್ಕೆ ಈ ನಿಷ್ಪತ್ತಿ ಪಾಣಿನೀಯ ವ್ಯಾಕರಣ ಸೂತ್ರಕ್ಕೆ ಸಮ್ಮತವಾಗಿದೆಯೆಂದೂ ಹೇಳುತ್ತಾರೆ. ಈ "ಸಿದ್ಧದತ್ತ"ವಾದ ಚಂದ್ರಮೌಳೀಶ್ವರ ಲಿಂಗದ ಬಗ್ಗೆ ಹೇಳುವ ಶ್ಲೋಕದ ಪೂರ್ವಾನುಕ್ರಮಣಿಯಲ್ಲಿ, ನರ್ಮದಾತೀರವಾಸಿಯಾಗಿದ್ದ ಗೋವಿಂದ ಭಗವತ್ಪಾದರ ಉಲ್ಲೇಖ ಬರುವುದು ಈ ವಿಶೇಷಣೆಗೆ ಪುಷ್ಟಿಯನ್ನು ಕೊಡುವ ಅಂಶ, ಈ ವಾದವನ್ನು ಲೇಖಕರು ಏಕೆ ಗಮನಿಸಿಲ್ಲ ? 'ಗುರುವಂಶಕಾವ್ಯ' ವಾಗಲಿ, ಅದರ ವ್ಯಾಖ್ಯಾನವಾಗಲಿ, ಅಲ್ಲಿ ಬರುವ ರೇವಣಸಿದ್ಧ ಪಂಚಾಚಾರ್ಯರಲ್ಲಿ ಒಬ್ಬ ಎಂದು ಸ್ಪಷ್ಟವಾಗಿ ಹೇಳದಿರುವದರಿಂದ, ಈ ಕಾವ್ಯ ಶೃಂಗೇರಿಯ ಗುರುಪರಂಪರೆಯನ್ನು ಆದರ ಕರ್ತೃ ತಿಳಿದಮಟ್ಟಿಗೆ, ಕೇಳಿದಮಟ್ಟಿಗೆ ಪ್ರಾಮಾಣಿಕವಾಗಿ ಹೇಳುವ ಕೃತಿಯಾದುದರಿಂದಲೂ, ಅದನ್ನೇ ಆಧಾರವಾಗಿ ಗಣಿಸುವ ಲೇಖಕರು ಈ ವ್ಯಾಖ್ಯಾನವನ್ನು ನೋಡಬೇಕಿತ್ತು. ಎರಡನ್ನೂ ಗಮನಿಸಿ, ತೂಕ ಮಾಡಿ ಯಾವುದು ಸರಿ, ಯಾವುದು ಅಲ್ಲ, ಯಾವುದು ತರ್ಕಸಂಗತ, ಯಾವುದು ಅಸಂಗತ ಎಂಬ ನಿರ್ಧಾರಕ್ಕೆ ಬರಬೇಕು. ಅಂತಹ ಪ್ರಯತ್ನವೇನೂ ಲೇಖಕರು ಮಾಡಿದಂತಿಲ್ಲ. ಆದೆಲ್ಲವನ್ನೂ ಬಿಟ್ಟು ತಮ್ಮ ಸಿದ್ಧಾಂತಕ್ಕೆ ಪೋಷಕವಾಗುವ ಹುಲ್ಲಿನ ಎಸಳು ಎಲ್ಲಾದರೂ ಸಿಕ್ಕುವುದೇನೋ ಜೋತು ಬೀಳುವುದಕ್ಕೆ ಎಂದು ಹುಡುಕಿಕೊಂಡು ಹೊರಟು 'ಶಿವತತ್ವ ರತ್ನಾಕರ'ದ ಮದ್ರಾಸ್ ಆವೃತ್ತಿಯನ್ನು ಸಂಪಾದಿಸಿದ ಹೆಚ್. ಕೃಷ್ಣಶಾಸ್ತ್ರಿಗಳು ಆ ಗ್ರಂಥಕ್ಕೆ ಬರೆದ ಮುನ್ನುಡಿಯನ್ನು ತಮ್ಮ ವಾದಕ್ಕೆ ಆಧಾರವೆಂದು ಉಪಹರಿಸಿದ್ದಾರೆ. ತಮ್ಮ ಮುನ್ನುಡಿಯಲ್ಲಿ ಕೃಷ್ಣಶಾಸ್ತ್ರಿಗಳು ಹೀಗೆಂದಿದ್ದಾರೆ—"ಈ ಗ್ರಂಥದ 12ನೇ ತರಂಗದ 4ನೇ ಕಲ್ಲೋಲದಲ್ಲಿ ವಿದ್ಯಾರಣ್ಯರ ವಿಷಯವನ್ನು ಹೇಳುವಾಗ ನಮ್ಮ ವಿದ್ಯಾರಣ್ಯರಿಗೆ ಉಪದೇಶ ನೀಡಿದ ಶೃಂಗೇರಿಯ ಆಚಾರ್ಯರು ರೇವಣಸಿದ್ಧ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂಪ್ರದಾಯವನ್ನು ಆಚರಿಸುತ್ತಿದ್ದರು. ಎಂದು ಹೇಳಿರುವ ಆಸಕ್ತಿಕರವಾದ ವಿಷಯದತ್ತ ವಾಚಕರ ಗಮನವನ್ನು ಸೆಳೆಯ ಬಯಸುತ್ತೇನೆ. ಶೃಂಗೇರೀ ಮಠದ ಆಚಾರ್ಯರಿಂದ ಇಂದಿಗೂ ಪ್ರಧಾನ ದೇವತೆಯೆಂದು ಪೂಜಿಸಲ್ಪಡುತ್ತಿರುವ ಚಂದ್ರಮೌಳೀಶ್ವರ ಲಿಂಗ ಅವರಿಗೆ ಅವರ ಪ್ರತ್ಯಕ್ಷಗುರುಗಳಿಂದ ಕೊಡಲ್ಪಟ್ಟಿತ್ತು. ರೇವಣಸಿದ್ಧರು ತಮ್ಮ ಪ್ರಾಚೀನ ಆಚಾರ್ಯರುಗಳಲ್ಲಿ ಒಬ್ಬರು ಎಂದು ವೀರಶೈವರು ಭಾವಿಸುವ ಖ್ಯಾತ ಶೈವಾಚಾರ್ಯರು ಎಂಬುದು ನಮಗೆ ತಿಳಿದಿದೆ. ಸ್ವಯಂ ವೀರಶೈವ ಧರ್ಮಾನುಯಾಯಿಗಳಾಗಿದ್ದ ಮತ್ತು ಶೃಂಗೇರಿ ಶಂಕರಾಚಾರ್ಯ ಮಠಕ್ಕೆ ನಿಷ್ಠ ಅನುಯಾಯಿಗಳಾಗಿದ್ದ ಕೆಳದಿಯ ಅರಸುಗಳು ಹಾಗಿದ್ದುದಕ್ಕೆ ಪ್ರಾಯಶಃ ಶೃಂಗೇರಿಯ ಶಂಕರಾಚಾರ್ಯರುಗಳು ರೇವಣಸಿದ್ಧ ಸಂಪ್ರದಾಯದ ಅನುಯಾಯಿಗಳಾಗಿದ್ದುದೆ ಕಾರಣವಿರಬಹುದು. ಶಿವ ಮತ್ತು ವಿಷ್ಣುಗಳ ನಡುವೆ ಯಾವ ತಾರತಮ್ಯವನ್ನೂ ಮನ್ನಿಸದ ಶ್ರೀ ಶಂಕರಾಚಾರ್ಯರಿಂದ ಸ್ಥಾಪಿತವಾದ ಶೃಂಗೇರಿಯ ಅದ್ವೈತಮಠ ಶಿವಪೂಜಾ ಪಕ್ಷಪಾತಿಯಾಗಿರುವುದಕ್ಕೂ, ಶೈವಧರ್ಮಕ್ಕೆ ಹೆಚ್ಚು ಒಲಿದಿರುವುದಕ್ಕೂ ಇದೇ ಕಾರಣವಿರಬಹುದು. "ಕೃಷ್ಣಶಾಸ್ತ್ರಿಗಳು ಇತಿಹಾಸ ತಜ್ಞರು, ಸಂಸ್ಕೃತ ಭಾಷಾಕೋವಿದರು ಎಂಬ ಬಗ್ಗೆ ನನಗೆ ಯಾವ ಅನುಮಾನವೂ ಇಲ್ಲ. ಅವರ ಬಗ್ಗೆ ಗೌರವವೂ ಇದೆ. ಆದರೆ ಅಂತಹ ಪಂಡಿತವರೇಣ್ಯರು 'ಶಿವತತ್ವ ರತ್ನಾಕರ' ದಲ್ಲಿ ಬಂದಿರುವ ಈ ಮಾತು ಎಷ್ಟರಮಟ್ಟಿಗೆ ಐತಿಹಾಸಿಕವಾಗಿ ಪ್ರಾಮಾಣಿಕ ಎಂಬುದನ್ನೂ ಪರಾಮರ್ಶೆ ಮಾಡದೆ, ಲೇಖಕರ ಹಾಗೇ ಅದನ್ನು ಸತ್ಯಸ್ಯ ಸತ್ಯ ಎಂದು ನಂಬಿ, ಆ ನಿರಾಧಾರವಾದ ನಂಬಿಕೆಯ ಸೂತ್ರದ ಮೇಲೆ ಶೃಂಗೇರಿಯ ಪೀಠದ ಬಗ್ಗೆ, ಸಂಪ್ರದಾಯದ ಬಗೆ ತೀರ್ಮಾನ ಕೊಟ್ಟಿರುವುದು, ಅಷ್ಟೇ ಅಲ್ಲ, ಕೆಳದಿಯ ಮನೆತನದ ದೈವಭಕ್ತಿಗೆ ಸ್ವಧರ್ಮದ ದುರಭಿಮಾನದ ಕಳಂಕವನ್ನು ತೊಡೆದಿರುವುದೂ, ಅವರ ಪಾಂಡಿತ್ಯಕ್ಕೆ ಭೂಷಣವಾದಂತಹ ಮಾತಲ್ಲ. ಕೆಳದಿಯ ಅರಸರು ಶೃಂಗೇರಿಯ ಮಠವೊಂದಕ್ಕೇ ಅಥವ ಅಂತಹ ದೇವಾಲಯಗಳಿಗೆ ಮಾತ್ರವೇ ದಾನದತ್ತಿಯನ್ನು ನೀಡಿದ್ದಿದ್ದರೆ, ಅಪರೋಕ್ಷವಾಗಿ ಅವರಿಗೆ ಆರೋಪಿಸಲ್ಪಟ್ಟಿರುವ ಸ್ವಮತಾಂಧತೆಯನ್ನು ಒಪ್ಪಬಹುದಾಗಿತ್ತು. ಕೆಳದಿಯ ಅರಸರು ಆ ವರ್ಗಕ್ಕೆ ಸೇರಿದವರಲ್ಲ; ಎಲ್ಲಾ ದೇವ ಮಂದಿರಗಳಿಗೂ, ಎಲ್ಲ ಸಂಘದ ಧಾರ್ಮಿಕ ಸಂಸ್ಥೆಗಳಿಗೂ ಉದಾರವಾಗಿ

Sri Vidyabharathi Book Centre, Sringeri

CC-O. In Public Domain. Digitized by eGangotri

ದಾನಮಾಡಿ, ಪ್ರಾಚೀನ ಧಾರ್ಮಿಕ ಸಂಸ್ಥೆಗಳನ್ನು ಸಮಾನ ದೃಷ್ಟಿಯಿಂದ ರಕ್ಷಿಸುವ ವಿಜಯ ನಗರದ ದೊರೆಗಳ ಆದರ್ಶ ಪಥದಲ್ಲಿ ನಡೆದ ಹಿರಿಯರು. ಅಂತಹವರ ಧವಳಕೀರ್ತಿಗೆ ಸ್ವಮತಾಂಧತೆಯ ಕಲಂಕಲೇಪ ಮಾಡಿರುವುದು ಖಂಡನೀಯವಾದ ವಿಷಯ. ಯಾವ ಕಾಲಕ್ಕೇ ಆಗಲಿ ಅಂತಹ ವ್ಯಾಖ್ಯಾನ ಅಕ್ಷಮ್ಯ. ಅಂತಹ ಕಾರ್ಯವನ್ನು ಲೇಖಕರೇ ಮಾಡಲಿ, ಕೃಷ್ಣಶಾಸ್ತ್ರಿಗಳೇ ಮಾಡಲಿ, ಯಾರೇ ಮಾಡಿದರೂ, ಇತಿಹಾಸ ವಿರುದ್ಧವಾದ ಅಂತಹ ಹೇಳಿಕೆಗಳನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸಬೇಕಾದದ್ದು ಸತ್ಯ ಪ್ರಿಯರ ಕರ್ತವ್ಯ ಆದರೆ ಇತಿಹಾಸವಾಗಲಿ, ಸತ್ಯವಾಗಲೀ ಗಣ್ಯವಾಗದೆ ತಮ್ಮ ಊಹೆಯನ್ನೇ ಸಿದ್ಧಾಂತವೆಂದು ಹೇಳ ಹೊರಟಿರುವವರಿಗೆ, ಈ ಮಾತು ಅನ್ವಯವಾಗುವುದಿಲ್ಲ ಇವರು 'ಮುರಾರೆ ತೃತೀಯಾ ಪಂಥಃ' ಎಂದು ಹೇಳ ಹೊರಟಿರುವ ಮಹನೀಯರು.

ತಮ್ಮ ಸಿದ್ಧಾಂತಕ್ಕೆ ಪೋಷಕವಾಗಿ ಲೇಖಕರು ಕೊಟ್ಟಿರುವ ಆಧಾರಗಳಲ್ಲಿ ಇನ್ನು ಉಳಿದಿರುವುದು ಕೇವಲ ಎರಡು ಮಾತ್ರ. 'ಆದಿತ್ಯ ಪುರಾಣ' ಮತ್ತು 'ಪುರುಷಾರ್ಥ ಪ್ರಬೋಧ', ಈ ಗ್ರಂಥಗಳನ್ನು ಉಲ್ಲೇಖಿಸುತ್ತ, ಅದಕ್ಕೆ ಪ್ರಸ್ತಾವನೆಯಾಗಿ ಲೇಖಕರು ಶೃಂಗೇರಿಯ ಮಠದಲ್ಲಿ ಕ್ರಿಯಾಶಕ್ತಿ-ವಿದ್ಯಾರಣ್ಯರಿಂದ ಸ್ಥಾಪಿಸಲ್ಪಟ್ಟ ಧಾರ್ಮಿಕ ಮತ್ತು ದಾರ್ಶನಿಕ ಸಂಪ್ರದಾಯ ಅವರ ಕಾಲಾನಂತರ ಕೆಲಕಾಲದವರೆಗೂ, ಕೊನೆಯಪಕ್ಷ ಶೃಂಗೇರಿಯ ಮಠದ ರಾಮಚಂದ್ರಗುರುವಿನವರೆಗೂ ಆಚರಣೆಯಲ್ಲಿತ್ತು ಎಂಬುದಾಗಿ ಹೇಳಿ, 'ಈ ಊಹೆಗೆ ಆಧಾರವಾಗಿ "ಆದಿತ್ಯಪುರಾಣ"40 ವನ್ನು ಉದಾಹರಿಸಿ, ಈ ಗ್ರಂಥ ಕರ್ತೃ ಶೃಂಗೇರಿಯ ಗುರುವಿನಿಂದ ತ್ರಿವಿಧ ದೀಕ್ಷೆಯನ್ನು ಪಡೆಯುತ್ತಾನೆ ಎಂದು ಹೇಳಿ, ತನ್ನ ಶಿಷ್ಯನಿಗೆ ಈ ದೀಕ್ಷೆಯನ್ನು ನೀಡಿದ ರಾಮಚಂದ್ರ ಗುರುಸ್ವಯಂ ಇಷ್ಟ, ಪ್ರಾಣ, ಭಾವಲಿಂಗ ದೀಕ್ಷೆಯನ್ನು ಪಡೆದಿದಿರಲೇ ಬೇಕು. ಈ

40. 'ಆದಿತ್ಯ ಪುರಾಣ' - ಸಂ. ಕೆ. ವೆಂಕಟರಾಯಾಚಾರ್ಯ, ಸುರತ್ಕಲ್-ಪ್ರ, [illegible] (1967).

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಮಚಂದ್ರಗುರು ಇಮ್ಮಡಿ ಹರಿಹರನ ಮರಣದ ಬಳಿಕ ಶೃಂಗೇರಿಯ ಪೀಠದ ಗುರುವಾಗಿದ್ದರೆಂದು 1407ರ ಶೃಂಗೇರಿ 31ರ ಶಾಸನದಿಂದ ತಿಳಿದುಬರುತ್ತದೆ" ಎಂದು ಹೇಳಿದ್ದಾರೆ. ಸುರತ್ಕಲ್ಲಿನ ಕೆ. ವೆಂಕಟರಾಯಾಚಾರ್ಯರಿಂದ ಸಂಪಾದಿತವಾಗಿ ಪ್ರಕಟಿಸಲ್ಪಟ್ಟಿರುವ 'ಆದಿತ್ಯ ಪುರಾಣ' ಗ್ರಂಥವನ್ನು ನಾನು ಕೂಲಂಕಷವಾಗಿ ಓದಿ ನೋಡಿದ್ದೇನೆ. ಈ ಕಾವ್ಯದಿಂದ ಕವಿಯ ಹೆಸರು, ಕುಲ, ಗೋತ್ರ, ಸ್ಥಳ, ಕಾಲ ಇವುಗಳ ಬಗ್ಗೆ ಯಾವೊಂದು ವಿಷಯವೂ ಖಚಿತವಾಗಿ ದೊರೆಯುವುದಿಲ್ಲ. ಕನ್ನಡ ಕವಿ ಚರಿತೆಕಾರರು ಈ ಕವಿಯ ಕಾಲವನ್ನು, ಅದರಲ್ಲಿ ಬರುವ ಶೃಂಗೇರಿಯ ರಾಮಚಂದ್ರಗುರುವಿನ ಹೆಸರಿನ ಆಧಾರದ ಮೇಲೆ, 1508-60 ಎಂದು ಹೇಳಿದ್ದಾರೆ. ಗ್ರಂಥ ಸಂಪಾದಕರಾದ ಕೆ. ವೆಂಕಟರಾಯಾಚಾರ್ಯರು ಯಾವ ಆಧಾರವನ್ನೂ ಕೊಡದೆ ಕವಿಯಕಾಲ 1265-70 ಇರಬೇಕು. ಎಂದು ಹೇಳಿದ್ದಾರೆ. ಲೇಖಕರು ಶೃಂ. 31ರ ಶಾಸನದ ಆಧಾರದ ಮೇಲೆ 1407 ಇರಬೇಕೆಂದು ನಿರ್ಧರಿಸಿದ್ದಾರೆ. ಹೀಗೆ ಈ ಕವಿಯ ಕಾಲದ ನಿರ್ದೇಶನ ಎರಡು ಶತಮಾನಗಳ ಅಂತರದಲ್ಲಿ ತೂಗುಯ್ಯಾಲೆಯಾಡುತ್ತಿದೆ. ಆದರೆ ಈ ಕವಿಯ ಸ್ಥೂಲಕಾಲ ನಿರ್ದೇಶನಕ್ಕೆ ಆ ಕೃತಿಯಲ್ಲಿಯೇ ಇರುವ ಒಂದು ಆಂತರಿಕ ಪ್ರಮಾಣ ಇವರ ಯಾರ ಕಣ್ಣಿಗೂ ಬಿದ್ದಂತಿಲ್ಲ. ಈ ಕವಿ ತನಗೆ ಆದರ್ಶರಾದ ಪೂರ್ವಕವಿಗಳನ್ನು ಸ್ತುತಿಸುತ್ತ, ತನ್ನ ಕಾವ್ಯದ ಸಂಧಿ ೧, ಪದ್ಯ ೩೧ರಲ್ಲಿ, "ಈಶಕವಿಯುದ್ಭಟನು ಬಾಣ। ವ್ಯಾಸ ಬಿಲುಹಣ ಶುಕ್ರಕಾಳೀ। ದಾಸಕುವರ ವ್ಯಾಸ್ಯ ಪೌರಾತನ ಕವೀಶ್ವರರು। ಬಾಸುರದ ನೂತನ ಕವೀಶರು। ಲೇಸೆನಿಸಿ ನೀವ್ ಸವಿದ ಶಬ್ದಮ। ಹಾಸುಧೆಯೊಳೊಂದಿನಿತ ನೀವುದು ತನಗೆ ಕರುಣದಲಿ।" ಎಂದು ಬರೆದುಕೊಂಡಿದ್ದಾನೆ.

ಮೇಲೆ ಉದಹರಿಸಿರುವ ಪದ್ಯದಿಂದ ಕವಿ ಕುಮಾರವ್ಯಾಸನನ್ನು ಸ್ತುತಿಸಿರುವುದು ಸ್ಪಷ್ಟವಾಗಿದೆ. ಆದುದರಿಂದ ಆದಿತ್ಯ ಪುರಾಣದ ಕವಿ ಕುಮಾರವ್ಯಾಸನಿಗಿಂತಲೂ ಈಚಿನವನು ಎಂದು ಖಚಿತವಾಗಿ ಹೇಳಬಹುದು. ಅಲ್ಲದೆ ಕವಿಕುಮಾರವ್ಯಾಸನು ಪುರಾಣ ಕವಿ ಎಂದು ಹೇಳುವುದರಿಂದ, ಈತನಿಗಿಂತ ಸಾಕಷ್ಟು ಕಾಲ ಹಿಂದೆಯೇ ಕುಮಾರವ್ಯಾಸನು ಇದ್ದಿರಬೇಕು ಎನ್ನುವುದು ಸ್ಪಷ್ಟವಾಗಿದೆ. ಈ ಕವಿ ಕುಮಾರ ವ್ಯಾಸನಿಂದ ವಿಶೇಷ ಪ್ರಭಾವಿತನಾಗಿದ್ದ

Sri Vidyabharathi Book Centre, Sringeri

CC-O. In Public Domain. Digitized by eGangotri

ಬೇಕು ಎನ್ನುವುದಕ್ಕೆ ಮೇಲಿನ ಪದ್ಯ ಒಂದೇ ಅಲ್ಲದೆ ಹಲವಾರು ಪದ್ಯಗಳಲ್ಲಿ ಕುಮಾರವ್ಯಾಸನ ಅನುಕರಣೆ ಮಾಡಿರುವುದೂ ಸಾಕ್ಷಿಯಾಗಿದೆ. ಕುಮಾರ ವ್ಯಾಸ ಭಾರತದಂತೆ ಈ ಕೃತಿ ಭಾಮಿನಿ ಷಟ್ಪದಿಯಲ್ಲಿ ರಚಿತವಾಗಿದೆ. 'ಆದಿತ್ಯ ಪುರಾಣ' ದ ಕವಿಯ ಮೇಲೆಷ್ಟು ಇಷ್ಟು ಪ್ರಭಾವ ಬೀರಿದ ಕುಮಾರವ್ಯಾಸನ ಕಾಲ ಯಾವುದು ಎಂದು ಇದುವರೆಗೂ ಖಚಿತವಾಗಿ ನಿರ್ಧಾರವಾಗಿಲ್ಲ. ಈ ಬಗ್ಗೆ ಪಂಡಿತರಲ್ಲಿ ಏಕಮತವೂ ಇಲ್ಲ. ಕುಮಾರವ್ಯಾಸನ ಕಾಲ ೧೩ನೇ ಶತಮಾನದಿಂದ ೧೬ನೇ ಶತಮಾನದವರೆಗೂ ತೂಗುಯ್ಯಾಲೆಯಾಡುತ್ತಿದೆ. ಇವೆಲನನ್ನೂ ಗಮನಿಸಿ ರಂ. ಶ್ರೀ. ಮುಗಳಿಯವರು ತಮ್ಮ "ಕನ್ನಡ ಸಾಹಿತ್ಯ ಚರಿತ್ರೆ" ಯಲ್ಲಿ ಕುಮಾರವ್ಯಾಸನ ಕಾಲ ಹೆಚ್ಚುಕಡಿಮೆ 1430 ಎಂದು ಹೇಳಿದ್ದಾರೆ. ಈ ಕಾಲ ನಿರ್ದೇಶನಕ್ಕೆ ಬಹು ಮಂದಿ ವಿಮರ್ಶಕರ ಸಮ್ಮತಿಯಿದೆ. 'ಆದಿತ್ಯ ಪುರಾಣ' ದ ಕವಿ ಕುಮಾರವ್ಯಾಸನನ್ನು ನೂತನ ಕವಿ ಎಂದಾಗಲೀ, ತನಗೆ ಸಮಕಾಲೀನನೆಂದಾಗಲೀ, ತನಗೆ ಅತಿ ಸಮೀಪದ ಕಾಲದವನು ಎಂದಾಗಲೀ ಹೇಳದೆ, 'ಪುರಾತನ' ಎಂದು ಹೇಳಿರುವುದರಿಂದ, ಆತನ ಬಳಿಕ ಏನಿಲ್ಲವೆಂದರೂ 40 ವರ್ಷಗಳಷ್ಟಾದರೂ ಈಚಿನವನಾಗಿರಬೇಕು. ಹೀಗಿರುವಾಗ ಈ ಕವಿಯ ಬಗ್ಗೆ ಕವಿಚರಿತೆಕಾರರು ಕೊಟ್ಟಿರುವ 1508-60ರ ಕಾಲ ನಿರ್ದೇಶನ ಸತ್ಯಕ್ಕೆ ಸಮೀಪವೆಂದು ಹೇಳಬಹುದು. ಆದ್ದರಿಂದ ಈ ಕವಿಗೂ, ರಾಮಚಂದ್ರಗುರುವಿಗೂ ಸಂಬಂಧ ಕಲ್ಪನೆ ಅಯುಕ್ತವಲ್ಲದೆ, ದೋಷಪೂರಿತವಾದುದು ಅಲ್ಲದೆ ಶೃಂಗೇರಿಯ 31ರ ಶಾಸನಲ್ಲಿ ಹೇಳಲ್ಪಟ್ಟಿರುವ ರಾಮಚಂದ್ರಗುರುವಿನ ಬಗ್ಗೆ ಆ ಶಾಸನ "ಶ್ರೀ ಋಷ್ಯಶೃಂಗ ಗಿರಿಯ ಶ್ರೀ ಮಠದಲ್ಲಿ ಸ್ವಸ್ತಿ ಶ್ರೀ ಪರಮಹಂಸ ಪರಿವ್ರಾಜಕಾಚಾರ್ಯರಾದ ರಾಮಚಂದ್ರ ಭಾರತೀ ಶಂಕರ ಭಾರತ್ಯೊಡೆಯರು" ಎಂದು ಹೇಳಿದೆ. ಈ ರಾಮಚಂದ್ರಗುರುಗಳು ವೀರಶೈವ ತ್ರಿವಿಧ ದೀಕ್ಷೆಯನ್ನು ಪಡೆದಿದ್ದರು ಎನ್ನುವುದಕ್ಕೆ ಯಾವ ಆಧಾರವೂ ಇಲ್ಲ. ಕಾಲ ನಿರ್ದೇಶನದಿಂದಲೂ, 'ಆದಿತ್ಯ ಪುರಾಣ' ದ ಕವಿಗೂ ಈ ರಾಮಚಂದ್ರಗುರುವಿಗೂ ಸಂಬಂಧ ಕಲ್ಪಿಸಲು ಸಾಧ್ಯವಿಲ್ಲ.

ಆದ್ದರಿಂದ ಲೇಖಕರಿಗೆ ಏಕೈಕ ಊಹೆ ಶೃಂಗೇರಿಯ ರಾಮಚಂದ್ರ

Sri Vidyabharathi Book Centre, Sringeri

CC-O. In Public Domain. Digitized by eGangotri

ಭಾರತಿ ಗುರು ತನಗೆ ತ್ರಿವಿಧ ದೀಕ್ಷೆಯನ್ನು ಕರುಣಿಸಿರುವುದು ಎಂದು ಹೇಳಿರುವುದು. ಈ ಕವಿ ವೀರಶೈವನಿರಬಹುದು. ಬಸವಾದಿ ಪ್ರಮಥರ ಸ್ಪಷ್ಟವಾದ ಉಲ್ಲೇಖ ಈ ಕೃತಿಯಲ್ಲಿ ಇಲ್ಲದೇ ಇರುವುದರಿಂದ ಈತನು ವೀರಶೈವನೇ ಎಂದು ಹೇಳುವುದೂ ಊಹೆಯ ಮಾತಾಗುತ್ತದೆ. ಅಲ್ಲದೆ ಈ ಕವಿಯ ಮೇಲೆ ಶೃಂಗೇರಿಮಠದ ಪ್ರಭಾವ ಸಾಕಷ್ಟು ಬಿದ್ದಿತ್ತು ಎನ್ನುವುದಕ್ಕೆ ಆತನು ಮಾಡಿರುವ ಶಾರದಾಸ್ತುತಿ ಸಾಕ್ಷಿ. ಅದು "ಪ್ರಪಂಚಸಾರ" ದಲ್ಲಿ ಶ್ರೀ ಶಂಕರರು ಮಾಡಿರುವ ಸ್ತೋತ್ರದ ಅಕ್ಷರಶಃ ಅನುವಾದ. ಇದರಿಂದ ವೀರಶೈವ ಪಂಥಾನುಯಾಯಿ ಆಗಿದ್ದ ಭಕ್ತನೊಬ್ಬ ಶೃಂಗೇರಿಯ ಗುರುಗಳಿಗೆ ಇದ್ದ ಎಂದು ಸಾಧಿತವಾಗುತ್ತದೆ. ಇದೇನೂ ಅಪರಾಧವಲ್ಲ. ಹಿಂದಿನಿಂದ ಇಂದಿನವರೆಗೂ ಶೃಂಗೇರಿಯ ಮಠ ಸಕಲರಿಗೂ ಮುಕ್ತವಾಗಿದೆ. ಸಕಲಮತದವರಿಗೂ ಅಲ್ಲಿ ಪ್ರವೇಶವಿದೆ. ಮತೀಯ ಕಾರಣಗಳಿಗಾಗಿ ಗುರುಗಳು ಯಾರನ್ನೂ ಹೊರಗಿಟ್ಟಿಲ್ಲ. ಶೃಂಗೇರಿಯ ಮಠಕ್ಕೆ ವಿಶಿಷ್ಟವಾದ ಮತ್ತೊಂದು ಮಾತನ್ನು ಹೇಳಬೇಕು. ಈ ಮಾತು ಎಲ್ಲಾ ಅದ್ವೈತ ಪೀಠಗಳಿಗೂ ಅನ್ವಯಿಸುತ್ತದೆ. ಈ ಆಚಾರ್ಯರು ಯಾರಿಗಾದರೂ ಅನುಗ್ರಹಿಸುವಾಗ, ಅವರು ತಮ್ಮ ಮತಕ್ಕೆ ಸೇರಿದವರಾಗಿರಬೇಕು ಎನ್ನುವುದಾಗಲೀ, ಅನ್ಯವರ್ಗದವರನ್ನು ಅನುಗ್ರಹಿಸುವಾಗ ಅವರ ಮತಪರಿವರ್ತನೆ ಮಾಡುತ್ತಿದ್ದರು ಎನ್ನುವುದಕ್ಕಾಗಲೀ ಯಾವ ಸಾಕ್ಷಿಯೂ ಇಲ್ಲ. ಎಲ್ಲರೂ ಅವರವರ ದಾರಿಯಲ್ಲಿ ನಡೆದು ಮುಕ್ತಿದಾರಿಯನ್ನು ಕಂಡುಕೊಳ್ಳಬೇಕೆನ್ನುವುದೇ ಶಂಕರರ ಸಂದೇಶ. ಹಾಗಿರುವಾಗ ವೀರಶೈವ ಕವಿಯೊಬ್ಬ ಶೃಂಗೇರಿಯ ಗುರುಗಳಿಂದ ಮಂತ್ರದೀಕ್ಷೆಪಡೆದ ಎನ್ನುವುದರಿಂದ ಆ ಗುರುವೂ ವೀರಶೈವ ಎಂದು ಸಾಧಿತವಾಗುತ್ತದೆಯೆ ? ಹಾಗಿದ್ದಲ್ಲಿ ಶೃಂಗೇರಿಯ ರಾಮಚಂದ್ರ ಭಾರತಿಗಳು ವೀರಶೈವರೇ ಆಗಿದ್ದಲ್ಲಿ ಆ ಮಾತನ್ನು 'ಆದಿತ್ಯಪುರಾಣ'ದ ಕವಿ ಹೇಳುತ್ತಿದ್ದ. ಹಾಗೆ ಹೇಳಿಲ್ಲ. ಆದುದರಿಂದ ಲೇಖಕರು ಮಾಡಿರುವ ಊಹೆಗೆ ತಾರ್ಕಿಕವಾಗಿಯಾಗಲಿ, ಐತಿಹಾಸಿಕವಾಗಿಯಾಗಲೀ ಯಾವ ಆಧಾರವೂ ಇಲ್ಲ ಅಷ್ಟೇ ಅಲ್ಲ, ಈ ಸಂದರ್ಭದಲ್ಲಿ ಪ್ರಾಸಂಗಿಕವಾಗಿ ಲೇಖಕರು ಶೃಂಗೇರಿಯ ಗುರುಗಳು ಆಗಾಗ ತಮ್ಮ ಸಂಪ್ರದಾಯವನ್ನು ಬದಲಾಯಿಸುತ್ತಿದ್ದರು ಎಂದು ಸೂಚಿಸಿರುವುದಂತೂ ತೀರ ಖಂಡನೀಯವಾದ, ದುರುದ್ದೇಶಪೂರಿತವಾದ

Sri Vidyabharathi Book Centre, Sringeri

CC-O. In Public Domain. Digitized by eGangotri

ದುಷ್ಟಸೂಚನೆ. ಪಂಡಿತರೆನಿಸಿಕೊಂಡಿರುವವರು ಈ ಮಟ್ಟಕ್ಕೆ ಇಳಿಯಬಾರದು. ಶೃಂಗೇರಿಯ ಗುರುಗಳು, ಆದ್ಯ ಪ್ರವರ್ತಕರಾದ ಶಂಕರಾಚಾರ್ಯರ ಕಾಲದಿಂದ ಇಂದಿನವರೆಗೆ ಅಖಂಡವಾಗಿ ಅವಿಚ್ಛಿನ್ನವಾಗಿ ಯಾವ ಐತಿಹಾಸಿಕ ಏರುಪೇರುಗಳಾಗಲೀ, ಮತೀಯ ಆಲ್ಲೋಲ ಕಲ್ಲೋಲಗಳಾಗಲೀ ಅವುಗಳಿಗೆ ತಲೆಬಾಗದೆ, ತಮ್ಮ ಸಂಪ್ರದಾಯವನ್ನು ಅವಿಚ್ಛಿನ್ನವಾಗಿ ಪಾಲಿಸಿಕೊಂಡು ಬಂದಿದ್ದಾರೆಂಬುದು ಮಠದ ಇತಿಹಾಸದಿಂದ ಬಹು ಸ್ಪಷ್ಟವಾಗುತ್ತದೆ. ಹಾಗಿರುವಾಗ ಅಂತಹ ಒಂದು ಪ್ರಾಚೀನವಾದ ಗೌರವಾರ್ಹ ಗುರುಪರಂಪರೆಯ ಬಗ್ಗೆ ಆಗಾಗ ಮತ ಪರಿವರ್ತನೆ ಮಾಡುತ್ತಿದ್ದರು ಎನ್ನುವಂತಹ ದೋಷಪೂರಿತವಾದ ಸ್ವಕಪೋಲಕಲ್ಪಿತವಾದ ಆರೋಪ ಹೊರಿಸುವುದು ಸಜ್ಜನರ ಲಕ್ಷಣವಲ್ಲ. ಇಷ್ಟಕ್ಕಿಂತ ಹೆಚ್ಚಾಗಿ ಈ ಬಗ್ಗೆ ಹೇಳಬಯಸುವುದಿಲ್ಲ.

ಇನ್ನು ಕೊನೆಯದಾಗಿ ಲೇಖಕರು ಉದಹರಿಸಿರುವ "ಪುರುಷಾರ್ಥ ಪ್ರಬೋಧ" ದ ವಿವೇಚನೆ ಮಾಡುತ್ತೇನೆ.

ಕರ್ನಾಟಕದ ಸುಪ್ರಸಿದ್ಧ ಇತಿಹಾಸ ಸಂಶೋಧಕರಾದ ಶ್ರೀ ಕಪಟರಾಳ ಕೃಷ್ಣರಾಯರು ಸುರಪುರದಲ್ಲಿ ತಮಗೆ ದೊರೆತ "ಪುರುಷಾರ್ಥ ಪ್ರಬೋಧ" ಎಂಬ ಸಂಸ್ಕೃತ ಗ್ರಂಥವೊಂದರ ಹಸ್ತಪ್ರತಿಯನ್ನು ಬೆಳಕಿಗೆ ತಂದು ಕನ್ನಡಿಗರಿಗೆ ಉಪಕಾರ ಮಾಡಿದ್ದಾರೆ.[41] ಆ ಗ್ರಂಥ ಇನ್ನೂ ಪ್ರಕಟವಾಗದೇ ಇರುವುದರಿಂದ ಅದರ ಬಗ್ಗೆ ಶ್ರೀ ಕೃಷ್ಣರಾಯರು ಹೇಳಿದಷ್ಟರಿಂದಲೇ ತಿಳಿದು ಬರುವ ವಿಷಯ ಸಂಗ್ರಹದಿಂದಲೇ ನಾವು ಸಧ್ಯಕ್ಕೆ ತೃಪ್ತರಾಗ ಬೇಕಾಗಿದೆ. ತಮಗೆ ದೊರೆತ ಹಸ್ತಪ್ರತಿಯನ್ನು ಆಮೂಲಾಗ್ರವಾಗಿ ನೋಡಿ ಅದರಿಂದ ಲಬ್ಧವಾಗುವ ಎಲ್ಲ ಐತಿಹಾಸಿಕ, ಧಾರ್ಮಿಕ ವಿಷಯಗಳನ್ನು ಹೊರತಂದಿದ್ದಾರೆ. ಕಪಟರಾಳ ಕೃಷ್ಣರಾಯರು ತಮ್ಮ ನಿಷ್ಠೆಗೆ ಪ್ರಾಮಾಣಿಕತೆಗೆ ಹೆಸರಾದ ಇತಿಹಾಸತಜ್ಞರು. ಅತಿಪ್ರಬಲಕಾರಣ ದೊರೆತ ಹೊರತು ಅವರ ಹೇಳಿಕೆಯನ್ನು ಸಲ್ಲದೆಂದು ತಳ್ಳಿಹಾಕಲು ಸಾಧ್ಯವಾಗುವುದಿಲ್ಲ. ಗ್ರಂಥದಲ್ಲಿ ದೊರೆತ ಆಂತರಿಕ

೪೧ "ಕರ್ನಾಟಕ ಸಂಸ್ಕೃತಿಯ ಸಂಶೋಧನೆ"–ಕಪಟರಾಳ ಕೃಷ್ಣರಾಯರು "ಪುರುಷಾರ್ಥ ಪ್ರಬೋಧ" ಪು. ೨೬೨–೨೩೦.

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಮಾಣಗಳೆಲ್ಲವನ್ನೂ ಪರಿಶೀಲನೆ ಮಾಡಿ ಕೃಷ್ಣರಾಯರು ಈ ಕೃತಿಯ ಕರ್ತೃ ಬ್ರಹ್ಮಾನಂದ ಭಾರತೀ ಎಂದೂ, ಆತನ ಗುರು ಶ್ರೀ ವಾಗೀಂದ್ರ ರಾಮರಾಜ ಭಾರತೀ ಎಂದೂ, ಈ ಗುರುಶಿಷ್ಯರಿಬ್ಬರೂ ಶೃಂಗೇರಿ ಸಂಪ್ರದಾಯ ಭೂರಿವಾಳ ಪರಿಷತ್ತಿಗೆ ಸೇರಿದವರು ಎಂದೂ, ಈ ಕವಿಯ ಕಾಲ ಸುಮಾರು 1386 ಇರ ಬೇಕು ಎಂದೂ ನಿರ್ಧರಿಸಿದ್ದಾರೆ. ಈ ಕೃತಿಯ ಬಗ್ಗೆ ಕೃಷ್ಣರಾಯರು ಇದು ಶುದ್ಧವೈದಿಕ ಶೈವ ಸಂಪ್ರದಾಯವನ್ನು ಪ್ರತಿಪಾದಿಸುವ ಕೃತಿ ಎಂದು ಹೇಳಿ ದ್ದಾರೆ. ಇದಾವುದರ ಬಗ್ಗೆಯೂ ನಮಗೆ ಭಿನ್ನಾಭಿಪ್ರಾಯವಿರಲು ಕಾರಣವೇ ಇಲ್ಲ, ಆದರೆ ಈ ಗ್ರಂಥ ಲೇಖಕರಿಗೂ ಆಧಾರ ಗ್ರಂಥವಾಗಲಾರದು. ಬ್ರಹ್ಮಾ ನಂದ ಭಾರತಿ ಈ ಗ್ರಂಥದಲ್ಲಿ ಶುದ್ಧ ವೈದಿಕ ಶೈವ ಮತ ಪ್ರತಿಪಾದನೆ ಮಾಡಿ ದ್ದಾನೆ ಎನ್ನುವ ಕಾರಣಕ್ಕಾಗಿಯೇ ಆ ಸಂಪ್ರದಾಯಕ್ಕೆ ಸೇರಿದವನೆಂದಾಗಲೀ, ಜಂಗಮ ಸಂಪ್ರದಾಯದವನೆಂದಾಗಲೀ, ಶೃಂಗೇರಿಯದೂ ಜಂಗಮಸಂಪ್ರ ದಾಯವೆಂದಾಗಲೀ ಹೇಗೆ ಹೇಗೆಯೂ ಸೂಚಿತವಾಗುವುದಿಲ್ಲ. ಈ ಕೃತಿಯನ್ನು ತಮ್ಮ ವಾದಕ್ಕೆ ಉದಹರಿಸುವಾಗ ಇದ್ದ ವಿಷಯಗಳೆಲ್ಲವನ್ನೂ ಹೇಳದೆ ಬ್ರಹ್ಮಾನಂದ ಭಾರತಿಗೂ ಅಪಚಾರ ಮಾಡಿದ್ದಾರೆ. ಈ ಗ್ರಂಥದ ಆಂತರಿಕ ಪ್ರಮಾಣದಿಂದ ಈ ಗ್ರಂಥ ಶುದ್ಧವೈದಿಕ ಸಿದ್ಧಾಂತವನ್ನು ವಿವರಿಸುವುದಾದರೂ, ಇದರ ಕರ್ತೃ ಆ ಸಂಪ್ರದಾಯಕ್ಕೆ ಸೇರಿದವನಲ್ಲ ಎನ್ನುವುದು ಕೃಷ್ಣರಾಯರ ಲೇಖನದಿಂದ ಸ್ಪಷ್ಟವಾಗುತ್ತದೆ- ಶುದ್ಧ ಶೈವಸಂಪ್ರದಾಯವಿರುವ ಈ ಗ್ರಂಥ ದಲ್ಲಿ ವಿಷ್ಣುವಿನ ಅರ್ಚನೆಗೆ ಮೀಸಲಾದ ಒಂದು ಅಧ್ಯಾಯವಿದೆ. ಅಲ್ಲದೆ ಶುದ್ಧವೈದಿಕ ಶೈವ ಸಂಪ್ರದಾಯವನ್ನು ಪ್ರತಿಪಾದಿಸುವ ತನ್ನ ಗ್ರಂಥದ ಮುಕ್ತಾಯದಲ್ಲಿ ಇದೇ ಮುಕ್ತಿಗೆ ಮಾರ್ಗವೆಂದು ಹೇಳದೆ, ತದ್ವಿರುದ್ಧವಾಗಿ, ಅದ್ವೈತಪರವಾದ" ವಾಕ್ಯಾರ್ಥ ಜ್ಞಾನತೋ ಮುಕ್ತಿರಿತಿ ವೇದಾಂತ ಡಿಂಡಿಭಿಃ" ಎಂದು ಸ್ಪಷ್ಟವಾಗಿ ಹೇಳಿದ್ದಾನೆ. ಅಂದರೆ ಮಹಾ ವಾಕ್ಯಗಳ ಅರ್ಥವನ್ನು ಅರಿತುಕೊಳ್ಳುವುದೊಂದೇ ಮುಕ್ತಿಗೆ ಮಾರ್ಗ ಎಂದು ಸ್ಪಷ್ಟ ವಾಗಿದೆ. ಹಾಗಿರುವಾಗ ಗ್ರಂಥದಲ್ಲಿ ಪ್ರತಿಪಾದಿತವಾದ ಸಂಪ್ರದಾಯವನ್ನು ಕೃರ್ತೃವಿಗೆ ಆರೋಪಿಸುವುದು ತರ್ಕಸಮಂಜಸವಲ್ಲ. ಅಲ್ಲದೆ ಬ್ರಹ್ಮಾನಂದ ಭಾರತೀಯು ಈ ಗ್ರಂಥವನ್ನು ತನ್ನ ಗುರುವಿನ ಪ್ರೇರಣೆಯಿಂದಾಗಲೀ, ತನ ಮಾರ್ಗವನ್ನು ಪ್ರತಿಪಾದಿಸುತ್ತೇನೆ ಎಂದಾಗಲೀ ಎಲ್ಲೂ ಹೇಳಿಲ್ಲ, ಅದಕ್ಕೆ ಪ್ರತಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಯಾಗಿ ಕೃತಿಯ ಬಗ್ಗೆ "ಶ್ರೀ ಸಾಂಬ ಮಹಾದೇವ ಪ್ರೇರಿತ" ಎಂದು ಬಹು ಸ್ಪಷ್ಟವಾಗಿ ಹೇಳಿದೆ. ಶ್ರೀ ಸಾಂಬ ಮಹಾದೇವ ಎಂಬ ಶುದ್ಧಶೈವ ಸಂಪ್ರದಾಯಕ್ಕೆ ಸೇರಿದ ಮಹನೀಯರು, ಬ್ರಹ್ಮಾನಂದ ಭಾರತಿ ಈ ಗ್ರಂಥವನ್ನು ಬರೆಯಲು ಪ್ರೇರೇಪಣೆ ನೀಡಿರಬೇಕು. ತಾನು ಕೈಗೊಂಡ ಕಾರ್ಯವನ್ನು ಬ್ರಹ್ಮಾನಂದ ಭಾರತಿ ಅತ್ಯಂತ ಪ್ರಾಮಾಣಿಕವಾಗಿ ನಿರ್ವಹಿಸಿದ್ದಾನೆ. ಶುದ್ಧ ವೈದಿಕಶೈವಾಚಾರದ ಬಗ್ಗೆ ಆ ಸಂಪ್ರದಾಯದ ಪ್ರಾಚೀನ ಪಾರಿಭಾಷಿಕ ಪದಗಳನ್ನೇ ಅಲ್ಲದೆ, ಸಮಕಾಲೀನರಿಗೂ ಅರ್ಥವಾಗಲೆಂದು, ತನ್ನ ಕಾಲದಲ್ಲಿ ಪ್ರಚಲಿತವಿದ್ದ ಪಾರಿಭಾಷಿಕ ಶಬ್ದಗಳನ್ನೂ ಆಚರಣೆಗಳನ್ನೂ ಹೇಳಿದ್ದಾನೆ. ಇಷ್ಟರಿಂದ ಆ ಕರ್ತೃ ಜಂಗಮ ಸಂಪ್ರದಾಯಕ್ಕೆ ಸೇರಿದವನೆಂದು ಸ್ಪಷ್ಟವಾಗಲಾರದು. ತನ್ನದು, ತನ್ನ ಗುರುವಿನದು ಆ ಸಂಪ್ರದಾಯವಾಗಿದ್ದಿದ್ದರೆ ಹಾಗೆಂದು ಹೇಳಲು ಸಂಕೋಚಪಡಲು ಬ್ರಹ್ಮಾನಂದ ಭಾರತಿಗೆ ಏನು ಕಾರಣವೂ ಇರಲಿಲ್ಲ. ಇಷ್ಟೆಲ್ಲವನ್ನೂ ಹೇಳುವ ಬ್ರಹ್ಮಾನಂದ ಭಾರತಿ ಈ ವಿಷಯವನ್ನು ಹೇಳಬೇಕಾಗಿದ್ದರೆ ಈ ಗ್ರಂಥರಚನೆಗಿಂತಲೂ ಬೇರೆ ಉತ್ತಮ ಅವಕಾಶ ಇರಲಿಲ್ಲ. ಆದ್ದರಿಂದ ಇದಾವ ಪ್ರಮಾಣವೂ ಇಲ್ಲದೆ ಗ್ರಂಥವಿಷಯದಿಂದ ಕರ್ತೃವಿನ ಜಾತಿ ನಿಷ್ಕರ್ಷೆಮಾಡುವ ಪ್ರಯತ್ನ ತರ್ಕಸಮ್ಮತವಾದುದಲ್ಲ. ಎಂ. ಆರ್. ಶ್ರೀನಿವಾಸಮೂರ್ತಿಗಳು, ಅ. ನ. ಕೃಷ್ಣರಾಯರು ವೀರಶೈವ ಧರ್ಮದ ಬಗ್ಗೆ ಬರೆದಿದ್ದಾರೆ. ಹಾಗೆಂದರೆ ಅವರು ವೀರಶೈವರೆ ? ರಾಜರತ್ನಂ ಬೌದ್ಧ ಧರ್ಮದ ಬಗ್ಗೆ ಬರೆದಿದ್ದಾರೆ, ಅವರು ಬೌದ್ಧರೆ ? ಭಾರತೀಯ ದರ್ಶನದ ಬಗ್ಗೆ ಮಾಕ್ಸ್‌ಮುಲ್ಲರ್, ವೀಬರ್, ಮ್ಯಾಕ್‌ಡೊನೆಲ್, ಪಾಲ್ ಡಾಯಸನ್, ಗೋಲ್ಡ್‌ಸ್ಟಕರ್, ಈ ಮೊದಲಾದವರು ಬ್ರಾಹ್ಮಣರೋ, ಶೈವರೋ, ಮಾಧ್ವರೊ, ಶ್ರೀ ವೈಷ್ಣವರೋ, ಕ್ರಿಶ್ಚಿಯನ್ನರೋ, ಯಾವ ಮತಕ್ಕೆ ಸೇರಿದವರು ? ಹೀಗೆ ಕೃತಿಯಿಂದ ಕರ್ತೃವಿನ ಮತವನ್ನು ಅಳೆಯ ಹೊರಟರೆ ಆ ಪ್ರಯತ್ನ ಹಾಸ್ಯಾಸ್ಪದವಾಗುತ್ತದೆ. ಹಾಗೆ ಮಾಡುವುದು ವಾದವೂ ಅಲ್ಲ, ತರ್ಕವೂ ಅಲ್ಲ. ಅದು ಹಾಗಿರಲಿ ಲೇಖಕರು ಯಾವ ಸಿದ್ಧಾಂತವನ್ನು ಮಾಡ ಹೊರಟಿದ್ದಾರೋ ಅದಕ್ಕೆ ಈ "ಪುರುಷಾರ್ಥ ಪ್ರಬೋಧ ಒಂದು ದೊಡ್ಡ ಸಿಡಿಮದ್ದು. ಲೇಖಕರು ಶೃಂಗೇರಿಯ ಪೀಠ ಶಂಕರಾಚಾರ್ಯರಿಂದ ಸ್ಥಾಪಿತವಾದದ್ದಲ್ಲ ಎಂದು ಹೇಳುತ್ತಾರೆ. ಬ್ರಹ್ಮಾನಂದ ಭಾರತಿ ಶೃಂಗೇರಿಯು [illegible] ಹೇಳಿದ್ದಾನೆ. ವಿದ್ಯಾ

Sri Vidyabharathi Book Centre, Sringeri

CC-O. In Public Domain. Digitized by eGangotri

ರಣ್ಯರ ಸಮಕಾಲೀನನಾಗಿದ್ದು, ವಿದ್ಯಾರಣ್ಯರನ್ನೂ ಭಾರತೀತೀರ್ಥರನ್ನೂ
ಹಲವಾರು ಬಾರಿ ತನ್ನ ಗುರು ಎಂದು ಹೇಳಿಕೊಂಡ ಬ್ರಹ್ಮಾನಂದ ಭಾರತಿ–
ಈತನ ಕಾಲ 1386 ವಿದ್ಯಾರಣ್ಯರ ಬಗ್ಗೆ ಅವರ ಗುರು ಪೀಠದ ಬಗ್ಗೆ ಸಮ
ಕಾಲೀನವಾದ ಎಲ್ಲಾ ವಿಷಯಗಳನ್ನೂ ಕರತಲಾಮಲಕವಾಗಿ ಅರಿತವನಾಗಿರ
ಬೇಕು. ಅಂತಹ ಬ್ರಹ್ಮಾನಂದ ಭಾರತಿ ವಿದ್ಯಾರಣ್ಯರಿಗೆ ಕ್ರಿಯಾಶಕ್ತಿ ಎಂಬ
ಪೂರ್ವನಾಮ ಇತ್ತು ಎಂದು ಏಕೆ ಹೇಳಿಲ್ಲ ? ಅವರ ಪೀಠದಲ್ಲಿ ರೇವಣಸಿದ್ಧ
ಪರಂಪರೆಯಿತ್ತು ಎಂದು ಏಕೆ ಹೇಳಿಲ್ಲ ? ಇವೆಲ್ಲವೂ ಇಪ್ಪತ್ತನೇ ಶತಮಾನದ
ಕಲ್ಪನಾವಿಲಾಸ ಜನಿತವಾದ ಕೃತ್ರಿಮ ಶಿಶುಗಳು. ಎಂತಲೇ ಸಮಕಾಲೀನ
ರಾಹೂ ಈ ಪ್ರಸ್ತಾಪ ಮಾಡಿಲ್ಲ. ಆದ್ದರಿಂದ ಈ ಆಧಾರಗಳನ್ನು ಉಲ್ಲೇಖಿಸಿ
ತಮ್ಮ ಸಿದ್ಧಾಂತವನ್ನು ಮಂಡಿಸುತ್ತೇನೆ ಎಂದು ಹೊರಟಿರುವ ಲೇಖಕರದು
ಕೇವಲ ಡಾನ್‌ಕ್ವಿಕ್ಸೋಟನ ಸಾಹಸ. ಅವರು ಬರೆದ ಲೇಖನ ವಿಜಯನಗರ
ಸಾಮ್ರಾಜ್ಯದ ಸ್ಥಾಪಕರ ಬಗೆಯಾಗಲೀ, ಅಥವಾ ಅದರ ಸ್ಥಾಪನಾಚಾರ್ಯರ
ಬಗೆಯಾಗಲೀ, ಆ ಪರಂಪರೆಗೆ ಸೇರಿದ ಗುರುಗಳ ಬಗ್ಗೆಯಾಗಲೀ, ತರ್ಕ
ಸಮ್ಮತವಾದ ಪ್ರಾಮಾಣಿಕವಾದ ಯಾವ ಮಾತನ್ನೂ ಹೇಳದೆ, ಶಾಸನ,
ಸಮಕಾಲೀನ ಸಾಹಿತ್ಯ, ಮೊದಲಾದವುಗಳಿಲ್ಲವನ್ನೂ ವಿರೂಪಗೊಳಿಸಿ,
ಅಪ್ರಾಮಾಣಿಕ ಕೃತಿಗಳನ್ನು ಪ್ರಾಮಾಣಿಕವೆಂದು ಉದ್ಘೋಷಿಸಿ ಎತ್ತಿ ಹಿಡಿ
ದಿರುವ ಅಪಸಿದ್ಧಾಂತ. ಶ್ರೀ ಮಲ್ಲಪ್ಪನವರು ಕನ್ನಡಿಗರಿಗೆ ಸೃಷ್ಟಿಸಿಕೊಟ್ಟಿರುವ
'ಕ್ರಿಯಾಶಕ್ತಿ ವಿದ್ಯಾರಣ್ಯ' ಅವರ ಭ್ರಮಾಜನಿತ ಭೂತವಲ್ಲದೆ, ಐತಿಹಾಸಿಕ
ವ್ಯಕ್ತಿಯೂ ಅಲ್ಲ, ಐತಿಹಾಸಿಕ ಸತ್ಯವೂ ಅಲ್ಲ. ಇದು ಹುಟ್ಟಿತು ಎಂದು
ಸಂತೋಷಪಡಬೇಕಾಗಿಯೂ ಇಲ್ಲ ; ಇದು ಸತ್ತಿತು ಎಂದು ದುಃಖಪಡ
ಬೇಕಾಗಿಯೂ ಇಲ್ಲ !

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಮುಂಬರಲಿರುವ ಕೃತಿಗಳು

ಶ್ರೀ ವಿದ್ಯಾತೀರ್ಥ
ಶ್ರೀ ಶೃಂಗೇರಿ ಚಂದ್ರಮೌಳೀಶ್ವರ
ರಾಜಯೋಗ ಶ್ರೀ ನರಸಿಂಹ ಭಾರತೀ
ಶೃಂಗೇರಿಯ ಶಾಸನಗಳು

ವಿವರಗಳಿಗೆ :

ವಿದ್ಯಾಶಂಕರ ಪ್ರಕಾಶನ
೩೦, ದೇವೀರಮ್ಮಣ್ಣೀ ಅಗ್ರಹಾರ
ಮೈಸೂರು-೪

Sri Vidyabharathi Book Centre, Sringeri